Visit **Dwarkadheeshvastu.com** For

FREE **Vastu Consultancy, Music, Epics, Devotional Videos**
Educational Books, Educational Videos, Wallpapers

****

All Music is also available in **CD** format. **CD Cover** can also be print with your Firm Name

****

We also provide this whole Music and Data in **PENDRIVE** and **EXTERNAL HARD DISK.**

Contact : Ankit Mishra (+91-8010381364, dwarkadheeshvastu@gmail.com)

AA Jhgfj% AA

L=h;k d fy;s dr0;

dUuM

॥ ಶ್ರೀ ಹರಿಃ ॥

ವಿಷಯ - ಸೂಚಿ

ಕ್ರ.ಸಂಖ್ಯೆ	ವಿಷಯ	ಪುಟ ಸಂಖ್ಯೆ
1.	ವ್ಯವಹಾರ	5
2.	ಪತಿವ್ರತೆ ಶುಭಾ	11
3.	ಪತಿವ್ರತೆ ಸುಕಲಾ	16
4.	ಸ್ತ್ರೀಯರಿಗೆ ಸ್ವಾತಂತ್ರ್ಯ ನಿಷೇಧ	31
5.	ವಿವಾಹ	35
6.	ಅನುಚಿತ ಹಾಸ್ಯಗೇಲಿ ಮತ್ತು ಅಶ್ಲೀಲ ಹಾಡುಗಳ ವರ್ಜನೆ	37
7.	ಅನಾವಶ್ಯಕ ಭೋಜನ ತ್ಯಾಗದ ಅವಶ್ಯಕತೆ	39
8.	ಲಜ್ಜಾಶೀಲತೆ ಮತ್ತು ಪರಪುರುಷರ ತ್ಯಾಗ	40
9.	ಸದಾಚರಣೆ	44
10.	ಕನ್ಯೆಯರಿಗೆ ಉತ್ತಮ ಶಿಕ್ಷಣ	45
11.	ಆಲಸ್ಯ-ಪ್ರಮಾದ ತ್ಯಾಗದ ಅವಶ್ಯಕತೆ	46
12.	ವಿದ್ಯೆಯ ಉಪಯೋಗ	48
13.	ಸದ್ಗುಣಗಳ ಶಿಕ್ಷಣ	52
14.	ದ್ವಿಜ ಬಾಲಕರಿಗೆ ಯಜ್ಞೋಪವೀತ ಸಂಸ್ಕಾರ	56
15.	ವಿಪತ್ತಿನಲ್ಲೂ ಧರ್ಮವನ್ನು ಬಿಡಬಾರದು	59
16.	ಪತಿವ್ರತಾ ಧರ್ಮ	61
17.	ದ್ರೌಪದಿ - ಸತ್ಯಭಾಮಾ ಸಂವಾದ	74
18.	ಪತಿವ್ರತೆ ಶಾಂಡಿಲಿ	84
19.	ಭಗವಾನ್ ಶ್ರೀ ಕೃಷ್ಣನ ಉಪದೇಶ	90
20.	ಯಮರಾಜನ ಉಪದೇಶ	93
21.	ಪತಿವ್ರತಾ ಸತೀಯ ಮಹಿಮೆ	95
22.	ಪತಿವ್ರತಾ ಸಾವಿತ್ರೀ	97
23.	ಸತೀ ದಮಯಂತಿಯ ಕಥೆ	112
24.	ಶ್ರೀಲಕ್ಷ್ಮೀದೇವಿಯ ಉಪದೇಶ	130
25.	ಜರತ್ಕಾರು ಮುನಿಯ ಉಪದೇಶ	133
26.	ಸತೀ ಲೋಪಾಮುದ್ರೆಯ ಕಥೆ	135
27.	ವಿಧವೆಯರೊಡನೆ ವ್ಯವಹಾರ ಮತ್ತು ಅವರ ಧರ್ಮ	148
28.	ಕುಂತಿದೇವಿಯ ಕಥೆ	152
29.	ವಿಧವಾ ಸಹೋದರಿಯರ ಕರ್ತವ್ಯ	172

॥ ಓಂ ಶ್ರೀಪರಮಾತ್ಮನೇ ನಮಃ॥

ಸ್ತ್ರೀಯರಿಗೆ ಕರ್ತವ್ಯ ಶಿಕ್ಷಣ

1. ವ್ಯವಹಾರ

ಪ್ರತಿಯೊಬ್ಬ ಸ್ತ್ರೀಯೂ ತನ್ನ ತವರು ಮನೆಯ ಮತ್ತು ಗಂಡನ ಮನೆಯ ಎಲ್ಲರ ಜೊತೆಯೂ ಉತ್ತಮ ವ್ಯವಹಾರವಿಟ್ಟುಕೊಳ್ಳಬೇಕಾಗುದುದು ಆಗತ್ಯ. ಹಾಗೆ ವ್ಯವಹರಿಸುವ ಸಮಯದಲ್ಲಿ ಕೆಳಗೆ ಹೇಳಿದ ಮೂರು ಮಾತುಗಳನ್ನು ಗಮನದಲ್ಲಿಟ್ಟುಕೊಂಡರೆ ಆ ವ್ಯವಹಾರವು ಶ್ರೇಷ್ಠಮಟ್ಟದ್ದಾಗಿರುತ್ತದೆ.

೧) ಪ್ರತಿಯೊಂದು ವ್ಯವಹಾರ ಮಾಡುವ ಸಮಯದಲ್ಲಿ ಭಗವಂತನ ಸ್ಮರಣೆ ಮಾಡುತ್ತಿರಬೇಕು. ಆದು ಗೋಪಿಕಾಸ್ತ್ರೀಯರು ಮನೆಯ ಕೆಲಸ ಕಾರ್ಯಗಳನ್ನು ಮಾಡುತ್ತಿರುವಾಗ ಯಾವಾಗಲೂ ಶ್ರೀಕೃಷ್ಣನ ಧ್ಯಾನ ಮಾಡುತ್ತಿದ್ದಂತೆ ಇರಬೇಕು. ಶ್ರೀಮದ್ಭಾಗವತದಲ್ಲಿ ಹೀಗೆ ಹೇಳಿದೆ –

ಯಾ ದೋಹನೇಽವಹನನೇ ಮಥನೋಪಲೇಪ-
ಪ್ರೇಂಖೇಂಖನಾರ್ಭರುದಿತೋಕ್ಷಣಮಾರ್ಜನಾದೌ।
ಗಾಯನ್ತಿ ಚೈನಮನುರಕ್ತಧಿಯೋಽಶ್ರುಕಂಠ್ಯೋ
ಧನ್ಯಾ ವ್ರಜಸ್ತ್ರಿಯ ಉರುಕ್ರಮಚಿತ್ತಯಾನಾಃ ॥
(೧೦/೪೪/೧೫)

'ಹಸುಗಳ ಹಾಲು ಕರೆಯುವಾಗ, ಧಾನ್ಯವನ್ನು ಬಡಿದು ತೂರುವಾಗ, ಮೊಸರು ಕಡೆಯುವಾಗ, ಅಂಗಳವನ್ನು ಸಾರಿಸುವಾಗ, ಮಕ್ಕಳನ್ನು ತೊಟ್ಟಿಲಲ್ಲಿಟ್ಟು ತೂಗುವಾಗ, ಅಳುವ ಮಕ್ಕಳನ್ನು ಸಮಾಧಾನ ಪಡಿಸಲು ಜೋಗುಳ ಹಾಡುವಾಗ, ಮನೆಗೆ ನೀರನ್ನು ಚುಮುಕಿಸುವಾಗ, ಮತ್ತು ಕಸ ಗುಡಿಸುವಾಗ ಮುಂತಾದ ಕೆಲಸಗಳನ್ನು ಮಾಡುವಾಗ ಪ್ರೇಮಪೂರ್ಣ ಮನಸ್ಸಿನಿಂದ ಆನಂದಬಾಷ್ಪವನ್ನು ಸುರಿಸುತ್ತಾ ಶ್ರೀಕೃಷ್ಣನಲ್ಲಿಯೇ ಮನಸ್ಸನ್ನು ಲೀನಗೊಳಿಸಿರುವ ವ್ರಜವಾಸಿನಿಯರಾದ ಗೋಪಿಕಾ ಸ್ತ್ರೀಯರು ನಿಜವಾಗಿಯೂ ಧನ್ಯರು.'

೨) ಇತರರ ಜೊತೆ ವ್ಯವಹರಿಸುವಾಗ ಸ್ವಾರ್ಥ ರಹಿತರಾಗಿ ಅವರ ಹಿತ ದೃಷ್ಟಿಯೇ-ನಮ್ಮ ಗುರಿಯಾಗಬೇಕು.

೩) ಇನ್ನೊಬ್ಬರ ಒಳ್ಳೆಯ ಗುಣಗಳನ್ನು ಪರ್ಜಿಸಬೇಕೇ ಹೊರತು, ಅವರ ಅವಗುಣಗಳನ್ನು ಚರ್ಚಿಸಬಾರದು.

ಈ ರೀತಿ ಆಚರಣೆ ಮಾಡುವುದರಿಂದ ವ್ಯವಹಾರದಲ್ಲೂ ಸುಧಾರಣೆ ಉಂಟಾಗುತ್ತದೆ ಮತ್ತು ಎಲ್ಲರ ಜೊತೆ ಪ್ರೀತಿ ವಿಶ್ವಾಸಗಳೂ ಹೆಚ್ಚುತ್ತವೆ. ಮನೆಯಲ್ಲಿ ತಮಗಿಂತಲೂ ವಯಸ್ಸಾದ ಸ್ತ್ರೀ-ಪುರುಷರಿದ್ದರೆ ಶ್ರದ್ಧೆಯಿಂದ ಅವರ ಆಜ್ಞಾಪಾಲನೆಯನ್ನೂ ಮತ್ತು ಸೇವೆಯನ್ನೂ ಮಾಡಬೇಕು, ಹಾಗೆಯೇ ಅವರ ಚರಣಗಳಿಗೆ ನಿತ್ಯ ನಮಸ್ಕರಿಸಲೂ ಬೇಕು. ಸ್ತ್ರೀಯೂ ಪತಿಯ ಚರಣ ಸ್ಪರ್ಶಿಸಿ ನಮಸ್ಕಾರ ಮಾಡಬೇಕು. ಪತಿಯ ಹೊರತು ಪರ ಪುರುಷರಿಗೆ ದೂರದಿಂದಲೇ ಕೈಜೋಡಿಸಿ ಭೂಮಿಯಲ್ಲಿ ಮಸ್ತಕವನ್ನಿಟ್ಟು ಪ್ರಣಾಮ ಮಾಡಬೇಕು. ತನ್ನ ಸಮಾನ ವಯಸ್ಕರಿಗೆ ಅದರ ಸತ್ಕಾರಗಳಿಂದಲೂ, ನಿಸ್ವಾರ್ಥ ಪ್ರೇಮ ಭಾವದಿಂದಲೂ ಸುಖವನ್ನುಂಟು ಮಾಡಲು ಪ್ರಯತ್ನಿಸಬೇಕು. ತಮಗಿಂತ ಚಿಕ್ಕವರಾಗಿದ್ದರೆ ಅವರ ಹಿತದಕಡೆ ವಿಶೇಷ ಗಮನಕೊಟ್ಟು ವಾತ್ಸಲ್ಯದಿಂದ ಅವರನ್ನು ಸಲಹಬೇಕು. ಬಾಲಕರ ಗುಣ, ಸ್ವಭಾವ ಮತ್ತು ಚಾರಿತ್ರ್ಯವು ಚೆನ್ನಾಗಿ ಇರಬೇಕಾದರೆ, ತಮ್ಮ ಉತ್ಕೃಷ್ಟತಮ ಚಾರಿತ್ರ್ಯವನ್ನು ಅವರಿಗೂ ಅನುಸರಿಸುವಂತೆ ಮಾಡಬೇಕು. ಅದೇ ರೀತಿಯ ಶಿಕ್ಷಣವನ್ನು ಅವರಿಗೆ ಕೊಡಬೇಕು. ತಾಯಿಯ ಉಪದೇಶಕ್ಕಿಂತಲೂ ಅವಳ ಆಚರಣೆಯ ಪ್ರಭಾವ ಬಾಲಕರ ಮೇಲೆ ಹೆಚ್ಚಾಗಿ ಆಗುತ್ತದೆ. ಮಕ್ಕಳಿಗೆ ಮಾತೆಯೇ ಪ್ರಥಮ ಗುರುವಾಗಿರುತ್ತಾಳೆ. ತುಳಸೀ ರಾಮಾಯಣದಲ್ಲಿ ಸುಮಿತ್ರೆಯು ತನ್ನ ಮಗಲಕ್ಷ್ಮಣನಿಗೆ ಕೊಡುವ ಉತ್ತಮ ಉಪದೇಶವನ್ನು ನೋಡಿ –

ತಾತ ತುಮ್ಹಾರಿ ಮಾತು ಬೈದೇಹೀ । ಪಿತಾ ರಾಮು ಸಬ ಭಾಂತಿ ಸನೇಹೀ ॥
ಅವಧ ತಹಾ ಜಹ ರಾಮನಿವಾಸೂ । ತಹಿ ದಿವಸು ಜಹ ಭಾನು ಪ್ರಕಾಸೂ ॥
ಜೌ ಪೈ ಸೀಯ ರಾಮು ಬನ ಜಾಹೀ । ಅವಧ ತುಮ್ಹಾರ ಕಾಜು ಕಛು ನಾಹೀ ॥
ಗುರು ಪಿತು ಮಾತು ಬಂಧು ಸುರ ಸಾಈ । ಸೇಇಅಹಿ ಸಕಲ ಪ್ರಾನ ಕೀ ನಾಈ ॥

ಪುತ್ರವತೀ ಜುಬತೀ ಜಗ ಸೋಈ । ರಘುಪತಿ ಭಗತು ಜಾಸು ಸುತ ಹೋಈ ॥
ಸತರು ಬಾಂಝೂ ಭಲಿ ಬಾದಿ ಬಿಆನೀ । ರಾಮ ಬಿಮುಖ ಸುತ ತೇ ಹಿತ ಜಾನೀ ॥
ತುಮ್ಹರೇಹಿ ಭಾಗ ರಾಮು ಬನ ಜಾಹೀ । ದೂಸರ ಹೇತು ತಾತ ಕಛು ನಾಹೀ ॥
ಸಕಲ ಪ್ರಕಾರ ಬಿಕಾರ ಬಿಹಾಈ । ಮನ ಕ್ರಮ ಬಚನ ಕರೇಹು ಸೇವಕಾಈ ॥
ತೋಹಿ ಪ ರಾಮು ಬನ ಲಹಹಿ ಕಲೇಸೂ । ಸುತ ಸೋಇ ಕರೆಹು ಇಹಇ ಉಪದೇಸೂ ॥

"ಮಗು ! ಎಲ್ಲ ರೀತಿಯಿಂದಲೂ ನಿನ್ನ ತಾಯಿ ಸೀತೆ, ನಿನ್ನ ತಂದೆ ಶ್ರೀರಾಮನೇ ಎಂದು ತಿಳಿ. ಸೂರ್ಯ ಪ್ರಕಾಶವಿರುವ ಕಡೆ ದಿವಸವಾಗಿರುವಂತೆ, ಶ್ರೀರಾಮನಿರುವ ಜಾಗವೇ ಅಯೋಧ್ಯೆಯಾಗಿರುತ್ತದೆ. ನಿಶ್ಚಯವಾಗಿಯೂ ಶ್ರೀರಾಮ-ಸೀತೆಯರು ವನಗಮನ ಮಾಡಿದರೆ ಇಲ್ಲಿ ಅಯೋಧ್ಯೆಯಲ್ಲಿ ನಿನಗೆ ಏನೂ ಕೆಲಸವಿರುವುದಿಲ್ಲ. ಗುರು, ತಂದೆ, ತಾಯಿ, ಸಹೋದರ, ದೇವತೆ ಮತ್ತು ಯಜಮಾನ - ಇವರೆಲ್ಲರ ಸೇವೆಯನ್ನು ಪ್ರಾಣಕ್ಕೆ ಸಮಾನವಾಗಿ ಮಾಡಬೇಕು. ಶ್ರೀರಾಮಚಂದ್ರನ ಭಕ್ತರಾಗಿರುವಂತಹ ಪುರುಷರಿಗೆ ಜನ್ಮ ಕೊಟ್ಟ ಸ್ತ್ರೀಯು ವಿಶ್ವದಲ್ಲಿ ಪುತ್ರವತೀ ಎನಿಸಿಕೊಳ್ಳುತ್ತಾಳೆ. ಇದಲ್ಲದೆ ರಾಮನಿಂದ ವಿಮುಖನಾದ ಮಗನಿಂದಲೇ ತನ್ನ ಹಿತವಾಗುವುದೆಂದು ತಿಳಿದಿರುವ ತಾಯಿಯನ್ನು ಬಂಜೆಯೆಂದೇ ತಿಳಿಯಬೇಕು. ಎಲ್ಲ ವಿಕಾರಗಳನ್ನು ತ್ಯಾಗಮಾಡಿ ಕಾಯಾ ವಾಚಾ ಮನಸಾ ಶ್ರೀರಾಮ - ಸೀತೆಯರ ಸೇವೆಯನ್ನು ಮಾಡಬೇಕು. ಶ್ರೀರಾಮನಿಗೆ ಯಾವ ರೀತಿಯ ಕ್ಲೇಶವುಂಟಾಗದಂತಹ ಕೆಲಸವನ್ನೇ ನೀನು ಮಾಡು. ಇದೇ ನಾನು ನಿನಗೆ ಕೊಡುವ ಉಪದೇಶವಾಗಿದೆ'.

ವಾಲ್ಮೀಕಿ ರಾಮಾಯಣದಲ್ಲಿ ಬಹುತೇಕವಾಗಿ ಇದೇ ರೀತಿ ಹೇಳಿದೆ –

ರಾಮಂ ದಶರಥಂವಿದ್ಧಿ ಮಾಂ ವಿದ್ಧಿ ಜನಕಾತ್ಮಜಾಮ್ ।
ಅಯೋಧ್ಯಾಮಟವೀಂ ವಿದ್ಧಿ ಗಚ್ಛ ತಾತ ಯಥಾಸುಖಮ್ ॥

(೨/೪೦/೯)

ಮಗು ! ಶ್ರೀರಾಮನನ್ನು ತಂದೆ ದಶರಥನೆಂದೂ, ಸೀತೆಯನ್ನು ಮಾತೆ (ನಾನೇ) ಯೆಂದೂ, ವನವನ್ನು ಅಯೋಧ್ಯೆಯೆಂದೂ ತಿಳಿದು ನೀನು ಸುಖವಾಗಿ ವನಕ್ಕೆ ಹೋಗು.

ಹೀಗೆ ರಾಜಾ ಖಿತುಧ್ವಜನ ಧರ್ಮಪತ್ನೀ ಮದಾಲಸೆಯು ಒಬ್ಬ ಶ್ರೇಷ್ಠವಿದುಷಿಯಾಗಿದ್ದಳು. ಅವಳ ಕಥೆಯು ಮಾರ್ಕಂಡೇಯ ಪುರಾಣದಲ್ಲಿ ವಿಸ್ತಾರವಾಗಿ ಬಂದಿರುವುದನ್ನು ನೋಡಬಹುದು. ಅವಳು ಬಾಲ್ಯದಲ್ಲಿಯೇ ಜ್ಞಾನೋಪದೇಶವನ್ನು ನೀಡಿ ತನ್ನ ಮಕ್ಕಳನ್ನು ಜ್ಞಾನಿಗಳನ್ನಾಗಿ ಮಾಡಿದ್ದಳು* ಮದಾಲಸೆಯು ತನ್ನ ಗರ್ಭದಲ್ಲಿ ಜನಿಸಿದ ಬಾಲಕನು ಮತ್ತೆ ಬೇರೊಬ್ಬ ತಾಯಿಯ ಗರ್ಭದಲ್ಲಿ ಜನ್ಮತಾಳುವಂತಹ ಸಂದರ್ಭ ಬಂದರೆ ಅದು ತನಗೆ ಅತ್ಯಂತ ಲಜ್ಜಾಸ್ಪದವೆಂದು ಭಾವಿಸಿದ್ದಳು.

ಮನೆಯವರೊಂದಿಗಾಗಲೀ, ಹೊರಗಿನ ಜನರೊಂದಿಗಾಗಲೀ ವ್ಯವಹರಿಸುವ ಸಮಯದಲ್ಲಿ ಸ್ತ್ರೀಯರಿಗೆ ಮಾತಿನ ಮೇಲೆ ಹಿಡಿತವಿರಬೇಕು. ಅಶ್ಲೀಲವಾದ, ಅಶುದ್ಧವಾದ, ಕಟುವಾದ, ವ್ಯಂಗ್ಯ ಕುಂಚಿದ, ಮನಸ್ಸಿಗೆ ನೋವನ್ನುಂಟುಮಾಡುವ ಮತ್ತು ವ್ಯರ್ಥವಾದ ಮಾತುಗಳನ್ನಾಡದೆ, ಪರಿಮಿತವಾದ, ಸತ್ಯವಾದ, ಪ್ರಿಯವಾದ ಮತ್ತು ಹಿತವಾದ ಮಾತುಗಳನ್ನೇ ಆಡಬೇಕು. ಉಪಯೋಗಿಸುವ ಶಬ್ದಗಳು ಉತ್ತಮ ಅರ್ಥವುಳ್ಳವುಗಳಾಗಿಯೂ, ಭಾವಪೂರ್ಣವೂ ಆಗಿರಬೇಕು. ಇದರ ಪ್ರಭಾವವು ಎಲ್ಲರ ಮೇಲೆ ಚೆನ್ನಾಗಿಯೇ ಉಂಟಾಗುತ್ತದೆ. ಮಾತನಾಡುವವರ ಹಿತವೂ ಅದರಲ್ಲಿಯೇ ಇದೆ. ಯಾರಿಗೂ ಹಿಂಸೆಯಾಗದಂತೆ ಎಲ್ಲರಲ್ಲೂ ನಿಃಸ್ವಾರ್ಥ, ವಿನಯ, ಜಾತಿ, ಗುಣ ಆಚರಣೆ, ಜ್ಞಾನ – ಮುಂತಾದ ಯಾವುದೇ ದೃಷ್ಟಿಯಿಂದ ಪೂಜ್ಯ ಹಾಗೂ ಹಿರಿಯರಾಗಿರುವವರಿಗೆ ನಮಸ್ಕರಿಸಿ ನಿಃಸ್ವಾರ್ಥ ಭಾವದಿಂದಲೂ, ಆದರ ಪೂರ್ವಕವಾಗಿಯೂ ಅವರನ್ನು ಸೇವಿಸಬೇಕು. ಪರಪುರುಷರ ದರ್ಶನ ಮಾಡುವುದು, ಅವರೊಡನೆ ಸಂಭಾಷಣೆ ನಡೆಸುವುದು,

---

* ಮದಾಲಸೆಯು ತನ್ನ ಮಗನಿಗೆ ಈ ಪ್ರಕಾರ ಹೇಳಿಕಿದ್ದಳು –

ಶುದ್ಧೋಽಸಿ ರೇ ತಾತ ನ ತೇಽಸ್ತಿ ನಾಮ ಕೃತಂ ಹಿ ತೇ ಕಲ್ಪನಯಾಧುನೈವ ।
ಪಂಚಾತ್ಮಕಂ ದೇಹಮಿದಂ ನ ತೇಽಸ್ತಿ ನೈವಾಸ್ಯ ತ್ವಂ ರೋದಿಷಿ ಕಸ್ಯ ಹೇತೋಃ ॥

(ಮಾರ್ಕಂಡೇಯ ಪುರಾಣ ೨೩-೧೧)

ಮಗು ! ನೀನು ಶುದ್ಧಾತ್ಮನು, ನಿನಗೆ ಯಾವ ಹೆಸರು ಇಲ್ಲ. ಈ ಕಲ್ಪಿತ ಹೆಸರು ನಿನಗೆ ಈಗತಾನೇ ಇಕ್ಕಿದೆ. ಈ ಶರೀರವು ಪಂಚಭೂತಗಳಿಂದಾಗಿದೆ. ಇದು ನಿನ್ನದಲ್ಲ, ನೀನು ಇದರವನೂ ಅಲ್ಲ. ಹೀಗಿರುವಾಗ ನೀನು ಅಳುವುದೇಕೇ?

ಸ್ಪರ್ಶಿಸುವುದು, ಏಕಾಂತವಾಗಿರುವುದು, ಅವರ ಬಗೆಗೆ ಚಿಂತಿಸುವುದು ಮುಂತಾದವನ್ನು ಪೂರ್ಣವಾಗಿ ತ್ಯಜಿಸಬೇಕು. ವಿಶೇಷ ಅವಶ್ಯಕ ಕಾರ್ಯದ ಸಮಯದಲ್ಲಿ ದೊಡ್ಡವರನ್ನು ತಂದೆಯಂತೆಯೂ ಸಮಾನ ವಯಸ್ಕರನ್ನು ಸಹೋದರ ರಂತೆಯೂ, ಚಿಕ್ಕವರನ್ನು ಮಗನಂತೆಯೂ ಭಾವಿಸಿ ದೃಷ್ಟಿ ಕೆಳಗೆ ಮಾಡಿ ಅಲ್ಪಶಬ್ದಗಳಲ್ಲಿ ಅವಶ್ಯಕತಾನುಸಾರ ನೀತಿ ಮತ್ತು ಧರ್ಮಯುಕ್ತ ಮಾತುಗಳನ್ನಾಡಬೇಕು.

ಪದ್ಮಪುರಾಣದಲ್ಲಿ ಹೀಗೆ ಹೇಳಿದೆ –

ಸುವೇಷಂ ಯಾ ನರಂ ದೃಷ್ಟಾ ಭ್ರಾತರಂ ಪಿತರಂ ಸುತಮ್ ।
ಮನ್ಯತೇ ಚ ಪರಂ ಸಾಧ್ವೀ ಸಾ ಚ ಭಾರ್ಯಾ ಪತಿವ್ರತಾ ॥

(ಸೃಷ್ಟಿ ೪೭/೬೦)

"ಯಾವ ಸಾಧ್ವಿಯು ಸುಂದರ ವೇಷಧಾರಿ ಪರಪುರುಷನನ್ನು ನೋಡಿ ಅವನನ್ನು ಸಹೋದರ, ತಂದೆ, ಅಥವಾ ಪುತ್ರನೆಂದು ತಿಳಿಯುವಳೋ ಅವಳು ಪತಿವ್ರತೆಯೇ ಸರಿ"

ಸ್ತ್ರೀಯರು ಶೌಚಾಚಾರ, ಸದಾಚಾರ ಹಾಗೂ ಅಂತರಂಗದ ಪಾವಿತ್ರ್ಯದ ಬಗ್ಗೆ ವಿಶೇಷ ಗಮನ ಕೊಡಬೇಕು. ಶರೀರ ಮತ್ತು ಮನೆಯ ಸ್ವಚ್ಛತೆ ಮುಂತಾದವು ಶೌಚಾಚಾರದ ಅಂಗಗಳು. ಹಾಗೆಯೇ ಎಲ್ಲರೊಡನೆ ಉತ್ತಮವಾಗಿ ವ್ಯವಹರಿಸುವುದು ಸದಾಚಾರ. ಶೌಚಾಚಾರ ಮತ್ತು ಸದಾಚಾರ ಗಳೆರಡೂ ಅಂತರಂಗದ ಪಾವಿತ್ರ್ಯಕ್ಕೆ ಬಹುವಾಗಿ ಸಹಾಯಕವಾಗಿವೆ. ಕಾಮ-ಕ್ರೋಧ, ಲೋಭ-ಮೋಹ, ಅಭಿಮಾನ-ಅಹಂಕಾರ, ರಾಗ-ದ್ವೇಷ, ಮದ-ಮತ್ಸರ ಆದಿ ದುರ್ಗುಣಗಳ ಅಭಾವ ಹಾಗೂ ಪೂರ್ವ ಸಂಚಿತ ಪಾಪಗಳ ನಾಶವೇ ಅಂತರಂಗದ ಪಾವಿತ್ರ್ಯ. ಅದ್ದರಿಂದ ಇವುಗಳ ನಾಶಕ್ಕಾಗಿ ವಿಶೇಷ ಪ್ರಯತ್ನ ಮಾಡಬೇಕು. ಆಧ್ಯಾತ್ಮಿಕ, ಧಾರ್ಮಿಕ, ನೈತಿಕ, ಸಾಮಾಜಿಕ ಮತ್ತು ವ್ಯಾವಹಾರಿಕ ಶಿಕ್ಷಣದ ಪುಸ್ತಕಗಳನ್ನು ಸ್ವತಃ ಓದಿ ಬಾಲಕರಿಗೂ ಓದಿಸಬೇಕು.

ಭಕ್ತಿ, ಜ್ಞಾನ, ವೈರಾಗ್ಯಗಳನ್ನು ತಿಳಿಸುವ ಗೀತೆ, ರಾಮಾಯಣ, ಭಾಗವತ ಮುಂತಾದ ಆಧ್ಯಾತ್ಮಿಕ ಗ್ರಂಥಗಳಿವೆ. ಮನುಸ್ಮೃತಿ, ಯಾಜ್ಞವಲ್ಕ್ಯ ಸ್ಮೃತಿ,

ಪರಾಶರ ಸ್ಮೃತಿ ಮುಂತಾದ ಧಾರ್ಮಿಕ ಗ್ರಂಥಗಳೂ, ವಿದುರ ನೀತಿ, ಚಾಣಕ್ಯ ನೀತಿ, ಶುಕ್ರ ನೀತಿ ಮುಂತಾದ ನೀತಿ ಪುಸ್ತಕಗಳೂ ಇವೆ. ಈ ಪುಸ್ತಕಗಳಲ್ಲಿ ಹಾಗೂ ಮಹಾಭಾರತ ಮುಂತಾದ ಇತಿಹಾಸ ಮತ್ತು ಪದ್ಮಪುರಾಣ ಮುಂತಾದ ಪುರಾಣಗಳಲ್ಲಿ ಸಾಮಾಜಿಕ ಮತ್ತು ವ್ಯಾವಹಾರಿಕ ವಿಷಯಗಳ ವರ್ಣನೆಗಳು ಅಲ್ಲಲ್ಲಿ ಕಂಡುಬರುತ್ತವೆ. ಮನೆಯಲ್ಲಿ ಎಲ್ಲರೂ ಕಲೆತು ಒಂದು ಗಂಟೆ ಈ ಗ್ರಂಥಗಳನ್ನು ಓದಿ-ಓದಿಸಿದರೆ ಎಲ್ಲರಿಗೂ ಶಾಸ್ತ್ರ ಜ್ಞಾನ – ಅನುಭವಗಳು ಸ್ವಾಭಾವಿಕವಾಗಿ ಉಂಟಾಗುತ್ತವೆ.

ಸ್ತ್ರೀಯರೂ ದೈಹಿಕವಾಗಿ ಸದಾ ಕೆಲಸ ಮಾಡುತ್ತಾ ತಮ್ಮನ್ನು ಪರಿಶ್ರಮಿ ಜೀವಿಗಳನ್ನಾಗಿ ಮಾಡಿಕೊಳ್ಳಬೇಕು. ಹಿಟ್ಟು ಬೀಸುವುದು, ಅಡಿಗೆ ಮಾಡುವುದು, ಪಾತ್ರೆ ತೊಳೆಯುವುದು ಮುಂತಾದ ಗೃಹ ಕಾರ್ಯಗಳನ್ನು ಕರ್ತವ್ಯ ಪರಾಯಣತೆಯಿಂದ ಧೈರ್ಯೋತ್ಸಾಹಗಳಿಂದ ಮಾಡಬೇಕು. ಕಸೂತಿ, ಬಟ್ಟೆ ಹೊಲೆಯುವುದು ಮುಂತಾದ ಕೈ ಕೆಲಸಗಳನ್ನು ಅವಶ್ಯಕವಾಗಿ ಮಾಡಬೇಕು. ಹೀಗೆ ಮಾಡುವುದರಿಂದ ಬಲ, ಬುದ್ಧಿ, ಆರೋಗ್ಯ, ಉತ್ಸಾಹಗಳು ಹೆಚ್ಚಿ, ಶರೀರ ಮತ್ತು ಮನಸ್ಸಿಗೆ ಆನಂದವೂ, ಸ್ಫೂರ್ತಿಯೂ ಉಂಟಾಗುತ್ತದೆ. ಈ ಎಲ್ಲ ಕೆಲಸಗಳನ್ನು ಎಲ್ಲಾ ಹೆಣ್ಣು ಮಕ್ಕಳಿಗೂ ಅವರು ಕಲಿಸಿಕೊಡಬೇಕು. ಆಲಸ್ಯ ಪ್ರಮಾದ, ದುರ್ಗುಣ, ದುರಾಚಾರ, ಅಶ್ಲೀಲತೆ, ಮಾದಕ ವಸ್ತುಗಳ ಸೇವನೆ, ದುರ್ವ್ಯಸನ, ನಾಟಕ-ಸಿನಿಮಾ, ಕ್ಲಬ್, ಕ್ರೀಡಾ – ವಿನೋದ, ಐಸ್ಕೀಟು, ಪಗಡೆ ಚದುರಂಗ, ವ್ಯರ್ಥಖರ್ಚು ಮುಂತಾದ ಕೆಟ್ಟ ಚಟಗಳಿಂದ ಸುತರಾಂ ದೂರವಿರಬೇಕು.

ಯಂತ್ರ-ಮಂತ್ರ, ತಾಯಿತ, ಮಾಟ ಮುಂತಾದವುಗಳನ್ನು ಸುಳ್ಳು-ಭ್ರಮೆಯೆಂದು ತಿಳಿದು ಸ್ತ್ರೀಯರು ಅವುಗಳ ಬಲೆಗೆ ಸಿಲುಕಬಾರದು. ಸ್ತ್ರೀಯರಿಗೆ ಲಜ್ಜೆಯೇ ಭೂಷಣವಾದುದರಿಂದ ಶಾಸ್ತ್ರದ ಮರ್ಯಾದೆಗೆ ವಿಶೇಷವಾಗಿ ಗಮನ ಕೊಡಬೇಕು. ಯಾರೊಂದಿಗೂ ಸಹ ಪರಿಹಾಸ ಮಾಡಬಾರದು.

ಮುತ್ತೈದೆ ಸ್ತ್ರೀಯರಿಗೆ ಪತಿವ್ರತಾ ಧರ್ಮವು ಅತ್ಯಂತ ಮಹತ್ವದ ವಸ್ತುವಾಗಿದೆ. ಪತಿವ್ರತಾ ಧರ್ಮಪಾಲನೆಯಿಂದ ಸ್ತ್ರೀಯರಿಗೆ ತ್ರಿಕಾಲಜ್ಞಾನ

ವುಂಟಾಗುತ್ತದೆ. ಅವಳು ತನ್ನ ಪತಿಯೊಡನೆ ಪರಮಪದ-ಭಗವಂತನ ಪರಂಧಾಮವನ್ನು ಹೊಂದುತ್ತಾಳೆ. ಇದಕ್ಕಾಗಿ ಸ್ತ್ರೀಯರು ಪದ್ಮಪುರಾಣದ ಸೃಷ್ಟಿಖಂಡದಲ್ಲಿ ಬರುವ ನರೋತ್ತಮ ಬ್ರಾಹ್ಮಣನ ಕಥೆಯಲ್ಲಿ ವರ್ಣಿತವಾಗಿರುವ 'ಶುಭಾ' ಎಂಬ ಹೆಸರಿನ ಪತಿವ್ರತಾ ಸ್ತ್ರೀಯರ ವೃತ್ತಾಂತವನ್ನು ತಿಳಿಯಬೇಕು.

❑❑

2. ಪತಿವ್ರತೆ ಶುಭಾ

ಪ್ರಾಚೀನ ಕಾಲದಲ್ಲಿ ನರೋತ್ತಮ ಎಂಬ ಹೆಸರಿನ ಪ್ರಸಿದ್ಧನಾದ ಒಬ್ಬ ಬ್ರಾಹ್ಮಣನಿದ್ದನು. ಅವನು ತನ್ನ ತಂದೆ ತಾಯಿಗಳನ್ನು ತ್ಯಜಿಸಿ ತೀರ್ಥಯಾತ್ರೆಗೆ ಹೊರಟನು. ತೀರ್ಥಕ್ಷೇತ್ರಗಳ ಪರ್ಯಟನೆ ಮಾಡುತ್ತಿರುವಾಗ ಅವನ ವಸ್ತ್ರಗಳು ಪ್ರತಿದಿನವೂ ಆಕಾಶದಲ್ಲಿ ಯಾವ ಆಧಾರವಿಲ್ಲದೆ ಒಣಗುತ್ತಿದ್ದವು. ಇದರಿಂದ ಅವನು ಅಹಂಕಾರವಶನಾಗಿ 'ನನ್ನಂತಹ ಪುಣ್ಯಾತ್ಮನಾದವನು ಮತ್ತು ಕೀರ್ತಿವಂತನಾದವನು ಯಾರೂ ಇಲ್ಲವೆಂದು ಹೇಳುತ್ತಿದ್ದನು. ಒಂದು ದಿನ ಒಂದು ಪಕ್ಷಿಯು ಅವನ ಮೇಲೆ ಹೇಸಿಗೆ ಮಾಡಿತು. ಬ್ರಾಹ್ಮಣನು ಸಿಟ್ಟಿಗೊಂಡು ಅದನ್ನು ತಪಿಸಿದನು. ಶಾಪದಿಂದ ಪಕ್ಷಿಯು ಭಸ್ಮವಾಯಿತು. ಈ ಶಾಪದ ಕಾರಣ ಅವನ ವಸ್ತ್ರಗಳು ಮೊದಲಿನ ಹಾಗೆ ಆಕಾಶದಲ್ಲಿ ನಿಲ್ಲದೆ ಕೆಳಗೆ ಬೀಳುತ್ತಿದ್ದವು. ಇದರಿಂದ ಅವನಿಗೆ ಬಹಳ ದುಃಖವಾಯಿತು. ಆಗ ಅಶರೀರವಾಣಿ ಕೇಳಿ ಬಂದು 'ನೀನು ಧರ್ಮಾತ್ಮಾ ಮೂಕಚಾಂಡಾಲನ ಹತ್ತಿರ ಹೋಗಿ ಧರ್ಮಜ್ಞಾನವನ್ನು ಪಡೆ' ಎಂದು ಆಜ್ಞೆಯಾಯಿತು.

ಇದನ್ನು ಕೇಳಿ ನರೋತ್ತಮನು ಮೂಕಚಾಂಡಾಲನ ಹತ್ತಿರ ಹೋದನು. ಆ ಸಮಯದಲ್ಲಿ ಮೂಕಚಾಂಡಾಲನು ತನ್ನ ತಂದೆ-ತಾಯಿಗಳ ಸೇವೆಯಲ್ಲಿ ಮಗ್ನನಾಗಿದ್ದನು. ನರೋತ್ತಮನು ಅವನಲ್ಲಿ – 'ನೀನು ಇಲ್ಲಿ ನನ್ನ ಹತ್ತಿರ ಬಾ. ನಾನು ನಿನ್ನಲ್ಲಿ ಎಲ್ಲರಿಗೂ ಹಿತಕಾರಿಯಾದ ಸನಾತನ ಮಾತುಗಳನ್ನು ಕೇಳುತ್ತೇನೆ. ಅದನ್ನು ನೀನು ಸರಿಯಾಗಿ ಹೇಳು' ಎಂದು ಕೇಳಿದನು.

ಅದಕ್ಕೆ ಮೂಕ ಚಾಂಡಾಲನು ಹೇಳಿದನು – 'ನಾನು ನನ್ನ ತಂದೆ

ಕಾಯಿಗಳ ಸೇವೆಯನ್ನು ಮಾಡಿದ ನಂತರ ತಮ್ಮ ಅವಶ್ಯಕತೆಗಳನ್ನು ಪೂರ್ಣಮಾಡುತ್ತೇನೆ. ಅಲ್ಲಿಯವರೆಗೆ ಸ್ವಲ್ಪ ತಡೆಯಿರಿ' ಈ ಮಾತನ್ನು ಕೇಳಿ ನರೋತ್ತಮನು ಕೋಪೋದ್ದೀಪಿತನಾದನು. ಆಗ ಬಾಂಡಾಲನು ನೀವು ವ್ಯರ್ಥವಾಗಿ ಏಕೆ ಕೋಪಿಸಿಕೊಳ್ಳುತ್ತೀರಿ ? ನಾನು ಆ ಪಕ್ಷಿಯಲ್ಲ. ಈಗ ತಮ್ಮ ಪಂಚಕೆಯು ಆಕಾಶದಲ್ಲಿ ಆಧಾರವಿಲ್ಲದೆ ನಿಲ್ಲುವುದಿಲ್ಲ. ಅಶರೀರವಾಣಿಯನ್ನು ಕೇಳಿ ತಾವು ಇಲ್ಲಿಗೆ ಬಂದಿದ್ದೀರಿ. ನೀವು ಸ್ವಲ್ಪ ಕಾಲ ತಡೆದರೆ ನಾನು ತಮ್ಮ ಪ್ರಶ್ನೆಗಳಿಗೆ ಉತ್ತರ ಕೊಡುತ್ತೇನೆ. ಇಲ್ಲದೇ ಹೋದರೆ ತಾವು ಪತಿವ್ರತೆಯಾದ ಶುಭಾಳ ಹತ್ತಿರ ಹೋಗಿ.' ಎಂದು ಹೇಳಿದನು.

ಅನಂತರ ಯಾವಾಗಲೂ ಬ್ರಾಹ್ಮಣ ರೂಪದಲ್ಲಿ ಬಾಂಡಾಲನ ಮನೆಯಲ್ಲಿ ವಾಸ ಮಾಡುತ್ತಿದ್ದ ಭಗವಾನ್ ಶ್ರೀ ವಿಷ್ಣುವು ತಾನು ಹೊರ ಬಂದು ನರೋತ್ತಮನಿಗೆ 'ನಡಿ ! ನಾನೂ ಪತಿವ್ರತಾದೇವಿಯ ಮನೆಗೆ ಬರುತ್ತೇನೆ' ಎಂದು ಹೇಳಿದನು. ನರೋತ್ತಮನು ಸ್ವಲ್ಪ ಹೊತ್ತು ಯೋಚಿಸಿ ಅವನ ಜೊತೆ ಹೊರಟನು. ದಾರಿಯಲ್ಲಿ ಅವನು – 'ಆ ಪತಿವ್ರತೆಯು ಯಾರು? ಅವಳಿಗೆ ಶಾಸ್ತ್ರಜ್ಞಾನವೆಷ್ಟು ಗೊತ್ತು ? ಆ ಪತಿವ್ರತೆಯ ಲಕ್ಷಣಗಳೇನು? ಈ ವಿಚಾರಗಳನ್ನು ತಾವು ಸರಿಯಾಗಿ ತಿಳಿಸಿ' ಎಂದು ಕೇಳಿದನು.

ಬ್ರಾಹ್ಮಣ ರೂಪದ ಭಗವಾನ್ ವಿಷ್ಣುವು ಹೇಳಿದನು–"ಬ್ರಾಹ್ಮಣನೇ ! ನದಿಗಳಲ್ಲಿ ಗಂಗೆ, ಸ್ತ್ರೀಯರಲ್ಲಿ ಪತಿವ್ರತೆ ಮತ್ತು ದೇವತೆಗಳಲ್ಲಿ ಭಗವಾನ್ ವಿಷ್ಣು ಶ್ರೇಷ್ಠರಾಗಿರುವರು. ಯಾವ ಪತಿವ್ರತಾ ಸ್ತ್ರೀಯು ಪ್ರತಿದಿನವೂ ತನ್ನ ಪತಿಯ ಹಿತಸಾಧನೆಯಲ್ಲಿ ತೊಡಗಿರುವಳೋ ಅವಳು ತನ್ನ ತವರು ಮನೆ ಮತ್ತು ಗಂಡನ ಮನೆ ಎರಡೂ ವಂಶದ ಉದ್ಧಾರವನ್ನು ಮಾಡುತ್ತಾಳೆ. ಯಾವ ಸ್ತ್ರೀಯು ತನ್ನ ಪುತ್ರನಿಗಿಂತಲೂ ನೂರರಷ್ಟು ಸ್ನೇಹದಿಂದ ಪತಿಯ ಸೇವೆ ಮಾಡುವಳೋ, ರಾಜನಿಗೆ ಹೆದರಿ ನಡೆಯುವಂತೆ ಪತಿಗೆ ಹೆದರಿ ನಡೆಯುವಳೋ ಮತ್ತು ಅವನನ್ನು ಭಗವಂತನ ಸ್ವರೂಪವೆಂದೇ ತಿಳಿದು ಸೇವೆ ಮಾಡುವಳೋ ಅವಳೇ ಪತಿವ್ರತೆ. ಯಾರು ಪತಿಯೊಡನೆ ಗೃಹಕಾರ್ಯದಲ್ಲಿ ದಾಸಿಯಂತೆಯೂ, ರಮಿಸುವಾಗ ನಲ್ಲೆಯಂತೆಯೂ ಹಾಗೂ

ಭೋಜನ ಕಾಲದಲ್ಲಿ ಮಾತೆಯಂತೆಯೂ ನಡೆದುಕೊಳ್ಳುವಳೋ ಮತ್ತು ವಿಪತ್ಕಾಲದಲ್ಲಿ ಅಪಸಿಗೆ ಉತ್ತಮ ಸಲಹೆಕೊಟ್ಟು ಮಂತ್ರಿಯಂತೆ ವರ್ತಿಸುವಳೋ, ಅಂತಹವಳನ್ನು ಪತಿವ್ರತೆಯೆಂದು ಹೇಳುತ್ತಾರೆ. ಯಾರು ಮನದಿಂದಲೂ, ವಾಣಿಯಿಂದಲೂ, ಶರೀರದಿಂದಲೂ ಮತ್ತು ಕ್ರಿಯೆಯಿಂದಲೂ ಎಂದೂ ಪತಿಯ ಆಜ್ಞೆಯನ್ನು ಉಲ್ಲಂಘಿಸುವುದಿಲ್ಲವೋ ಪತಿಯ ಭೋಜನದ ನಂತರ ಊಟಮಾಡುವಳೋ ಅಂತಹವಳನ್ನು ಪತಿವ್ರತೆಯೆಂದು ತಿಳಿಯಬೇಕು. ಶಯ್ಯೆಯಲ್ಲಿ ಪತಿಯು ಮಲಗಿದಾಗ ಪ್ರತಿದಿನವೂ ಹೃತ್ಪೂರ್ವವಾಗಿ ಅವನ ಸೇವೆ ಮಾಡುವಳೋ, ಯಾರ ಮನಸ್ಸಿನಲ್ಲಿ ಪತಿಯ ಬಗೆಗೆ ಈರ್ಷ್ಯೆ ಅಥವಾ ಅಸಹನೆ ಇರುವುದಿಲ್ಲವೋ, ಕೃಪಣತೆಯಿಂದ ದೂರವಿರುವಳೋ, ಮಾನವನ್ನು ಇಚ್ಛಿಸುವುದಿಲ್ಲವೋ, ಪತಿಯಿಂದ ಆದರ ಸಿಕ್ಕಲಿ ಬಿಡಲಿ ಸಮಸ್ಥಿತಿ ಯಲ್ಲಿರುವಳೋ, ಅಂತಹವಳನ್ನು ಪತಿವ್ರತೆಯಿಂದ ಹೇಳುತ್ತಾರೆ. ಯಾವ ಸ್ತ್ರೀಯು ಸುಂದರ ವೇಷಧಾರಿಯಾದ ಪರಪುರುಷ ನನ್ನು ನೋಡಿ, ಅವನನ್ನು ಸಹೋದರ, ತಂದೆ ಮತ್ತು ಪುತ್ರನ ಸಮಾನನೆಂದು ತಿಳಿಯುವಳೋ ಅವಳು ಪತಿವ್ರತೆ. ದ್ವಿಜಶ್ರೇಷ್ಠನೇ ! ನೀನು ಆ ಪತಿವ್ರತೆಯ ಹತ್ತಿರ ಹೋಗಿ ಅವಳಿಂದ ಹಿತವಚನಗಳನ್ನು ಕೇಳು. ಅವಳ ಹೆಸರು ಶುಭಾ. ಅವಳು ರೂಪವತಿಯಾದ ಯುವತಿ. ಅವಳ ಹೃದಯವು ದಯೆಯಿಂದ ತುಂಬಿದೆ.

ಹೀಗೆ ಹೇಳಿ ಭಗವಾನ್ ವಿಷ್ಣುವು ಅಂತರ್ಧಾನ ಹೊಂದಿದನು. ಇದರಿಂದ ಬ್ರಾಹ್ಮಣನಿಗೆ ಬಹಳ ಆಶ್ಚರ್ಯವಾಯಿತು. ಅವನು ಪತಿವ್ರತೆ ಶುಭೆಯ ಮನೆಗೆ ಹೋಗಿ ವಿಚಾರಿಸಿದನು. ಶುಭಾ ಕೂಡಲೆ ಬಾಗಿಲಿನ ಹತ್ತಿರ ಬಂದು ನಿಂತಳು. ನರೋತ್ತಮನು ಹೇಳಿದನು 'ದೇವಿ ! ನೀನು ನೋಡಿ ತಿಳಿದಿರುವ ಹಿತವಚನಗಳನ್ನು ನನಗೆ ಹೇಳು'.

ಪತಿವ್ರತೆಯು ಹೇಳಿದಳು –'ಬ್ರಾಹ್ಮಣೋತ್ತಮರೇ ! ಈಗ ನಾನು ನನ್ನ ಪತಿದೇವರ ಸೇವೆಯನ್ನು ಮಾಡಬೇಕಾಗಿದೆ. ಆದ್ದರಿಂದ ಈಗ ಸಮಯವಿಲ್ಲ. ನಿಮ್ಮ ಕೆಲಸವನ್ನು ಅನಂತರ ಮಾಡುತ್ತೇನೆ. ಈಗ ನನ್ನ ಆತಿಥ್ಯವನ್ನು ತಾವು ಸ್ವೀಕರಿಸಿ'. ನರೋತ್ತಮನು ಹೇಳಿದನು – 'ನನಗೆ ಹಸಿವು ಬಾಯಾರಿಕೆ, ಆಯಾಸ

ಯಾವುದೂ ಇಲ್ಲ. ನನಗೆ ಅಭೀಷ್ಟವಾದ ಮಾತುಗಳನ್ನು ಹೇಳು. ಇಲ್ಲವಾದರೆ ನಾನು ನಿನಗೆ ಶಾಪ ಕೊಡುತ್ತೇನೆ.'

ಇದಕ್ಕೆ ಉತ್ತರವಾಗಿ ಪತಿವ್ರತೆ ಹೇಳಿದಳು – 'ದ್ವಿಜಶ್ರೇಷ್ಠ ! ನಾನು ಆ ಪಕ್ಷಿಯಲ್ಲ. ತಾವು ಧರ್ಮತುಲಾಧಾರರ ಹತ್ತಿರ ಹೋಗಿ ಅವರಿಂದ ನಿಮಗೆ ಬೇಕಾದ ಹಿತವಚನಗಳನ್ನು ಕೇಳಿ'. ಇಷ್ಟು ಹೇಳಿ ಶುಭಾ ಮನೆಯೊಳಗೆ ಹೊರಟು ಹೋದಳು. ಅವಳ ಮಾತುಗಳನ್ನು ಕೇಳಿ ನರೋತ್ತಮ ಬ್ರಾಹ್ಮಣನಿಗೆ ಅತ್ಯಂತ ಆಶ್ಚರ್ಯವಾಯಿತು. ಆಗ ಭಗವಾನ್ ವಿಷ್ಣುವು ಬ್ರಾಹ್ಮಣ ವೇಷಧಾರಿಯಾಗಿ ಬಂದು, ಈ ಶುಭಾ ಪತಿವ್ರತೆಯಾಗಿದ್ದಾಳೆ. ಆದರಿಂದ ಇವಳು ಭೂತ, ಭವಿಷ್ಯ ಹಾಗೂ ವರ್ತಮಾನ ಈ ಮೂರು ಕಾಲಗಳ ವಿಚಾರಗಳನ್ನೂ ತಿಳಿದಿದ್ದಾಳೆಂದು ಹೇಳಿದನು.

ಪತಿವ್ರತೆ ಶುಭಾಳ ಪಾತಿವ್ರತ್ಯದ ಪ್ರತಾಪದಿಂದ ಭಗವಾನ್ ವಿಷ್ಣುವು ಅವಳ ಮನೆಯಲ್ಲಿಯೇ ಬ್ರಾಹ್ಮಣ ರೂಪದಿಂದ ವಾಸಿಸುತ್ತಿದ್ದನು. ಕೊನೆಯಲ್ಲಿ ಅವಳುಪತಿಸಹಿತ ಭಗವಂತನ ಪರಂಧಾಮವನ್ನೈದಿದಳು.

ಸ್ತ್ರೀಯರಿಗೆ ಪತಿವ್ರತಾ ಧರ್ಮವೇ ಅವರ ಶ್ರೇಯಸ್ಸಿಗೆ ಸುಗಮ ಸಾಧನವಾಗಿದೆ. ಇದನ್ನು ಸಾಧಿಸಲು ಯಾವ ಖರ್ಚು ಆಗುವುದಿಲ್ಲ, ಕಷ್ಟವೂ ಆಗುವುದಿಲ್ಲ. ಪಾತಿವ್ರತ್ಯ ಧರ್ಮ ಪಾಲನೆಯಿಂದ ಸ್ತ್ರೀಯರ ಕಲ್ಯಾಣ ಹೇಗೆ ಸಾಧ್ಯವೆಂದು ಯಾರಾದರೂ ಕೇಳಬಹುದು, ಅದು ಸರಿಯೇ ! ಸ್ತ್ರೀಯರು ಪಾತಿವ್ರತ್ಯ ಧರ್ಮಪಾಲನೆ ಮಾಡಿದರೆ ಅವರ ಕಲ್ಯಾಣವಾಗುತ್ತದೆಂದು ಶಾಸ್ತ್ರದಲ್ಲಿ ಹೇಳಿದೆ. ಶಾಸ್ತ್ರವು ಭಗವಂತನ ವಿಧಾನ. ಆದ್ದರಿಂದ ಭಗವಂತನು ವಿಧಿಸಿರುವ ನಿಯಮಗಳ ಅನುಸಾರವಾಗಿ ನಡೆಯುವುದರಿಂದ ಪರಮಾತ್ಮನ ಪ್ರಾಪ್ತಿಯಾಗುತ್ತದೆ.

'ಋತೇ ಜ್ಞಾನಾನ್ನ ಮುಕ್ತಿಃ' – ಜ್ಞಾನಪ್ರಾಪ್ತಿಯಾಗದೆ ಮುಕ್ತಿ ದೊರೆಯುವುದಿಲ್ಲ ಎಂದು ಹೇಳಿದೆ. ಅದು ಸರಿಯೆ ! ಪಾತಿವ್ರತ್ಯಧರ್ಮ ಪ್ರಭಾವದಿಂದ ಸ್ತ್ರೀಯ ರಾಗ-ದ್ವೇಷ ಮುಂತಾದ ದೋಷಗಳು ನಾಶವಾಗುತ್ತವೆ. ಅಂತಃಕರಣ ಶುದ್ಧವಾಗಿ ಅವಳಿಗೆ ಭಗವಂತನ ಕೃಪೆಯಿಂದ ಸ್ವತಃ ಜ್ಞಾನ ಸಿದ್ಧಿಯಾಗುತ್ತದೆ. ತನ್ನ ಅನುಕೂಲದಲ್ಲಿ ಪ್ರೀತಿ-ಹರ್ಷಗಳೂ ಹಾಗೂ

ಪ್ರತಿಕೂಲದಲ್ಲಿ ದ್ವೇಷ-ಶೋಕಗಳೂ ಉಂಟಾಗುವುದು ನಿಯಮವಾಗಿದೆ. ಆದರೆ ಯಾವುದಾದರೂ ಕಾರ್ಯವು ತನ್ನ ಪತಿಗೆ ಅನುಕೂಲವಾಗಿ ತನಗೆ ಪ್ರತಿಕೂಲವಾದರೂ ಪತಿವ್ರತಾ ಸ್ತ್ರೀಯು ತನ್ನ ಪ್ರತಿಕೂಲವನ್ನು ಲೆಕ್ಕಿಸದೇ ಪತಿಗೆ ಅನುಕೂಲಳಾಗಿಯೇ ನಡೆದುಕೊಳ್ಳುತ್ತಾಳೆ. ತನಗೆ ಅನುಕೂಲವಾಗಿ ಪತಿಗೆ ಪ್ರತಿಕೂಲವಾದರೆ ಆ ಕಾರ್ಯವನ್ನು ಖಂಡಿತ ಮಾಡುವುದಿಲ್ಲ. ಈ ರೀತಿ ತನ್ನ ಅನುಕೂಲ ಪ್ರತಿಕೂಲಗಳಿಗೆ ಪಾರಿಬಾರಿಯು ಆಘಾತವುಂಟಾಗುವುದರಿಂದ ಅನುಕೂಲ - ಪ್ರತಿಕೂಲ ಸ್ವಭಾವಗಳು ನಷ್ಟವಾಗುತ್ತವೆ. ಅದರಿಂದ ಆ ಸ್ವಭಾವಗಳಿಂದ ಉತ್ಪನ್ನವಾಗುವ ರಾಗ-ದ್ವೇಷಗಳು, ಹರ್ಷ-ಶೋಕ ಮುಂತಾದ ವಿಕಾರಗಳು ಇಲ್ಲವಾಗಿ ಅವಳ ಅಂತಃಕರಣ ಶುದ್ಧವಾಗುತ್ತದೆ. ಜೊತೆಗೆ ಭಗವತ್ಕೃಪೆಯಿಂದ ಪರಮಾತ್ಮಸ್ವರೂಪದ ಯಥಾರ್ಥ ಜ್ಞಾನ ಹೊಂದಿ ಪರಮಾತ್ಮನ ಸಾಕ್ಷಾತ್ಕಾರವನ್ನು ಪಡೆಯುತ್ತಾಳೆ. ಈ ಮಾತು ಶಾಸ್ತ್ರೋಕ್ತವಾದುದು ಹಾಗೂ ಯುಕ್ತಿಸಂಗತವಾದುದು.

ಪುರುಷನು ಯಜ್ಞ, ದಾನ, ತಪಸ್ಸು, ಹೋಮ, ನೇಮ, ಪೂಜೆ, ತೀರ್ಥ, ವ್ರತ ಮುಂತಾದ ಯಾವುದೇ ಕಾರ್ಯ ಮಾಡಲಿ, ತನ್ನ ಪತ್ನಿಯ ಜೊತೆಯಲ್ಲಿ ಮಾಡುವುದರಿಂದ ಆ ಕಾರ್ಯಗಳು ಸಫಲವಾಗುತ್ತವೆ. ಏಕೆಂದರೆ ವಿವಾಹ ಸಂಸ್ಕಾರದ ಸಮಯದಲ್ಲಿ ಪತ್ನಿಯ ಪ್ರಾರ್ಥನೆಯಂತೆ ಈ ಮಾತನ್ನು ಸ್ವೀಕರಿಸಿ ಅವಳೊಂದಿಗೆ ನಿಯಮಗಳಿಗೆ ಬದ್ಧನಾಗುತ್ತಾನೆ. ಇದರಿಂದ ಪತಿಯು ಮಾಡುವಂತಹ ಧಾರ್ಮಿಕ ಕೃತ್ಯಗಳಲ್ಲಿ ಪತ್ನಿಯೂ ಭಾಗಿಯಾಗುವುದರಿಂದ ಅವುಗಳ ಅರ್ಧಫಾಲಿಗೆ ಅವಳು ಭಾಗಿಯಾಗುತ್ತಾಳೆ. ಏಕೆಂದರೆ ಸ್ತ್ರೀಗೆ ವೈವಾಹಿಕ ವಿಧಿಯೇ ವೈದಿಕ ಸಂಸ್ಕಾರವೆಂದು ಪರಿಗಣಿಸಲಾಗಿದೆ. ಅವಳಿಗೆ ಪತಿ ಸೇವೆಯೇ ಗುರುಕುಲವಾಸ ಮತ್ತು ಗೃಹಕಾರ್ಯವೇ ಅಗ್ನಿಯ ಪರಿಚರ್ಯೆಯಾಗಿರುತ್ತದೆ.

ವೈವಾಹಿಕೋ ವಿಧಿಃ ಸ್ತ್ರೀಣಾಂ ಸಂಸ್ಕಾರೋ ವೈದಿಕಃ ಸ್ಮೃತಃ।
ಪತಿಸೇವಾ ಗುರೌ ವಾಸೋ ಗೃಹಾರ್ಥೋಽಗ್ನಿಪರಿಕ್ರಿಯಾ ॥

(ಮನುಃ ೨/೬೭)

'ಯಾವ ಪುರುಷನೇ ಆಗಲೀ ಯಾವುದೇ ಧಾರ್ಮಿಕ ಕೆಲಸವನ್ನು ಪತ್ನಿಯ

ಜೊತೆಯಿಲ್ಲದೆ ಒಂಟಿಯಾಗಿ ಮಾಡುತ್ತಾನೋ ಆ ಕಾರ್ಯವು ಸಫಲವಾಗುವುದಿಲ್ಲ. ಈ ವಿಷಯವಾಗಿ ಪದ್ಮಪುರಾಣದ ಭೂಮಿಖಂಡದಲ್ಲಿ ಕೃಕಲ ವೈಶ್ಯನ ಕಥೆಯಲ್ಲಿ ಸ್ಪಷ್ಟವಾಗಿ ಹೇಳಿದೆ. ಆ ಕಥೆಯನ್ನು ಇಲ್ಲಿ ಸಂಕ್ಷೇಪವಾಗಿ ಕೊಟ್ಟಿದೆ.

3. ಪತಿವ್ರತೆ ಸುಕಲಾ

ಕಾಶೀ ನಗರಿಯಲ್ಲಿ ಒಬ್ಬ ವೈಶ್ಯನಿದ್ದನು. ಅವನ ಹೆಸರು ಕೃಕಲ. ಅವನ ಪತ್ನಿಯು ಸಾಧ್ವಿಯೂ ಶ್ರೇಷ್ಠ ವ್ರತಗಳನ್ನು ಪಾಲನೆ ಮಾಡುವವಳೂ ಆಗಿದ್ದಳು. ಅವಳು ಯಾವಾಗಲೂ ಧರ್ಮಾಚರಣೆಯಲ್ಲಿ ನಿರತಳಾಗಿ ಪರಮ ಪತಿವ್ರತೆಯಾಗಿದ್ದಳು. ಅವಳ ಹೆಸರು ಸುಕಲಾ ಎಂದು. ಅವಳು ಸುಂದರಿಯೂ, ಮಂಗಳಮಯಿಯೂ, ಸತ್ಯವಾದಿನಿಯೂ, ಶುಭೆಯೂ, ಹಾಗೂ ಶುದ್ಧ ಸ್ವಭಾವದವಳು ಆಗಿದ್ದಳು. ಅವಳ ರೂಪವು ಬಹಳ ಮನೋಹರವಾಗಿತ್ತು. ಕೃಕಲ ವೈಶ್ಯನೂ ಸಹ ಧರ್ಮಜ್ಞನೂ, ವಿವೇಕಸಂಪನ್ನನೂ ಮತ್ತು ಸದ್ಗುಣಿಯೂ ಆಗಿದ್ದನು. ವೈದಿಕ ಹಾಗೂ ಪೌರಾಣಿಕ ಧರ್ಮಶ್ರವಣದಲ್ಲಿ ಅವನಿಗೆ ಬಹಳ ಅಭಿರುಚಿ ಇತ್ತು. ಅವನು ಪುರಾಣದಲ್ಲಿ ತೀರ್ಥಯಾತ್ರೆಯ ಸಂದರ್ಭ 'ತೀರ್ಥ ಸೇವನೆಯು ಬಹಳ ಪುಣ್ಯದಾಯಕವೂ, ಕಲ್ಯಾಣಕಾರಿಯೂ ಆಗಿದೆ' ಎಂದು ಕೇಳಿದ್ದನು. ಇದನ್ನು ಕೇಳಿದ ಅವನು ತೀರ್ಥಯಾತ್ರೆಗೆ ಹೋಗುವ ಬ್ರಾಹ್ಮಣರ ಮತ್ತು ವ್ಯಾಪಾರಿಗಳ ಜೊತೆ ತಾನೂ ಹೋಗಬೇಕೆಂಬುದಾಗಿ ಯೋಚಿಸಿದನು.

ಈ ಸಂದರ್ಭದಲ್ಲಿ ಸುಕಲೆಯು ಹೇಳಿದಳು – 'ಪ್ರಾಣನಾಥ ! ನಾನು ತಮ್ಮ ಧರ್ಮಪತ್ನೀ, ಪಾತಿವ್ರತ್ಯದ ಶ್ರೇಷ್ಠ ಧರ್ಮ ಪಾಲನೆಯನ್ನು ತಮ್ಮ ಛಾಯೆಯಂತೆ ನಾನು ಮಾಡುತ್ತೇನೆ. ಯಾವ ನಾರಿಯರಿಗೆ ಪಾಪನಾಶಕವೂ, ಸದ್ಗತಿಯನ್ನು ಕೊಡುವಂತಹುದಾಗಿದೆಯೋ ಆ ಪತಿಪಾರಾಣೆಯಾದ ಸ್ತ್ರೀಯೂ ಜಗತ್ತಿನಲ್ಲಿ ಪುಣ್ಯಮಯಿಯೆಂದು ಕರೆಸಿಕೊಳ್ಳುತ್ತಾಳೆ. ಸ್ತ್ರೀಯರಿಗೆ ಪತಿಯನ್ನು ಬಿಟ್ಟು ಇಹಲೋಕದಲ್ಲಿ ಸುಖವನ್ನೂ, ಪರಲೋಕದಲ್ಲಿ ಸ್ವರ್ಗ ಹಾಗೂ

ಪೋಕ್ಷವನ್ನೂ ಕೊಡುವಬೇರೆ ತೀರ್ಥವಿಲ್ಲ. ಸಾಧಶ್ರೇಷ್ಠ ಪತಿಯ ಬಲಚರಣವು ಪ್ರಯಾಗವು, ಎಡ ಚರಣವು ಪುಷ್ಕರವೆಂದೂ ತಿಳಿಯಿರಿ. ಯಾವ ಸ್ತ್ರೀಯು ಈ ಪ್ರಕಾರವಾಗಿ ತಿಳಿದು ಪತಿಯ ಚರಣೋದಕದಿಂದ ಸ್ನಾನ ಮಾಡಿದರೆ ಆ ತೀರ್ಥಗಳಲ್ಲಿ ಸ್ನಾನ ಮಾಡಿದ ಪುಣ್ಯವ್ಯಾಪ್ತವಾಗುತ್ತದೆ. ಏಕೆಂದರೆ ಸ್ತ್ರೀಯರಿಗೆ ಪತಿಯ ಚರಣೋದಕದ ಅಭೀಷೇಕವು ನಿಸ್ಸಂದೇಹವಾಗಿ ಪ್ರಯಾಗ-ಪುಷ್ಕರ ತೀರ್ಥಗಳಲ್ಲಿ ಸ್ನಾನ ಮಾಡುವುದಕ್ಕೆ ಸಮಾನವಾಗಿರುತ್ತದೆ. ಪತಿಯು ಎಲ್ಲ ತೀರ್ಥಗಳಿಗೆ ಸರಿಸಮಾನನೂ ಆಗಿರುತ್ತಾನೆ. ಪತಿಯು ಸಂಪೂರ್ಣ ಧರ್ಮದ ಸ್ವರೂಪವೂ ಹೌದು. ಯಜ್ಞದೀಕ್ಷೆಯನ್ನು ಹೊಂದಿ ಯಜ್ಞದ ಅನುಷ್ಠಾನ ಮಾಡುವುದರಿಂದ ಪುರುಷನಿಗೆ ಯಾವ ಪುಣ್ಯ ದೊರೆಯುವುದೋ ಅದೇ ಪುಣ್ಯವನ್ನು ಸಾಧ್ವಿಸ್ತ್ರೀಯು ತನ್ನ ಪತಿಯ ಪೂಜೆ ಮಾಡಿ ಪಡೆಯುತ್ತಾಳೆ. ಆದ್ದರಿಂದ ಪ್ರಿಯತಮ ! ನಾನೂ ತಮ್ಮ ಸೇವೆಯನ್ನು ಮಾಡುತ್ತಾ ತಮ್ಮ ಜೊತೆಯಲ್ಲೇ ತೀರ್ಥಕ್ಷೇತ್ರಗಳಿಗೆ ಬರುತ್ತೇನೆ. ತಮ್ಮ ಛಾಯೆಯಂತೆ ತಮ್ಮನ್ನು ಅನುಸರಿಸುತ್ತಾ ತಮ್ಮ ಜೊತೆಯಲ್ಲಿಯೇ ಹಿಂದಿರುಗುತ್ತೇನೆ.

ಆಗ ಕೃಕಲನು ಅವಳನ್ನು ಜೊತೆಯಲ್ಲಿ ಕರೆದುಕೊಂಡು ಹೋಗಲು ಒಪ್ಪಿಕೊಂಡನು. ಆದರೆ ಅವನು ಮನಸ್ಸಿನಲ್ಲಿ– 'ಚಳಿ ಮತ್ತು ಬಿಸಿಲಿನ ಕಾರಣದಿಂದ ಪುಣ್ಯಕ್ಷೇತ್ರಗಳ ದುರ್ಗಮ ದಾರಿಗಳಲ್ಲಿ ನಡೆಯಲು ಇವಳಿಗೆ ಬಹಳ ಕಷ್ಟವಾಗಬಹುದು. ಆದ್ದರಿಂದ ಇವಳನ್ನು ಜೊತೆಯಲ್ಲಿ ಕರೆದುಕೊಳ್ಳದೆ ನಾನೊಬ್ಬನೇ ಹೋಗುತ್ತೇನೆ'. ಎಂದು ಯೋಚಿಸಿ ಅವನು ರಾತ್ರಿಯಲ್ಲಿ ಯಾರಿಗೂ ತಿಳಿಸದೆ ತನ್ನ ಜೊತೆಯವರೊಡನೆ ಹೊರಟುಹೋದನು. ಸುಕಲೆಯು ಬೆಳಗ್ಗೆ ಎದ್ದುನೋಡಿದಾಗ ಮನೆಯಲ್ಲಿ ಪತಿಯು ಇರಲಿಲ್ಲ. ಪತಿದೇವನು ತೀರ್ಥಯಾತ್ರೆಗೆ ಹೋದುದನ್ನು ತಿಳಿದು ಪತಿಪರಾಯಣೆಯಾದ ಅವಳು 'ತನ್ನ ಪತಿಯು ಹಿಂದಿರುಗಿ ಬರುವವರೆಗೂ ತಾನು ನೆಲದ ಮೇಲೆ ಚಾಪೆಯ ಮೇಲೆ ಮಲಗುತ್ತೇನೆ. ತುಪ್ಪ ಎಣ್ಣೆ ಮತ್ತು ಹಾಲು-ಮೊಸರುಗಳನ್ನು ಸೇವಿಸುವುದಿಲ್ಲ. ಎಲೆ ಅಡಿಕೆ ಮತ್ತು ಉಪ್ಪನ್ನು ಸಹ ಉಪಯೋಗಿಸುವುದಿಲ್ಲ. ಬೆಲ್ಲ ಮೊದಲಾದ ಸಿಹಿ ಪದಾರ್ಥಗಳನ್ನು ಸೇವಿಸುವುದಿಲ್ಲ. ಪತಿಯು ಬರುವವರೆಗೂ ಒಂದೇ

ಹೊತ್ತು ಭೋಜನ ಮಾಡುತ್ತೇನೆ ಇಲ್ಲವೆ ಉಪವಾಸ ಮಾಡುತ್ತೇನೆ. ಎಂದು ಮನಸ್ಸಿನಲ್ಲಿ ನಿಶ್ಚಯಿಸಿದಳು.

ಈ ಪ್ರಕಾರ ವ್ರತವನ್ನು ಕೈಗೊಂಡು ಬಹಳ ದುಃಖದಿಂದ ದಿನಗಳನ್ನು ಕಳೆಯತೊಡಗಿದಳು. ಜಡೆ ಹೆಣೆದುಕೊಳ್ಳಲಿಲ್ಲ. ಒಂದೇ ವಸ್ತ್ರವನ್ನು ಧರಿಸಿ ತನ್ನ ಶರೀರವನ್ನು ಮುಚ್ಚಿಕೊಳ್ಳುತ್ತಿದ್ದಳು. ಅವಳ ವೇಷವು ಮಲಿನವಾಗಿತ್ತು. ಅವಳು ಒಂದೇ ಮಲಿನ ವಸ್ತ್ರವನ್ನು ಧರಿಸುತ್ತಿದ್ದಳು. ಈ ರೀತಿಯ ದುಃಖಿಮಯ ಜೀವನದಿಂದ ಅವಳು ಅತ್ಯಂತ ಕೃಶಳಾದಳು. ನಿರಂತರವಾಗಿ ಪತಿಯ ಯೋಚನೆಯಲ್ಲಿ ವ್ಯಾಕುಲಳಾಗಿ ಹಗಲೂ ರಾತ್ರಿ ರೋದಿಸುತ್ತಿದ್ದಳು. ರಾತ್ರಿಯಲ್ಲಿ ಅವಳಿಗೆ ನಿದ್ದೆಯು ಬರುತ್ತಿರಲಿಲ್ಲ ಹಸಿವೂ ಆಗುತ್ತಿರಲಿಲ್ಲ.

ಸುಕಲೆಯು ಈ ಸ್ಥಿತಿಯನ್ನು ನೋಡಿ ಅವಳ ಗೆಳತಿಯರು – 'ತಂಗೀ! ನೀನು ಹೀಗೆ ಏಕೆ ದುಃಖಿ ಪಡುತ್ತಿರುವೆ?' ಎಂದು ಕೇಳಲು, ಸುಕಲೆಯು 'ಸಖಿಯರೇ! ನನ್ನ ಧರ್ಮಪರಾಯಣನಾದ ಸ್ವಾಮಿಯು ನನ್ನನ್ನು ಬಿಟ್ಟು ತೀರ್ಥಯಾತ್ರೆಗೆ ಹೊರಟು ಹೋಗಿದ್ದಾರೆ. ಅವರ ವಿಯೋಗವು ನನ್ನಿಂದ ಸಹಿಸಲಾಗುತ್ತಿಲ್ಲ' ಎಂದು ಹೇಳಿದಳು.

ಸಖಿಯರು ಹೇಳುತ್ತಾರೆ – 'ಗೆಳತೀ! ನೀನು ವ್ಯರ್ಥವಾಗಿ ಶೋಕಿಸುತ್ತಿರುವೆ. ವೃಥಾ ಶರೀರವನ್ನು ದಂಡಿಸುತ್ತಿರುವೆ. ಅಕಾರಣವಾಗಿ ಸುಖವನ್ನು ತ್ಯಾಗ ಮಾಡುತ್ತಿರುವೆ. ಸಂತೋಷವಾಗಿ ತಿಂದು ಕುಡಿದುಕೊಂಡಿರು! ಏಕೆ ಕಷ್ಟ ಪಡುತ್ತಿರುವೆ? ಯಾರು ಯಾರಿಗೆ ಸ್ವಾಮಿ? ಯಾರು ಯಾರಿಗೆ ಪುತ್ರ? ಯಾರು ಯಾರಿಗೆ ಸಂಬಂಧಿ? ಈ ಪ್ರಪಂಚದಲ್ಲಿ ಯಾರಿಗೆ ಯಾರೂ ಇಲ್ಲ. ಯಾರ ಜೊತೆಗೂ ಶಾಶ್ವತ ಸಂಬಂಧವಿರುವುದಿಲ್ಲ. ಸಖೀ! ತಿನ್ನುವುದು-ಕುಡಿಯುವುದು ಸುಖ ಅನುಭವಿಸುವುದೇ ಈ ಪ್ರಪಂಚದ ಫಲ. ಮನುಷ್ಯ ಸತ್ತುಹೋದ ಮೇಲೆ ಯಾರು ಈ ಫಲಗಳನ್ನು ಉಪಭೋಗಿಸುತ್ತಾರೆ? ಮತ್ತೆ ಅದನ್ನು ನೋಡಲು ಯಾರು ಬರುತ್ತಾರೆ?'

ಸುಕಲೆಯು ಹೇಳಿದಳು – ಸಖಿಯರೇ! ನೀವು ಆಡುತ್ತಿರುವ ಮಾತುಗಳು ವೇದ ಶಾಸ್ತ್ರಗಳಿಗೆ ಸಮ್ಮತವಲ್ಲ. ತನ್ನ ಸ್ವಾಮಿಯಿಂದ ಬೇರೆಯಾಗಿ ಯಾವಾಗಲೂ

ಒಂಟಿಯಾಗಿರುವ ನಾರಿಯನ್ನು ಪಾಪಿನೀ ಎಂದು ತಿಳಿಯಲಾಗುತ್ತದೆ. ಶ್ರೇಷ್ಠ ಪುರುಷರು ಅವಳನ್ನು ಆದರಿಸುವುದಿಲ್ಲ. ಪತಿಯ ಜೊತೆ ನಾರಿಯ ಸಂಬಂಧ ಪೂರ್ವ ಸಂಚಿತ ಪುಣ್ಯ ಪ್ರಭಾವದಿಂದ ಮಾತ್ರ ಆಗುತ್ತದೆ. ಬೇರೆ ಯಾವ ಕಾರಣದಿಂದಲೂ ಅಲ್ಲವೆಂದು ವೇದದಲ್ಲಿ ಹೇಳಲ್ಪಟ್ಟಿದೆ. ಯಾವಾಗಲೂ ನಾರಿಯರಿಗೆ ಪತಿಯೇ ತೀರ್ಥರೂಪನೆಂಬುದು ಶಾಸ್ತ್ರ ವಚನವಿದೆ. ಆದ್ದರಿಂದ ಪತ್ನಿಯು ಮನಃಪೂರ್ವಕವಾಗಿ ಪತಿಸೇವೆಯಲ್ಲಿಯೇ ಮಗ್ನಳಾಗಿ ಪ್ರತಿದಿನವೂ ಕಾಯಾ, ವಾಚಾ, ಮನಸಾ ಮತ್ತು ಕ್ರಿಯೆಯ ಮೂಲಕ ಪತಿಯ ಆರಾಧನೆ ಮಾಡುವುದು ಹಾಗೂ ಪೂಜಿಸುವುದು ಉಚಿತವಾಗಿದೆ. ಗೃಹಿಣಿಯು ಪತಿಯ ಬಲಭಾಗದಲ್ಲಿ ಕುಳಿತು ದಾನ-ಪೂಜೆ ಮತ್ತು ಯಜ್ಞ ಮಾಡಿದರೆ ಅವಳಿಗೆ ಅತ್ಯಂತ ಹೆಚ್ಚು ಫಲ ಸಿಗುವುದಾಗಿ ಶಾಸ್ತ್ರಗಳಲ್ಲಿ ಹೇಳಿದೆ. ಅಂತಹ ಪುಣ್ಯಫಲವು ಕಾಶಿಯ ಗಂಗೆಯಲ್ಲಿ, ಪುಷ್ಕರ ತೀರ್ಥದಲ್ಲಿ, ದ್ವಾರಕಾಪುರಿಯಲ್ಲಿ, ಉಜ್ಜಯಿನಿ ಹಾಗೂ ಕೇದಾರ ತೀರ್ಥಗಳಲ್ಲಿ ಸ್ನಾನ ಮಾಡಿದರೂ ದೊರೆಯುವುದಿಲ್ಲ.

ಪತಿವ್ರತಾ ಸ್ತ್ರೀಗೆ ಪತಿಯ ಪ್ರಸನ್ನತೆಯಿಂದಲೇ ಉತ್ತಮ ಸುಖ ಸಂತಾನಸೌಭಾಗ್ಯ, ಸ್ನಾನ, ಪಾನ, ವಸ್ತ್ರ ಆಭೂಷಣ, ರೂಪ, ತೇಜ, ಫಲ, ಯಶಸ್ಸು, ಕೀರ್ತಿ ಮತ್ತು ಉತ್ತಮ ಗುಣ ಮುಂತಾದವು ದೊರೆಯುತ್ತವೆ. ಯಾರು ಪತಿಯಿದ್ದೂ ಅವನ ಸೇವೆ ಮಾಡುವುದನ್ನು ಬಿಟ್ಟು ಬೇರೆ ಧರ್ಮದ ಅನುಷ್ಠಾನವನ್ನು ಮಾಡುತ್ತಾಳೋ ಅವಳ ಆ ಕಾರ್ಯವು ನಿಷ್ಫಲವಾಗುತ್ತದೆ ಹಾಗೂ ಅವಳು ಲೋಕದಲ್ಲಿ ವ್ಯಭಿಚಾರಿಣಿ ಎನ್ನಿಸಿಕೊಳ್ಳುತ್ತಾಳೆ. ನಾರಿಯರ ಯೌವನ, ರೂಪ ಮತ್ತು ಜನ್ಮ-ಎಲ್ಲವೂ ಪತಿಗೇ ಮೀಸಲಾಗಿರುತ್ತದೆ. ಈ ಭೂಮಂಡಲದಲ್ಲಿ ಸ್ತ್ರೀಯರ ಪ್ರತಿಯೊಂದು ವಸ್ತುವೂ ಅವಳ ಪತಿಯ ಆವಶ್ಯಕತೆಯ ಪೂರ್ತಿಯ ಸಾಧನವೇ ಆಗಿರುತ್ತದೆ. ಪತಿಯೇ ಸ್ತ್ರೀಯ ಸ್ವಾಮಿ, ಗುರು, ಸಕಲ ದೇವತೆಗಳ ಸಹಿತ ಇಷ್ಟ ದೇವರು ಹಾಗೂ ಅವನೇ ಅವಳ ತೀರ್ಥ ಮತ್ತು ಪುಣ್ಯವಾಗಿರುತ್ತಾನೆ. ಪತಿಯು ಹೊರಗೆ ಹೋಗಿರುವಾಗ ಸ್ತ್ರೀಯು ತನ್ನನ್ನು ಸಿಂಗರಿಸಿಕೊಂಡರೆ ಅವಳ ರೂಪ, ವರ್ಣ ಎಲ್ಲವೂ ನಿರರ್ಥಕವಾಗುತ್ತವೆ. ಲೋಕದ ಜನರು ಇವಳನ್ನು ನೋಡಿ, ನಿಶ್ಚಯವಾಗಿಯೂ

ಇವಳು ವ್ಯಭಿಚಾರಿಣಿ ಎಂದು ಹೇಳುತ್ತಾರೆ. ಆದ್ದರಿಂದ ಯಾವ ಸ್ತ್ರೀಯೇ ಆಗಲಿ ತನ್ನ ಸನಾತನ ಧರ್ಮವನ್ನು ತ್ಯಜಿಸಬಾರದು. ಪತಿಯು ಇಲ್ಲಿ ಇಲ್ಲದೇ ಇರುವಾಗ ನಾನು ಹೇಗೆ ಭೋಗಗಳ ಉಪಭೋಗವನ್ನು ಅನುಭವಿಸಲಿ? ಇಂತಹ ವಿಚಾರವು ಕೂಡ ನಿಶ್ಚಯವಾಗಿ ಪಾಪವೆಂದು ನಾನು ತಿಳಿಯುತ್ತೇನೆ.

ಸುಕಲೆಯ ಮುಖದಿಂದ ಈ ರೀತಿಯ ಉತ್ತಮ ಪಾತಿವ್ರತ್ಯ ಧರ್ಮ ವರ್ಣನೆಯನ್ನು ಕೇಳಿ ಅವಳ ಸಖಿಯರಿಗೆ ಹರ್ಷವಾಯಿತು. ನಾರಿಯರಿಗೆ ಸದ್ಗತಿಯನ್ನು ಕೊಡುವ ಆ ಪರಮ ಪವಿತ್ರ ಧರ್ಮದ ಶ್ರವಣ ಮಾಡಿ ಸಮಸ್ತ ನರನಾರಿಯರು ಧರ್ಮಾನುರಾಗಿಣಿ ಭಾಗ್ಯವಂತೆ ಸುಕಲೆಯನ್ನು ಪ್ರಶಂಸಿಸಿದರು.

ಸುಕಲೆಯ ಮನಸ್ಸಿನಲ್ಲಿ ಕೇವಲ ಪತಿಯ ಧ್ಯಾನ ಮಾತ್ರವಿತ್ತು ಮತ್ತು ಪತಿಯ ಕಾಮನೆಯೇ ಇತ್ತು. ಅವಳ ಸತೀತ್ವದ ಪ್ರಭಾವವನ್ನು ದೇವರಾಜ ಇಂದ್ರನೂ ಚೆನ್ನಾಗಿ ತಿಳಿದುಕೊಂಡು ಅವಳ ವಿಷಯವಾಗಿ ಪೂರ್ಣ ವಿಚಾರ ಮಾಡಿ ಮನಸ್ಸಿನಲ್ಲಿಯೇ – 'ನಾನು ಇವಳ ಅವಿಚಲ ಧೈರ್ಯವನ್ನು ನಷ್ಟಗೊಳಿಸುತ್ತೇನೆ' ಎಂದು ಯೋಚಿಸಿದನು. ಹೀಗೆ ನಿಶ್ಚಯಿಸಿ ಅವನು ಮನ್ಮಥನನ್ನು ಸ್ಮರಣೆ ಮಾಡಿದನು. ಮನ್ಮಥನು ತನ್ನ ಪ್ರಿಯ ರತಿಯ ಸಂಗಡ ಅಲ್ಲಿಗೆ ಬಂದನು. ಕೈಮುಗಿದು ಇಂದ್ರನಿಗೆ ಹೇಳಿದನು –

'ನಾಥ ! ಈ ಸಮಯದಲ್ಲಿ ನನ್ನನ್ನು ಏಕೆ ಸ್ಮರಣೆ ಮಾಡಿದಿರಿ. ತಾವು ಏನು ಆಜ್ಞೆ ಮಾಡಿದರೂ ಅದನ್ನು ನಾನು ಪಾಲಿಸುತ್ತೇನೆ'.

ಇಂದ್ರನು ಹೇಳಿದನು – 'ಕಾಮದೇವ ! ಪಾತಿವ್ರತ್ಯದಲ್ಲಿ ತತ್ಪರಳಾಗಿರುವ ಈ ಪುಣ್ಯವತಿ ಸುಕಲೆಯು ಪರಮ ಮಂಗಳಮಯಿಯಾಗಿದ್ದಾಳೆ. ಇವಳನ್ನು ನಾನು ನನ್ನ ಕಡೆಗೆ ಆಕರ್ಷಿಸಲು ಬಯಸುತ್ತೇನೆ. ಈ ಕೆಲಸದಲ್ಲಿ ನೀನು ಪೂರ್ಣವಾಗಿ ನನಗೆ ಸಹಾಯ ಮಾಡು'.

ಕಾಮದೇವನು ಹೇಳಿದನು – 'ಸಹಸ್ರಲೋಚನ ! ನಾನು ತಮ್ಮ ಇಷ್ಟಾನುಸಾರ ತಮಗೆ ಖಂಡಿತವಾಗಿ ಸಹಾಯ ಮಾಡುತ್ತೇನೆ. ನಾನು ದೇವತೆಗಳನ್ನು, ಮುನಿಗಳನ್ನು ಮತ್ತು ದೊಡ್ಡ ದೊಡ್ಡ ಋಷಿವರ್ಯರನ್ನೂ ಸಹ ಗೆಲ್ಲುವ ಶಕ್ತಿಯನ್ನು ಹೊಂದಿದ್ದೇನೆ.

ಅಂದ ಮೇಲೆ ಒಬ್ಬ ಸಾಧಾರಣ ಅಬಲೆ ಸ್ತ್ರೀಯನ್ನು ಗೆಲ್ಲುವುದು ಯಾವ ಮಹಾ ದೊಡ್ಡ ಕೆಲಸ !'.

ಆಗ ಇಂದ್ರನು ಆ ಪರಮ ಪುಣ್ಯವತಿ ಸುಕಲೆಯು ಇರುವ ಕಡೆಗೆ ಹೋದನು. ಆಕೆಯು ತನ್ನ ಮನೆಯ ಬಾಗಿಲಲ್ಲಿ ಒಬ್ಬಳೇ ಕುಳಿತು ಪತಿಯ ಧ್ಯಾನದಲ್ಲಿ ತನ್ಮಯಳಾಗಿದ್ದಳು. ಆಕೆಯು ಪ್ರಾಣಗಳನ್ನು ತನ್ನ ಆಧೀನದಲ್ಲಿಟ್ಟು ಕೊಂಡು ಪತಿಯ ಚಿಂತನೆ ಮಾಡುತ್ತಾ ವಿಕಲ್ಪಶೂನ್ಯಳಾಗಿದ್ದಳು. ಯಾವ ಪುರುಷನೂ ಸಹ ಆಕೆಯ ಸ್ಥಿತಿಯ ಕಲ್ಪನೆ ಮಾಡಲಾರನು. ಆ ಸಮಯದಲ್ಲಿ ಇಂದ್ರನು ಅನುಪಮ ತೇಜಸ್ಸು ಮತ್ತು ಸೌಂದರ್ಯಯುಕ್ತನಾಗಿ, ಹಾವಭಾವಗಳಿಂದ ಶೋಭಿಸುತ್ತಾ ಅದ್ಭುತ ರೂಪವನ್ನು ಧರಿಸಿ ಸುಕಲೆಯ ಎದುರಿಗೆ ಪ್ರಕಟವಾದನು. ಉತ್ತಮ ಕಾಮ ಭಾವಯುಕ್ತ ಪುರುಷನು ಹೀಗೆ ಎದುರಿಗೆ ಒದಾಡುವುದನ್ನು ಕಂಡು ಧರ್ಮಾತ್ಮಕಾದ ಕೃಕಲ ವೈಶ್ಯನ ಪತ್ನಿಯು ಆವನ ರೂಪ, - ಗುಣ ತೇಜಸ್ಸಿನ ಕಡೆಗೆ ಸ್ವಲ್ಪವೂ ಗಮನ ಕೊಡದೆ ಉಪೇಕ್ಷಿಸಿದಳು. ಯಾವ ರೀತಿ ತಾವರೆಯ ಎಲೆಯ ಮೇಲಿನ ನೀರು ಎಲೆಗೆ ಅಂಟದಂತಿರುತ್ತದೋ ಅದೇ ರೀತಿ ಆ ಸತಿ ಸಾಧ್ವಿಮಣಿಯು ಪುರುಷನ ಕಡೆಗೆ ಆಕರ್ಷಿತಳಾಗಲಿಲ್ಲ. ಆಕೆಯು ಮನೆಯೊಳಗೆ ಹೋಗಿ ತನ್ನ ಪತಿಯಲ್ಲಿಯೇ ಅನುರಕ್ತಳಾಗಿ ಆವನ ಚಿಂತನೆಯಲ್ಲೇ ತನ್ಮಯಳಾದಳು.

ಇಂದ್ರನು ಸುಕಲೆಯ ಶುದ್ಧ ಪವಿತ್ರ ಭಾವವನ್ನು ಅರಿತು ಎದುರಿಗೆ ನಿಂತಿದ್ದ ಕಾಮದೇವನಿಗೆ ಹೇಳಿದನು – 'ಈ ಸಾಧ್ವಿಯು ಸತ್ಯರೂಪೀ ಪತಿಯ ಧ್ಯಾನದ ಕವಚವನ್ನು ಧರಿಸಿದ್ದಾಳೆ. ಅದರಿಂದ ಆಕೆಯನ್ನು ಸೋಲಿಸುವುದು ಸಾಧ್ಯವಿಲ್ಲ. ಈ ಪತಿವ್ರತಾ ಸ್ತ್ರೀಯು ತನ್ನ ಕೈಗಳಲ್ಲಿ ಧರ್ಮರೂಪೀ ಬಿಲ್ಲನ್ನು ಮತ್ತು ಧ್ಯಾನರೂಪೀ ಉತ್ತಮ ಬಾಣವನ್ನೂ ಹಿಡಿದು ಈಗ ಯುದ್ಧ ಭೂಮಿಯಲ್ಲಿ ನಿನ್ನೆದುರಿಗೆ ಯುದ್ಧಸನ್ನದ್ಧಳಾಗಿ ನಿಂತಿದ್ದಾಳೆ. ಅಜ್ಞಾನಿ ಪುರುಷನಾದವನೇ, ಮಹಾತ್ಮರ ವೈರವನ್ನು ಕಟ್ಟಿಕೊಳ್ಳುತ್ತಾನೆ. ಕಾಮದೇವಾ ! ಈ ಪತಿವ್ರತೆಯ ತಪಸ್ಸನ್ನು ನಾಶಮಾಡುವುದರಿಂದ ನಮ್ಮಿಬ್ಬರಿಗೂ ಅನಂತ ಅಪಾರ ದುಃಖವನ್ನು ಅನುಭವಿಸಬೇಕಾಗಿ ಬರುತ್ತದೆ. ಆದ್ದರಿಂದ ಈಗ ನಾವು

ಇವಳನ್ನು ಬಿಟ್ಟು ಹೋಗುವುದೇ ನಮಗೆ ಶ್ರೇಯಸ್ಕರವಾದುದು. ನಾನು ಮೊದಲೊಂದು ಬಾರಿ ಸತೀ ಅಹಲ್ಯೆಯ ಸಮಾಗಮದಿಂದ ಪಾಪಮಯ ಪರಿಣಾಮ-ಅಸಹ್ಯ ದುಃಖವನ್ನು ಅನುಭವಿಸಿರುವುದು ನಿನಗೂ ಗೊತ್ತಿದೆ. ಮಹರ್ಷಿ ಗೌತಮರು ನನಗೆ ಭಯಂಕರ ಶಾಪವನ್ನು ಕೊಟ್ಟಿದ್ದರು. ಈ ಬೆಂಕಿಯ ಜ್ವಾಲೆಯನ್ನು ಮುಟ್ಟಲು ಯಾರು ತಾನೆ ಸಾಹಸ ಮಾಡುತ್ತಾರೆ! ಕನ್ನ ಕೊರಳಿಗೆ ಭಾರವಾದ ಕಲ್ಲನ್ನು ಕಟ್ಟಿಕೊಂಡು ಯಾವ ಮೂರ್ಖರು ಸಮುದ್ರದಲ್ಲಿ ಇಳಿಯುವನು! ಸತೀ ಸಾಧ್ವಿ ಸ್ತ್ರೀಯನ್ನು ವಿಚಲಿತಳನ್ನಾಗಿ ಮಾಡಿ ಮೃತ್ಯುವಿನ ಬಾಯಿಗೆ ಬೀಳಲು ಯಾರು ತಾನೆ ಇಚ್ಛಿಸುತ್ತಾರೆ?

ಇಂದ್ರನು ಕಾಮದೇವನಿಗೆ ಉತ್ತಮ ಪಾಠ ಕಲಿಸಲು ನೀತಿಯುಕ್ತ ಮಾತುಗಳನ್ನು ಹೇಳಿದನು. ಅದನ್ನು ಕೇಳಿ ಕಾಮದೇವನು ಇಂದ್ರನಿಗೆ ಹೇಳಿದನು- 'ದೇವೇಶ! ನಾನು ತಮ್ಮ ಆದೇಶದಂತೆ ಇಲ್ಲಿಗೆ ಬಂದಿದ್ದೇನೆ. ಈಗ ತಾವು ಧೈರ್ಯ, ಪ್ರೇಮ ಹಾಗೂ ಪೌರುಷವನ್ನು ತ್ಯಜಿಸಿ ಇಂತಹ ಪೌರುಷಹೀನತೆ ಮತ್ತು ಹೇಡಿತನದ ಮಾತುಗಳನ್ನೇಕೆ ಆಡುತ್ತಿರುವಿರಿ?

ಅನಂತರ ಕಾಮದೇವ ಮತ್ತು ಇಂದ್ರ ಇಬ್ಬರೂ ಸಕಲೆಯ ಸತೀತ್ವವನ್ನು ನಷ್ಟಗೊಳಿಸಲು ಹೊರಟರು. ಆಗ ಸತ್ಯವು ಧರ್ಮಕ್ಕೆ ಹೇಳಿತು – ಹೇ ಧರ್ಮ! ಕಾಮದೇವನ ಕೆಲಸದ ಮೇಲೆ ಕಣ್ಣಿಡು. ನಾನು ನಿನಗೆ, ನಿನ್ನ ಜೊತೆಗೆ ಪುಣ್ಯಕ್ಕೆ ಯಾವ ಸ್ಥಾನವನ್ನು ಕೊಟ್ಟಿರುವೆನೊ ಅದನ್ನು ಹಾಳು ಮಾಡಲು ಅವನು ಹೊರಟಿದ್ದಾನೆ. ಈ ದುಷ್ಟ ಕಾಮದೇವನು ನಮ್ಮೆಲ್ಲರ ಶತ್ರುವಾಗಿದ್ದಾನೆ. ತಪಸ್ವಿ ಬ್ರಾಹ್ಮಣ, ಸದಾಚಾರಿ ಪತಿ ಮತ್ತು ಪತಿವ್ರತಾ ಸ್ತ್ರೀ- ಈ ಮೂವರಲ್ಲೂ ನಾನು ವಾಸ ಮಾಡುತ್ತೇನೆ. ಎಲ್ಲಿ ನನ್ನ ವೃದ್ಧಿಯಾಗುವುದೋ, ಎಲ್ಲಿ ನಾನು ಪುಷ್ಟ ಮತ್ತು ಸಂತುಷ್ಟನಾಗಿರುವೆನೋ ಅಲ್ಲಿ ನಿಮ್ಮ ನಿವಾಸವಾಗಿದೆ. ಶ್ರದ್ಧೆಯ ಜೊತೆಯಲ್ಲಿ ಪುಣ್ಯವೂ ಅಲ್ಲಿಗೆ ಬಂದು ನಲಿಯುತ್ತದೆ. ನನ್ನ ಶಾಂತಿಯುಕ್ತ ಮಂದಿರದಲ್ಲಿ ಕ್ಷಮೆಯೂ ಆಗಮಿಸುತ್ತದೆ. ನಾನು ಎಲ್ಲಿರುವೆನೋ ಅಲ್ಲಿ ಸಂತೋಷ, ಇಂದ್ರಿಯ ನಿಗ್ರಹ, ದಯೆ, ಪ್ರೇಮ, ಪ್ರಜ್ಞಾ, ಲೋಭಹೀನತೆ ಮುಂತಾದ ಗುಣಗಳೂ ವಾಸಮಾಡುತ್ತವೆ. ಅಲ್ಲಿಯೇ ಪವಿತ್ರ ಭಾವವೂ

ಇರುತ್ತದೆ. ಇವರೆಲ್ಲರೂ ನನ್ನ ಬಂಧುಬಾಂಧವರಾಗಿದ್ದಾರೆ. ಧರ್ಮ ! ಆಸ್ತೇಯ, ಅಹಿಂಸೆ, ಸಹನೆ ಮತ್ತು ಪವಿತ್ರ ಬುದ್ಧಿ – ಇವೆಲ್ಲವೂ ನನ್ನ ಮನೆಗೆ ಬಂದು ಧನ್ಯವಾಗುತ್ತವೆ. ಗುರುಸೇವೆ, ಲಕ್ಷ್ಮೀ ಸಮೇತ ಭಗವಾನ್ ವಿಷ್ಣು, ಅಗ್ನಿ ಮುಂತಾದ ದೇವತೆಗಳೂ ಸಹ ನನ್ನ ಮನೆಗೆ ಬರುತ್ತಾರೆ. ಮೋಕ್ಷಮಾರ್ಗವನ್ನು ಪ್ರಕಾಶಿಸುವ ಜ್ಞಾನ, ಔದಾರ್ಯ ಮುಂತಾದುವುಗಳಿಂದ ಕೂಡಿ ಪೂರ್ವೋಕ್ತವ್ಯಕ್ತಿಗಳ ಜೊತೆಗೆ ನಾನು ಧರ್ಮಾತ್ಮರಾದ ಪುರುಷರು ಮತ್ತು ಸತೀ ಸಾಧ್ವಿ ಸ್ತ್ರೀಯರುಗಳ ಅಂತರಂಗದಲ್ಲಿ ನೆಲೆಸುತ್ತೇನೆ. ಎಷ್ಟು ಸಾಧು ಮಹಾತ್ಮರಿದ್ದಾರೋ ಅವರೆಲ್ಲರೂ ನನ್ನ ಗೃಹಸ್ವರೂಪರೇ ಆಗಿರುತ್ತಾರೆ. ಇವರೆಲ್ಲರ ಅಂತರಂಗದಲ್ಲಿ ನಾನು ಮೇಲೆ ಹೇಳಿದ ಕುಟುಂಬ ವರ್ಗದವರ ಜೊತೆಯಲ್ಲಿ ವಾಸಿಸುತ್ತೇನೆ. ಕಲ್ಯಾಣಮಯ ಭಗವಾನ್ ಶಿವನೂ ಸಹ ನನ್ನ ನಿವಾಸಸ್ಥಾನವಾಗಿದ್ದಾನೆ. ಕೈಕಲ ವೈಶ್ಯನ ಸಾಧ್ವಿ ಪತ್ನೀ ಮಂಗಳಮಯಿ ಸುಕಲೆಯೂ ಸಹ ನನ್ನ ಉತ್ತಮ ಗೃಹವಾಗಿದ್ದಾಳೆ. ಆದರೆ ಈ ದಿನ ಪಾಪಿ ಕಾಮನು ಅದನ್ನು ಸುಡಲು ಹೊರಟಿದ್ದಾನೆ.

ಧರ್ಮವು ಹೇಳಿತು – 'ನಾನು ಕಾಮನ ತೇಜಸ್ಸನ್ನು ಕಡಿಮೆ ಮಾಡುತ್ತೇನೆ. ಅವನು ಇಂದೇ ಓಡಿ ಹೋಗುವಂತಹ ಉಪಾಯವನ್ನು ನಾನು ಯೋಚಿಸಿದ್ದೇನೆ.' ಅತ್ತ ಕಾಮದೇವನಿಂದ ಕಳಿಸಲ್ಪಟ್ಟ ಕ್ರೀಡೆಯು ಸ್ತ್ರೀಯ ರೂಪಧರಿಸಿ ಸುಕಲೆಯ ಮನೆಗೆ ಹೋದಳು. ಸುಂದರ ರೂಪವತಿ ನಾರಿಯನ್ನು ಕಂಡು ಸುಕಲೆಯು ಆದರಯುಕ್ತ ವಚನಗಳಿಂದ ಆದರಿಸಿ ಸಮ್ಮಾನ ಮಾಡಿದಳು. ಇಬ್ಬರೂ ಪರಸ್ಪರ ಮಾತುಕತೆಯಾಡಲು ಪ್ರಾರಂಭಿಸಿದರು. ಕ್ರೀಡಾ ಹೇಳಿದಳು – 'ದೇವಿ ! ನನ್ನ ಸ್ವಾಮಿಯು ದೊಡ್ಡ ಶಕ್ತಿಶಾಲಿ, ಗುಣಜ್ಞ, ಧೀರ ಮತ್ತು ಅತ್ಯಂತ ಪುಣ್ಯಾತ್ಮರಾಗಿದ್ದರು. ಆದರೆ ನನ್ನನ್ನು ಬಿಟ್ಟು ಎಲ್ಲೋ ಹೊರಟು ಹೋಗಿದ್ದಾರೆ. ನಾನು ಮಂದಭಾಗಿನಿಯಾಗಿದ್ದೇನೆ. ಭಾಗ್ಯವಂತೆಯೇ ! ನಾರಿಯರಿಗೆ ರೂಪ, ಸೌಭಾಗ್ಯ, ಶೃಂಗಾರ, ಸುಖ ಮತ್ತು ಸಂಪತ್ತು ಎಲ್ಲವೂ ಪತಿಯೇ ಆಗಿದ್ದಾನೆ. ಇದೇ ಶಾಸ್ತ್ರಗಳ ಮತವಾಗಿದೆ.

ಪತಿವ್ರತೆ ಸುಕಲೆಯು ಕ್ರೀಡಾ ಹೇಳಿದ ಈ ಎಲ್ಲ ಮಾತುಗಳನ್ನೂ ಒಬ್ಬ ದುಃಖಿತ ನಾರೀ ಹೃದಯದ ನಿಜ ಭಾವವೆಂದು ತಿಳಿದು ಕೇಳಿ, ಅವಳ

ದುಃಖದಲ್ಲಿ ತಾನೂ ಸಹಭಾಗಿಯಾದಳು. ಮತ್ತೆ ಸುಕಲೆಯು ತನ್ನ ಸ್ಥಿತಿಯನ್ನು ಸ್ವಲ್ಪದರಲ್ಲೇ ಹೇಳಿದಳು. ಕ್ರೀಡಾ ಅವಳನ್ನು ಸಾಂತ್ವನಗೊಳಿಸಿದಳು. ಇದಾದ ನಂತರ ಒಂದು ದಿನ ಅವಳು ಸುಕಲೆಗೆ ಹೇಳಿದಳು – 'ಸಖೀ ! ನೋಡು, ಎದುರಿಗೆ ಅನೇಕ ದಿವ್ಯ ವೃಕ್ಷಗಳಿಂದ ಶೋಭಾಯಮಾನವಾಗಿರುವ ಸುಂದರ ವನದಲ್ಲಿ ಒಂದು ಪರಮ ಪವಿತ್ರವಾದ ಪಾಪನಾಶನ ತೀರ್ಥವೂ ಇದೆ. ನಡಿ, ನಾವಿಬ್ಬರೂ ಅಲ್ಲಿಗೆ ಪುಣ್ಯ ಸಂಚಯಕ್ಕೆ ಹೋಗೋಣ'.

ಇದನ್ನು ಕೇಳಿ ಸುಕಲೆಯು ಆ ಮಾಯಾವಿನಿ ಸ್ತ್ರೀಯ ಜೊತೆಯಲ್ಲಿ ಹೋದಳು. ನಂದನವನದ ಎಲ್ಲ ಶೋಭೆಯೂ ಆ ವನದಲ್ಲಿ ಬಂದು ಇಳಿದಿದೆಯೋ ಎಂಬಂತೆ ಅವಳಿಗೆ ಕಂಡಿತು. ಇದೇ ಸಮಯದಲ್ಲಿ ಮನ್ಮಥ–ರತಿ ಮತ್ತು ಇಂದ್ರನೂ ಅಲ್ಲಿಗೆ ಬಂದರು. ಇಂದ್ರನು ಎಲ್ಲ ಭೋಗಗಳಿಗೆ ಅಧಿಪತಿಯಾಗಿದ್ದರೂ ಕಾಮೋಪಭೋಗಕ್ಕಾಗಿ ವ್ಯಗ್ರನಾಗಿದ್ದನು. ಅವನು ಕಾಮದೇವನನ್ನು ಕರೆದು ಹೇಳಿದನು – 'ನೋಡು, ಸುಕಲೇ ಬಂದಿದ್ದಾಳೆ. ಕ್ರೀಡಾಳ ಎದುರಿಗೆ ನಿಂತಿದ್ದಾಳೆ. ಇವಳ ಮೇಲೆ ನಿನ್ನ ಬಾಣ ಪ್ರಯೋಗಿಸು'. ಕಾಮದೇವನು ಹೇಳಿದನು – 'ಸಹಸ್ರಲೋಚನ ! ತಾವು ಲೀಲಾ ಚಾತುರ್ಯದಿಂದ ಕೂಡಿದ ತಮ್ಮ ದಿವ್ಯ ರೂಪ ಪ್ರಕಟಿಸಿರಿ. ಅದರ ಆಶ್ರಯದಿಂದ ನಾನು ಇವಳ ಮೇಲೆ ಪ್ರಹಾರ ಮಾಡುತ್ತೇನೆ. ಏಕೆಂದರೆ ಈಶ್ವರನು ಮೊದಲೇ ನನ್ನ ರೂಪವನ್ನು ಹರಣ ಮಾಡಿದ್ದಾನೆ. ಅದರಿಂದ ನನಗೆ ಶರೀರವೆ ಇಲ್ಲವಾಗಿದೆ. ನಾನು ಯಾವ ಸ್ತ್ರೀಗೆ ಪುಷ್ಪ ಬಾಣದಿಂದ ಗುರಿಯಿಡಬೇಕಾದರೆ ಆಗ ಪುರುಷ ಶರೀರದ ಆಶ್ರಯವನ್ನು ಪಡೆದು ನನ್ನ ರೂಪವನ್ನು ಪ್ರಕಟಗೊಳಿಸುತ್ತೇನೆ. ಇದೇ ರೀತಿ ಪುರುಷನಿಗೆ ಪ್ರಹಾರ ಮಾಡಬೇಕಾದರೆ ನಾರಿ ದೇಹದ ಆಶ್ರಯ ಪಡೆಯುತ್ತೇನೆ. ಪುರುಷನು ಮೊಟ್ಟಮೊದಲು ಯಾರಾದರೂ ಸುಂದರ ಸ್ತ್ರೀಯನ್ನು ನೋಡಿ ಯಾವಾಗಲೂ ಅವಳ ಚಿಂತನೆಯಲ್ಲಿಯೇ ಇರುವನೊ ಆಗ ನಾನು ರಹಸ್ಯವಾಗಿ ಅವನಲ್ಲಿ ಪ್ರವೇಶಿಸಿ ಅವನನ್ನು ಉನ್ಮತ್ತನಾಗುವಂತೆ ಮಾಡುತ್ತೇನೆ. ಸ್ಮರಣ ಚಿಂತನೆ ಯಿಂದಲೇ ನನ್ನ ಪ್ರಾದುರ್ಭಾವವಾಗುತ್ತದೆ. ಇದರಿಂದಲೇ ನನ್ನ ಹೆಸರು 'ಸ್ಮರ' ಎಂದಾಗಿದೆ. ಈ ದಿನ ನಾನು ತಮ್ಮರೂಪದ ಆಶ್ರಯದಿಂದ

ಈ ನಾರಿಯನ್ನು ನನ್ನ ಇಚ್ಛಾನುಸಾರವಾಗಿ ಕುಣಿಸುತ್ತೇನೆ'. ಹೀಗೆ ಹೇಳಿ ಕಾಮದೇವನು ಇಂದ್ರನ ಶರೀರ ಪ್ರವೇಶಿಸಿದನು.

ಆ ವನಕ್ಕೆ ಹೋದ ಮೇಲೆ ಸುಕಲೆಯು ಕ್ರೀಡಾಳನ್ನು ಕುರಿತು ಕೇಳಿದಳು-'ಸಖೀ! ಈ ಮನೋಹರ ದಿವ್ಯ ವನವು ಯಾರದ್ದು? ಕ್ರೀಡಾ ಹೇಳಿದಳು-ಸ್ವಭಾವಸಿದ್ಧ ದಿವ್ಯ ಗುಣಗಳಿಂದ ಕೂಡಿದ ಈ ಎಲ್ಲ ವನವೂ ಕಾಮದೇವನಿಗೆ ಸೇರಿದುದು ನೀನು ಚೆನ್ನಾಗಿ ಇದರ ನಿರೀಕ್ಷಣೆ ಮಾಡು.

ದುರಾತ್ಮ ಕಾಮನ ಈ ಪ್ರಯತ್ನವನ್ನು ನೋಡಿ ಪತಿವ್ರತೆ ಸುಕಲೆಯು ಗಾಳಿಯ ಮೂಲಕ ಬಂದ ಹೂವಿನ ಸುಗಂಧವನ್ನು ಘ್ರಾಣಿಸಲಿಲ್ಲ, ಅಲ್ಲಿನ ರಸಗಳ ಆಸ್ವಾದನೆಯನ್ನು ಮಾಡಲಿಲ್ಲ. ಇದನ್ನು ನೋಡಿ ಕಾಮದೇವನ ವಸಂತನು ಲಜ್ಜಿತನಾದನು.

ಅನಂತರ ಮನ್ಮಥನ ಪತ್ನಿ ರತಿಯು ಪ್ರೀತಿಯನ್ನು ಜೊತೆಯಲ್ಲಿ ಕರೆದುಕೊಂಡು ಅಲ್ಲಿಗೆ ಬಂದು ಸುಕಲೆಗೆ ನಗುತ್ತಾ ಹೇಳಿದಳು – 'ಭದ್ರೆ! ನಿನಗೆ ಮಂಗಳವಾಗಲಿ, ನಾನು ನಿನ್ನನ್ನು ಸ್ವಾಗತಿಸುತ್ತೇನೆ. ನೀನು ರತಿಯಾದ ನನ್ನೊಡನೆ ಮತ್ತು ಪ್ರೀತಿಯ ಜೊತೆ ಇಲ್ಲಿ ರಮಿಸು'. ಸುಕಲೆ ಹೇಳಿದಳು – 'ನನ್ನ ಪತಿ ಇರುವಲ್ಲೇ ನಾನು ಇರುವುದು. ನಾನು ಯಾವಾಗಲೂ ನನ್ನ ಪತಿಯ ಜೊತೆಯೇ ಇರುತ್ತೇನೆ ನನ್ನ ಕಾಮ, ನನ್ನ ಪ್ರೀತಿ ಎಲ್ಲ ಅವರೇ ಆಗಿರುವರು. ಈ ಶರೀರವು ನೆರಳು ಮಾತ್ರ'. ಇದನ್ನು ಕೇಳಿ ರತಿ ಮತ್ತು ಪ್ರೀತಿ ಇಬ್ಬರೂ ಲಜ್ಜಿತರಾಗಿ ಕಾಮದೇವನ ಪತ್ತಿರ ಹೋಗಿ ಹೇಳಿದರು – "ಮಹಾಪ್ರಾಜ್ಞ! ಈಗ ತಾವು ತಮ್ಮ ಪುರುಷಾರ್ಥವನ್ನು ಬಿಡಿರಿ. ಇವಳನ್ನು ಗೆಲ್ಲುವುದು ಅಸಾಧ್ಯ. ಈ ಭಾಗ್ಯವಂತ ಪತಿವ್ರತೆಯು ಯಾವಾಗಲೂ ತನ್ನ ಪತಿಯ ಧ್ಯಾನದಲ್ಲಿಯೇ ಇರುತ್ತಾಳೆ".

ಕಾಮದೇವನು ಹೇಳಿದು – "ದೇವಿ! ಇವಳು ಇಂದ್ರನ ರೂಪವನ್ನು ನೋಡಿದಾಗ ನಾನು ಇವಳನ್ನು ಪುಷ್ಪ ಬಾಣಗಳಿಂದ ಘಾಸಿಗೊಳಿಸುತ್ತೇನೆ". ಅನಂತರ ದೇವರಾಜ ಇಂದ್ರನು ಪರಮ ಸುಂದರ ವೇಷಧರಿಸಿ ರತಿಯ ಹಿಂದೆ ಹಿಂದೆಯೇ ಹೊರಟನು. ಅವನ ಗತಿಯಲ್ಲಿ ಸುಂದರ ವಿಲಾಸ ಎದ್ದು

ಕಾಣುತ್ತಿತ್ತು. ಅವನು ಎಲ್ಲ ರೀತಿಯ ಅಭೂಷಣಗಳಿಂದಲೂ, ದಿವ್ಯಮಾಲೆಗಳಿಂದಲೂ, ದಿವ್ಯ ವಸ್ತ್ರಗಳಿಂದಲೂ, ದಿವ್ಯ ಸುಗಂಧದಿಂದಲೂ ಸುಸಜ್ಜಿತನಾಗಿ ಸುಕಲೆಯ ಹತ್ತಿರ ಬಂದು ಹೇಳಿದನು – "ನಾನು ನಿನ್ನ ಹತ್ತಿರ ನನ್ನ ದೂತಿ (ಕ್ರೀಡಾ) ಪ್ರೀತಿ ಮತ್ತು ರತಿಯನ್ನು ಕಳಿಸಿದ್ದೆ. ನೀನು ನನ್ನ ಪ್ರಾರ್ಥನೆಗೆ ಏಕೆ ಗಮನ ಕೊಡುವುದಿಲ್ಲ? ನಾನು ಸ್ವತಃ ನಿನ್ನಲ್ಲಿಗೆ ಬಂದಿದ್ದೇನೆ. ನನ್ನನ್ನು ಸ್ವೀಕರಿಸು".

ಸುಕಲೆ ಹೇಳಿದಳು – "ನನ್ನ ಕಣ್ಣು ತೆರೆದಿರುವವರೆಗೂ ನಿರಂತರವಾಗಿ ನಾನು ಪತಿಯ ಕಾರ್ಯದಲ್ಲಿಯೇ ಮಗ್ನಳಾಗಿರುತ್ತೇನೆ. ಮೃತ್ಯುವಿನ ಭಯವೂ ಇಲ್ಲವೆ ನನ್ನ ಎದುರು ಬಂದಿರುವ ತಾವು ಯಾರು? ಇಂದ್ರಿಯ ನಿಗ್ರಹದಿಂದ ಕೂಡಿದ, ವಿಭಿನ್ನ ಗುಣಗಳ ಮೂಲಕ ಉತ್ತಮ ಧರ್ಮವು ಯಾವಾಗಲೂ ನನ್ನನ್ನು ರಕ್ಷಿಸುತ್ತದೆ. ಅಲ್ಲಿ ನೋಡಿ, ಶಾಂತಿ ಮತ್ತು ಕ್ಷಮೆಯ ಜೊತೆ ಸತ್ಯ ನನ್ನೆದುರಿಗೆ ಉಪಸ್ಥಿತವಾಗಿದೆ. ಮಹಾಬಲಶಾಲೀ ಮತ್ತು ಪರಮ ಯಶಸ್ವೀ ಸತ್ಯ ಎಂದೂ ನನ್ನನ್ನು ತ್ಯಜಿಸುವುದಿಲ್ಲ. ಅಂದ ಮೇಲೆ ತಾವು ನನ್ನನ್ನು ಬಲಪೂರ್ವಕವಾಗಿ ಏಕೆ ವಶಪಡಿಸಿಕೊಳ್ಳಲು ಇಚ್ಛಿಸುವಿರಿ? ನನ್ನ ಸತ್ಯ, ಧರ್ಮ, ಪುಣ್ಯ ಮತ್ತು ಜ್ಞಾನ ಮುಂತಾದ ಶಕ್ತಿಶಾಲಿ ಪುತ್ರರು ಯಾವಾಗಲೂ ನನ್ನನ್ನು ರಕ್ಷಿಸಲು ಸಿದ್ಧರಿರುತ್ತಾರೆ. ನಾನು ನಿತ್ಯವೂ ಸುರಕ್ಷಿತಳಾಗಿದ್ದೇನೆ.* ನಾನು ಇಂದ್ರಿಯ ಸಂಯಮ ಮತ್ತು ಮನೋನಿಗ್ರಹದಲ್ಲಿ ತತ್ಪರಳಾಗಿದ್ದೇನೆ. ಸಾಕ್ಷಾತ್ ಶಚೀ ಪತಿಯಾದ ಇಂದ್ರನೇ ಬಂದರೂ ನನ್ನನ್ನು ಗೆಲ್ಲಲಾರನು.

---

* ಅಹಂ ರಕ್ಷಾಪರಾ ನಿತ್ಯಂ ದಮಶಾಂತಿಪರಾಯಣಾ।
ನ ಮಾಂ ಜೇತುಂ ಸಮರ್ಥಶ್ಚ ಅಪಿ ಸಾಕ್ಷಾಚ್ಛಚೀಪತಿಃ॥
ಯದಿ ವಾ ಮನ್ಮಥೋ ವಾಪಿ ಸಮಾಗಚ್ಛತಿ ವೀರ್ಯವಾನ್।
ದಂಶಿತಾಹಂ ಸದಾ ಸತ್ಯಮಾತ್ಮಕವ್ಚೇನ ಸರ್ವದಾ।
ನಿರರ್ಥಕಾಸ್ತಸ್ಯ ಬಾಣಾ ಭವಿಷ್ಯನ್ತಿ ನ ಸಂಶಯಃ॥
ತ್ವಾಮೇವಂ ಹಿ ಹನಿಷ್ಯನ್ತಿ ಧರ್ಮಾದ್ಯಾಸ್ತೇ ಮಹಾಬಲಾಃ।
ದೂರಂ ಗಚ್ಛ ಪಲಾಯಸ್ವ ನಾತ್ರ ತಿಷ್ಠ ಮಮಾಗ್ರತಃ।
ಪಾರ್ಯಮಾಣೋ ಯದಾ ತಿಷ್ಠೇರ್ಭಸ್ಮೀಭೂತೋ ಭವಿಷ್ಯಸಿ॥
ಭರ್ತ್ರಾ ವಿನಾ ನಿರಿಕ್ಷೇತ ಮಮ ರೂಪಂ ಯದಾ ಭವಾನ್।
ಯಥಾ ದಾರು ದಹೇದ್ವಹ್ನಿಸ್ತಥಾ ಧಕ್ಷ್ಯಾಮಿ ನಾನ್ಯಥಾ॥
(ಪದ್ಮಪು ಭೂಮಿ. ೫೮/೩೨೩೬)

ಮಹಾಪರಾಕ್ರಮಿ ಕಾಮದೇವನೇ ಬಂದರೂ ನನಗೆ ಯಾವ ಚಿಂತೆಯೂ ಇಲ್ಲ. ಏಕೆಂದರೆ ನಾನು ಅನಾಯಾಸವಾಗಿ ಸತೀತ್ವ ರೂಪೀ ಕವಚದಿಂದ ಸುರಕ್ಷಿತಳಾಗಿದ್ದೇನೆ. ನಿಸ್ಸಂದೇಹವಾಗಿ ಮನ್ಮಥನ ಬಾಣಗಳು ನನ್ನ ಮೇಲೆ ವ್ಯರ್ಥವಾದಾವು. ಬದಲಿಗೆ ಈ ಶಕ್ತಿಶಾಲಿಗಳಾದ ಧರ್ಮ ಮೊದಲಾದವರು ನಿನ್ನನ್ನೇ ಕೊಲ್ಲುತ್ತಾರೆ. ದೂರ ಸರಿ ! ಇಲ್ಲಿಂದ ಓಡು, ನನ್ನೆದುರಿಗೆ ನಿಲ್ಲಬೇಡ. ಬೇಡವೆಂದರೂ ನನ್ನೆದುರಿಗೆ ನಿಂತಿದ್ದರೆ ಸುಟ್ಟುಭಸ್ಮವಾಗಿ ಹೋಗುತ್ತೀಯೆ. ನನ್ನ ಸ್ವಾಮಿಯ ಅನುಪಸ್ಥಿತಿಯಲ್ಲಿ ನನ್ನ ಶರೀರದ ಮೇಲೆ ನೀನು ದೃಷ್ಟಿ ಹಾಯಿಸಿದರೆ ಒಣಗಿದ ಕಟ್ಟಿಗೆಯನ್ನು ಅಗ್ನಿಯು ಸುಟ್ಟು ಹಾಕುವಂತೆ ನಾನು ನಿನ್ನನ್ನು ಭಸ್ಮ ಮಾಡುತ್ತೇನೆ. ಸುಕಲೆಯ ಮಾತನ್ನು ಕೇಳಿ, ಆ ಸತೀ ಸಾಧ್ವಿಯ ಭಯಂಕರ ರೂಪಕ್ಕೆ ಹೆದರಿ ಇಂದ್ರಾದಿಗಳು ಬಂದಂತೆಯೆ ಹೊರಟು ಹೋದರು. ಎಲ್ಲರೂ ಹೊರಟು ಹೋದ ಮೇಲೆ ಪುಣ್ಯಮಯಿ ಪತಿವ್ರತೆ ಸುಕಲೆಯು ಪತಿಯ ಧ್ಯಾನದಲ್ಲೇ ಮನೆಗೆ ಹಿಂದಿರುಗಿದಳು.

ಧರ್ಮಾತ್ಮ ಕೃಕಲ ವೈಶ್ಯನೂ ಸಹ ಎಲ್ಲ ತೀರ್ಥಯಾತ್ರೆಗಳನ್ನು ಮುಗಿಸಿ ಜೊತೆಯವರೊಡನೆ ಸಂತೋಷದಿಂದ ಮನೆಗೆ ಹಿಂದಿರುಗಿ ಬಂದನು. ತಾನು ಹುಟ್ಟಿದ್ದು ಸಾರ್ಥಕವಾಯಿತು. ತನ್ನ ಎಲ್ಲ ಪಿತೃಗಳು ಸ್ವರ್ಗ ಸೇರಿರಬಹುದು ಎಂದು ಅವನು ಯೋಚಿಸುತ್ತಿರುವಾಗ ಒಬ್ಬ ದಿವ್ಯ ರೂಪಧಾರಿ ವಿಶಾಲ ಕಾಯ ಪುರುಷನು ಅವನ ತಂದೆ ಅಜ್ಜ ಮುಂತಾದವರನ್ನು ಪ್ರತ್ಯಕ್ಷರೂಪದಿಂದ ಬಂಧಿಸಿ ಆ ವೈಶ್ಯ ಕೃಕಲನ ಎದುರಿಗೆ ಪ್ರಕಟವಾಗಿ ಹೇಳಿದನು – 'ವೈಶ್ಯ ! ನಿನ್ನ ಪುಣ್ಯವೂ ಉತ್ತಮವಾಗಿಲ್ಲ. ನಿನಗೆ ತೀರ್ಥಯಾತ್ರೆಯ ಯಾವ ಫಲವೂ ಸಿಗಲಿಲ್ಲ. ನೀನು ವ್ಯರ್ಥವಾಗಿ ಇಷ್ಟೊಂದು ಶ್ರಮಪಟ್ಟೆ. ಇದನ್ನು ಕೇಳಿ ಕೃಕಲ ವೈಶ್ಯನು ದುಃಖಿತನಾಗಿ ಕೇಳಿದನು – "ತಾವ್ಯಾರು? ಹೀಗೇಕೆ ಹೇಳುತ್ತಿರುವಿರಿ? ನನ್ನ ತಂದೆ ಅಜ್ಜಂದಿರನ್ನು ಏಕೆ ಬಂಧಿಸಿರುವಿರಿ? ನನಗೆ ತೀರ್ಥಯಾತ್ರೆಯ ಫಲವೇಕೆ ಸಿಗಲಿಲ್ಲ?".

ಧರ್ಮವು ಹೇಳಿತು – "ನಾನು ಧರ್ಮನಾಗಿದ್ದೇನೆ. ಯಾರು ಪತಿವ್ರತೆಯಾದ ಪತ್ನಿಯನ್ನು ಒಂಟಿಯಾಗಿ ಬಿಟ್ಟು ಧರ್ಮವನ್ನಾಚರಿಸಲು

ಹೊರಗೆ ಹೋಗುವರೋ ಅವರು ಮಾಡಿದ ಎಲ್ಲಾ ಧರ್ಮಾಚರಣೆಯೂ ವ್ಯರ್ಥವಾಗುತ್ತದೆ. ಎಲ್ಲಪ್ರಕಾರವಾಗಿ ಸದಾಚಾರದಲ್ಲಿ ಸಂಲಗ್ನಳಾಗಿರುವವಳೂ, ಯೋಗ್ಯ ಆಚರಣೆಯಿಂದ ಪ್ರಶಂಸೆಗೆ ಪಾತ್ರಳಾಗಿರುವವಳೂ, ಧರ್ಮ ಸಾಧನೆಯಲ್ಲಿ ತತ್ಪರಳೂ, ಸದಾ ಪಾತಿವ್ರತ್ಯವನ್ನು ಪಾಲಿಸುವವಳೂ, ಎಲ್ಲ ವಿಷಯಗಳನ್ನು ತಿಳಿದಿರುವವಳೂ, ಜ್ಞಾನಾಸಕ್ತಿಯುಳ್ಳವಳೂ ಆಗಿರುವ ಗುಣವತೀ, ಪುಣ್ಯಮಯೀ ಮಹಾಸತಿ ನಾರಿಯು ಯಾರಿಗೆ ಪತ್ನಿ ಯಾಗಿರುವಳೋ ಅವನ ಮನೆಯಲ್ಲಿ ಯಾವಾಗಲೂ ದೇವತೆಗಳು ವಾಸ ಮಾಡುತ್ತಾರೆ. ಪಿತೃಗಳೂ ಸಹ ಅವನ ಮನೆಯಲ್ಲಿ ನೆಲಸಿ ನಿರಂತರವಾಗಿ ಆ ಮನೆಯ ಯಶಸ್ಸನ್ನು ಹಾರೈಸುತ್ತಿರುತ್ತಾರೆ. ಗಂಗೆ ಮೊದಲಾದ ಪವಿತ್ರ ನದಿಗಳೂ, ಸಾಗರ, ಯಜ್ಞ, ಗೋವು, ಋಷಿ ಹಾಗೂ ಸಂಪೂರ್ಣ ತೀರ್ಥಗಳೂ ಸಹ ಆ ಮನೆಯಲ್ಲಿ ನೆಲೆಸಿರುತ್ತವೆ. ನಿನ್ನ ಪತ್ನಿಯಿಲ್ಲದೇ ನೀನು ತೀರ್ಥಕ್ಷೇತ್ರಗಳಲ್ಲಿ ಶ್ರಾದ್ಧ ಮತ್ತು ದಾನ ಮಾಡಿದ್ದರಿಂದ ಆ ದೋಷದಿಂದಲೇ ನಿನ್ನ ಪೂರ್ವಜ ರೆಲ್ಲರೂ ಬಂಧನಕ್ಕೆ ಒಳಗಾಗಿದ್ದಾರೆ. ನೀನು ಕಳ್ಳನಾಗಿದ್ದೀಯೇ ಹಾಗೂ ಈ ನಿನ್ನ ಪಿತೃಗಳೂ ಸಹ ಕಳ್ಳರೇ ಆಗಿದ್ದಾರೆ. ಏಕೆಂದರೆ ಇವರು ಲೋಲುಪತೆಯಿಂದ ನಿನ್ನಿಂದ ನೀಡಲ್ಪಟ್ಟ ಶ್ರಾದ್ಧದ ಅನ್ನವನ್ನು ತಿಂದಿದ್ದಾರೆ. ಪತ್ನಿಯೇ ಗೃಹಸ್ಥ ಧರ್ಮದ ಸ್ವಾಮಿನಿಯಾಗಿರುತ್ತಾಳೆ. ಅವಳಿಲ್ಲದೆ ನೀನು ಶುಭ ಕರ್ಮಗಳ ಅನುಷ್ಠಾನ ಮಾಡಿರುವೆ. ಇದು ನಿಜವಾಗಿಯೂ ಕಳ್ಳತನವೇ. ಪತ್ನಿಯು ತನ್ನ ಕೈಯಿಂದ ಭೋಜನವನ್ನು ತಯಾರಿಸಿ ಉಣಬಡಿಸಿದಾಗ ಅದು ಅಮೃತಕ್ಕೆ ಸಮಾನವಾಗಿ ಮಧುರವಾಗಿರುತ್ತದೆ. ಅದೇ ಅನ್ನವನ್ನು ಪಿತೃಗಳು ಸಂತೋಷದಿಂದ ಭೋಜನ ಮಾಡಿ ತೃಪ್ತಿ ಹೊಂದುತ್ತಾರೆ. ಆದ್ದರಿಂದ ಪತ್ನಿಯನ್ನು ಬಿಟ್ಟು ಧರ್ಮಕಾರ್ಯ ಮಾಡಿದರೆ ಅದು ನಿಷ್ಫಲವಾಗುತ್ತದೆ.

ಕೃಕಲನು ಕೇಳಿದನು – 'ಧರ್ಮ ! ಈಗ ನನಗೆ ಹೇಗೆ ಸಿದ್ಧಿಪ್ರಾಪ್ತವಾದೀತು? ಮತ್ತು ಯಾವ ರೀತಿ ನನ್ನ ಪಿತೃಗಳು ಬಂಧನದಿಂದ ಮುಕ್ತಿ ಹೊಂದುವರು?' ಆಗ ಧರ್ಮವು ಹೇಳಿತು – 'ಭಾಗ್ಯವಂತನೆ ! ತನ್ನ ಮನೆಗೆ ಹೋಗು. ನಿನ್ನ ಧರ್ಮಪರಾಯಣ ಪುಣ್ಯವತೀ ಪತ್ನಿ ಸುಕಲೆಯು ನೀನಿಲ್ಲದೆ

ಬಹಳ ದುಃಖಿತಳಾಗಿದ್ದಾಳೆ. ಅವಳನ್ನು ಸಮಾಧಾನಪಡಿಸಿ ಅವಳೊಂದಿಗೆ ಶ್ರಾದ್ಧವನ್ನು ಮಾಡು. ನಿನ್ನ ಮನೆಯಲ್ಲಿಯೇ ಪುಣ್ಯ ತೀರ್ಥಗಳನ್ನು ಸ್ಮರಿಸಿ ಶ್ರೇಷ್ಠ ದೇವತೆಗಳನ್ನು ಪೂಜಿಸು. ಇದರಿಂದ ನೀನು ಮಾಡಿದ ತೀರ್ಥಯಾತ್ರೆಯು ಸಫಲವಾಗುವುದು. ಹೀಗೆ ಹೇಳಿ ಧರ್ಮವು ಹೊರಟುಹೋಯಿತು. ಪರಮ ಬುದ್ಧಿವಂತನಾದ ಕೃಕಲನು ತನ್ನ ಪತ್ನಿಯನ್ನು ಕಂಡು ಮನಸ್ಸಿನಲ್ಲಿಯೇ ಬಹಳವಾಗಿ ಸಂತೋಷಿಸಿದನು. ಸುಕಲೆಯು ತನ್ನ ಸ್ವಾಮಿಯ ಶುಭಾಗಮನದ ಕಾರಣದಿಂದ ಮನೆಯಲ್ಲಿ ಮಂಗಳಕಾರ್ಯ ಮಾಡಿದಳು. ಅನಂತರ ಧರ್ಮಾತ್ಮ ವೈಶ್ಯನು ಧರ್ಮವು ಹೇಳಿದ ಎಲ್ಲ ವಿಚಾರವನ್ನೂ ಹೇಳಿದನು. ತನ್ನ ಸ್ವಾಮಿಯ ಆನಂದದಾಯಕ ವಚನಗಳನ್ನು ಕೇಳಿ ಮಹಾಸಾಧ್ವಿ ಸುಕಲೆಗೆ ಬಹಳ ಸಂತೋಷವಾಯಿತು. ಕೃಕಲನು ಮನೆಯಲ್ಲಿಯೇ ಪತ್ನಿಯ ಜೊತೆ ಶ್ರದ್ಧಾಪೂರ್ವವಾಗಿ ಶ್ರಾದ್ಧವನ್ನೂ, ದೇವಪೂಜೆ ಆದಿ ಪುಣ್ಯ ಕರ್ಮಗಳ ಅನುಷ್ಠಾನಗೈದನು. ಇವರಿಂದ ಪ್ರಸನ್ನರಾದ ದೇವತೆಗಳು, ಪಿತೃಗಳು, ಮತ್ತು ಮುನಿಗಣವೂ ವಿಮಾನದ ಮೂಲಕ ಅಲ್ಲಿಗೆ ಬಂದರು. ಅವರು ಮಹಾತ್ಮಾ ಕೃಕಲ ಹಾಗೂ ಸುಕಲೆಯನ್ನು ಪ್ರಶಂಶಿಸಿದರು. ತ್ರಿಮೂರ್ತಿಗಳೂ ಸಹ ತಮ್ಮ ತಮ್ಮ ದೇವಿಯರೊಡನೆ ಅಲ್ಲಿಗೆ ಆಗಮಿಸಿದರು. ಇಂದ್ರಾದಿ ಸಮಸ್ತ ದೇವತೆಗಳು ಆ ಸತೀಮಣಿಯ ಸತ್ಯದಿಂದ ಸಂತುಷ್ಟರಾದರು. ಆಗ ದೇವತೆಗಳು ಆ ದಂಪತಿಗಳಿಗೆ ಹೇಳುತ್ತಾರೆ – "ಸುವ್ರತ! ನಿಮಗೆ ಕಲ್ಯಾಣವಾಗಲಿ. ನೀನು ನಿನ್ನ ಪತ್ನಿಯೊಡನೆ ಬೇಕಾದ ವರವನ್ನು ಕೇಳು".

ಕೃಕಲನು ಕೇಳಿದನು – "ದೇವತೆಗಳಿರಾ! ನನ್ನ ಯಾವ ಪುಣ್ಯ ಮತ್ತು ತಪಸ್ಸಿನ ಕಾರಣದಿಂದ ನನಗೆ ವರ ಕರುಣಿಸಲು ನೀವು ಪತ್ನೀಸಹಿತ ಇಲ್ಲಿಗೆ ದಯ ಮಾಡಿಸಿರುವಿರಿ?" ಇಂದ್ರನು ಹೇಳಿದನು – "ಇವಳು ಪರಮ ಸಾಧ್ವೀ ಸುಕಲಾ ದೇವಿ. ಇವಳ ಸತ್ಯದಿಂದ ಸಂತುಷ್ಟರಾಗಿ ನಾವು ನಿನಗೆ ವರ ಕೊಡಲು ಇಚ್ಛಿಸುತ್ತೇವೆ." ಹೀಗೆ ಹೇಳಿ ಇಂದ್ರನು ಸುಕಲೆಯ ಸತೀತ್ವದ ಪರೀಕ್ಷೆಯ ಎಲ್ಲ ವೃತ್ತಾಂತವನ್ನೂ ಸ್ವಲ್ಪದರಲ್ಲೇ ಹೇಳಿದನು. ಪತ್ನಿಯ ಸದಾಚಾರದ ಮಹಾಶ್ಚರ್ಯವನ್ನು ಕೇಳಿ ಅವನಿಗೆ ಬಹಳ ಸಂತೋಷವಾಯಿತು.

ಹರ್ಷೋಲ್ಲಾಸದಿಂದ ಕೃಕಲನ ನೇತ್ರಗಳಲ್ಲಿ ನೀರು ಬಂದಿತು. ಧರ್ಮಾತ್ಮ ಕೃಕಲನು ಪತ್ನೀಸಹಿತ ಸಮಸ್ತ ದೇವತೆಗಳಿಗೂ ಮತ್ತೆ ಮತ್ತೆ 'ಸಾಷ್ಟಾಂಗ ನಮಸ್ಕಾರ ಮಾಡಿದನು. ಅವನು ದೇವತೆಗಳಲ್ಲಿ ನಿವೇದಿಸಿಕೊಂಡನು– "ಮಹಾಭಾಗ್ಯವಂತರಾದ ದೇವತೆಗಳಿರಾ? ತಾವೆಲ್ಲರೂ ಪ್ರಸನ್ನರಾಗಿರಿ, ತ್ರಿಮೂರ್ತಿಗಳಾದ ಬ್ರಹ್ಮ ವಿಷ್ಣು ಮಹೇಶ್ವರರೂ ನಮ್ಮನ್ನು ಅನುಗ್ರಹಿಸಿರಿ. ಅನ್ಯ ಪುಣ್ಯಾತ್ಮ ಋಷಿಗಳು ನನ್ನ ಮೇಲೆ ಕೃಪೆ ಮಾಡಿ ಇಲ್ಲಿ ದಯಮಾಡಿಸಿದ್ದಾರೆ, ಅವರೂ ಸಂತುಷ್ಟರಾಗಲಿ. ನಾನು ಯಾವಾಗಲೂ ಭಗವಂತನಲ್ಲಿ ಭಕ್ತಿಭಾವದಿಂದಿರುವಂತೆ ನನ್ನನ್ನು ಅನುಗ್ರಹಿಸಿ. ತಮ್ಮೆಲ್ಲರ ಕೃಪೆಯಿಂದ ಧರ್ಮ ಪತ್ನಿ ಪಿತೃಗಳ ಸಹಿತ ಭಗವಾನ್ ಶ್ರೀವಿಷ್ಣುವಿನ ಧಾಮಕ್ಕೆ ಹೋಗಲು ನಾನು ಬಯಸುತ್ತೇನೆ."

ದೇವತೆಗಳು ಹೇಳಿದರು – "ಮಹಾಭಾಗ್ಯವಂತನೇ! 'ತಥಾಸ್ತು' ಹಾಗೆಯೇ ಆಗಲಿ. ಇವೆಲ್ಲವೂ ನಿನಗೆ ಪ್ರಾಪ್ತವಾಗಲಿ. ಹೀಗೆ ಹೇಳಿ ದೇವತೆಗಳು ಆ ಇಬ್ಬರು ಪತಿ-ಪತ್ನಿಯರ ಮೇಲೆ ಹೂ ಮಳೆ ಸುರಿಸಿದರು. ಅವರಿಗೆ ವರವನ್ನು ಕೊಟ್ಟು ಪತಿವ್ರತೆಯನ್ನು ಹೊಗಳುತ್ತಾ ತಮ್ಮ ತಮ್ಮ ಲೋಕಗಳಿಗೆ ಹೊರಟು ಹೋದರು. ಯಾರು ಸುಕಲೆಯ ಈ ಕಥೆಯನ್ನು ಕೇಳುವರೋ ಅವರು ಎಲ್ಲ ಪಾಪಗಳಿಂದಲೂ ಮುಕ್ತರಾಗುತ್ತಾರೆ.

ಪತಿವ್ರತೆ ಸುಕಲೆಯ ಈ ಕಥೆಯಿಂದ ಪುರುಷರು ಪತ್ನಿಯನ್ನು ಬಿಟ್ಟು ಮಾಡಿದ ಯಜ್ಞ, ದಾನ, ತಪಸ್ಸು, ಶ್ರಾದ್ಧ ಮುಂತಾದವು ನಿಷ್ಫಲವಾಗುತ್ತವೆ ಎಂಬ ಉಪದೇಶವನ್ನು ಪಡೆಯಬೇಕು. ಸ್ತ್ರೀಯರು ಪಡೆಯಬೇಕಾದ ಉಪದೇಶವೆಂದರೆ ಪಾತಿವ್ರತ್ಯದ ಪ್ರಭಾವ ಎಷ್ಟು ಮಹತ್ತರವಾದುದು. ಸತಿಯ ಭಾಯದಿಂದ ಪ್ರಾಣವನ್ನುಳಿಸಿಕೊಳ್ಳಲು ದೇವರಾಜ ಇಂದ್ರನೂ ಸಹ ಪದರಿ ಓಡಿಹೋಗಬೇಕಾಯಿತು. ಅವಳ ಪಾತಿವ್ರತ್ಯದ ಕಾರಣದಿಂದ ದೇವತೆಗಳೂ, ಪಿತೃಗಳೂ, ಋಷಿಗಳೂ ಸಹ ಅವಳ ಮನೆಗೆ ಬಂದು ತ್ರಿಮೂರ್ತಿಗಳ ದರ್ಶನ ಪಡೆದು, ಅವರಿಂದ ವರ ಪಡೆದು ಮುಕ್ತರಾದರು.

❑❑

4. ಸ್ತ್ರೀಯರಿಗೆ ಸ್ವಾತಂತ್ರ್ಯದ ನಿಷೇಧ

ಭಗವದ್ಗೀತೆಯಲ್ಲಿ ಭಗವಂತನು ಹೇಳಿದನು –

ಯತಃ ಪ್ರವೃತ್ತಿರ್ಭೂತಾನಾಂ ಯೇನ ಸರ್ವಮಿದಂ ತತಮ್ ।
ಸ್ವಕರ್ಮಣಾ ತಮಭ್ಯರ್ಚ್ಯ ಸಿದ್ಧಿಂ ವಿಂದತಿ ಮಾನವಃ ॥

(೧೮/೪೬)

'ಯಾವ ಪರಮೇಶ್ವರನಿಂದ ಸಮಸ್ತ ಪ್ರಾಣಿಗಳ ಉತ್ಪತ್ತಿಯಾಗಿದೆಯೋ ಮತ್ತು ಯಾರಿಂದ ಸಮಸ್ತ ಜಗತ್ತು ವ್ಯಾಪ್ತವಾಗಿದೆಯೋ ಆ ಪರಮೇಶ್ವರನನ್ನು ತಮ್ಮ ಸ್ವಾಭಾವಿಕ ಕರ್ಮಗಳಿಂದ ಪೂಜಿಸಿ, ಮನುಷ್ಯರು ಪರಮ ಸಿದ್ಧಿಯನ್ನು ಪಡೆಯುತ್ತಾರೆ.'

ಯಾವ ರೀತಿಯಲ್ಲಿ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರ – ಈ ನಾಲ್ಕು ವರ್ಣಗಳ ಎಲ್ಲ ಮನುಷ್ಯರೂ ತಮ್ಮ ತಮ್ಮ ಕರ್ಮಗಳ ಮೂಲಕ ಭಗವಂತನನ್ನು ಪೂಜಿಸಿ ಸದ್ಗತಿಯನ್ನು ಹೊಂದುವರೋ ಅದೇ ರೀತಿ ಕನ್ಯೆಯರು, ಮತ್ತೆವೆ ರಾಗೂ ವಿಧವಾ ಸ್ತ್ರೀಯರೂ ಸಹ ತಮ್ಮ-ತಮ್ಮ ಕರ್ತವ್ಯ ಕರ್ಮಗಳ ಮೂಲಕ ಭಗವಂತನನ್ನು ಪೂಜಿಸಿ ಸದ್ಗತಿಯನ್ನು ಪಡೆಯುತ್ತಾರೆ. ಕರ್ತವ್ಯ ಯಾವುದು, ಅಕರ್ತವ್ಯ ಯಾವುದು ಇದರ ವಿಷಯದಲ್ಲಿ ಶಾಸ್ತ್ರವೇ ಪ್ರಮಾಣವಾಗಿದೆ. ಶಾಸ್ತ್ರದ ಮರ್ಯಾದೆಗೆ ಅನುಸಾರವಾಗಿ ನಡೆದುಕೊಳ್ಳುವ ಸ್ತ್ರೀಯ ಶ್ರೇಯಸ್ಸು ನಿಶ್ಚಯವಾಗಿಯೂ ಆಗುತ್ತದೆ. ಆದರೆ ಶಾಸ್ತ್ರಮರ್ಯಾದೆಯನ್ನು ತ್ಯಜಿಸಿ ಮನಸ್ಸಿಗೆ ಬಂದಂತೆ ನಡೆದುಕೊಳ್ಳುವ ಸ್ತ್ರೀಗೆ ಏನೂ ಲಾಭವಾಗುವುದಿಲ್ಲ. ಭಗವಂತನು ಗೀತೆಯಲ್ಲಿ ಹೇಳಿದ್ದಾನೆ –

ಯಃ ಶಾಸ್ತ್ರವಿಧಿಮುತ್ಸೃಜ್ಯ ವರ್ತತೇ ಕಾಮಕಾರತಃ ।
ನ ಸ ಸಿದ್ಧಿಮವಾಪ್ನೋತಿ ನ ಸುಖಂ ನ ಪರಾಂ ಗತಿಮ್ ॥

(೧೬/೨೩)

'ಯಾರು ಶಾಸ್ತ್ರವಿಧಿಯನ್ನು ತ್ಯಜಿಸಿ ಸ್ವೇಚ್ಛೆಯಿಂದ ಮನಬಂದಂತೆ ಆಚರಣೆ

ಮಾಡುವರೋ ಅವರಿಗೆ ಸಿದ್ಧಿಯಾಗಲೀ, ಪರಮ ಗತಿಯಾಗಲೀ, ಸುಖವಾಗಲೀ ಪ್ರಾಪ್ತವಾಗುವುದಿಲ್ಲ.

ಮನು ಆದಿ ಋಷಿಗಳು ಸ್ತ್ರೀ ಜೀವನದ ಸ್ವರೂಪ ಮತ್ತು ಸ್ವಭಾವವನ್ನು ಚೆನ್ನಾಗಿ ತಿಳಿದುಕೊಂಡು ಅವರ ಹಿತ-ರಕ್ಷಣೆಗಾಗಿ ಅವರನ್ನು ಸದಾ ಪುರುಷರ ಅಧೀನದಲ್ಲಿಯೇ ಇರಲು ಆಜ್ಞಾಪಿಸಿದ್ದಾರೆ –

ಬಾಲಯಾ ವಾ ಯುವತ್ಯಾ ವಾ ವೃದ್ಧಯಾ ವಾಪಿ ಯೋಷಿತಾ ।
ನ ಸ್ವಾತಂತ್ರ್ಯೇಣ ಕರ್ತವ್ಯಂ ಕಿಂಚಿತ್ಕಾರ್ಯಂ ಗೃಹೇಷ್ವಪಿ ॥
(ಮನು-೫/೧೪೭)

ಸ್ತ್ರೀ, ಬಾಲಕಿ, ಯುವತಿ, ಅಥವಾ ವೃದ್ಧ ಸ್ತ್ರೀಯಾಗಲೀ, ಅವರು ತಮ್ಮ ಮನೆಯಲ್ಲಿ ಯಾವ ಕಾರ್ಯವನ್ನೂ ಸ್ವತಂತ್ರವಾಗಿ ಮಾಡಬಾರದು.

ಬಾಲ್ಯೇ ಪಿತೃರ್ವಶೇ ತಿಷ್ಠೇತ್ ಪಾಣಿಗ್ರಾಹಸ್ಯ ಯೌವನೇ ।
ಪುತ್ರಾಣಾಂ ಭರ್ತರಿ ಪ್ರೇತೇ ನ ಭಜೇತ್ ಸ್ತ್ರೀ ಸ್ವತಂತ್ರತಾಮ್ ॥
(ಮನು - ೫/೧೪೮)

'ಬಾಲ್ಯಾವಸ್ಥೆಯಲ್ಲಿ ತಂದೆಯ ಅಧೀನದಲ್ಲಿರಬೇಕು, ಯೌವನದಲ್ಲಿ ಪತಿಯ ವಶದಲ್ಲಿರಬೇಕು, ಪತಿಯು ಮೃತನಾದರೆ ಪುತ್ರರ ಅಧೀನದಲ್ಲಿರಬೇಕು. ಅಂದರೆ ಸ್ತ್ರೀಯು ಯಾವಾಗಲೂ ಸ್ವಚ್ಛಂದತೆಯ ಆಶ್ರಯ ಹೊಂದಬಾರದು.

ಪಿತ್ರಾ ಭರ್ತ್ರಾ ಸುತೈರ್ವಾಪಿ ನೇಚ್ಛೇದ್ ವಿರಹಮಾತ್ಮನಃ ।
ಏಷಾಂ ಹಿ ವಿರಹೇಣ ಸ್ತ್ರೀ ಗರ್ಹ್ಯೇ ಕುರ್ಯಾದುಭೇ ಕುಲೇ ॥
(ಮನು - ೫/೧೪೯)

'ಅವಳು ತಂದೆ, ಗಂಡ ಅಥವಾ ಪುತ್ರರಿಂದ ಎಂದೂ ಬೇರೆ ಇರುವ ಇಚ್ಛೆ ಹೊಂದಿರಬಾರದು, ಏಕೆಂದರೆ ಇವರಿಂದ ಬೇರೆಯಾಗಿದ್ದರೆ ತವರು ಮನೆ ಮತ್ತು ಗಂಡನ ಮನೆ-ಎರಡು ಮನೆಗಳೂ ಕಳಂಕಿತವಾಗುವ ಸಂಭವ ವಿರುತ್ತದೆ.

ಸ್ತ್ರೀಯರು ಸ್ವತಂತ್ರರಾಗಿ ಆರಕ್ಷಿತರಾದರೆ ನಾನಾ ಪ್ರಕಾರದ ದೋಷಗಳು

ಉತ್ಪನ್ನವಾಗುತ್ತವೆ. ಅವರನ್ನು ರಕ್ಷಿಸಿದರೆ ತಮ್ಮ ಮತ್ತು ಧರ್ಮದ ರಕ್ಷಣೆಯಾಗುತ್ತದೆ. ಅದಕ್ಕಾಗಿ ಶಾಸ್ತ್ರದಲ್ಲಿ ಸ್ತ್ರೀಯರಿಗೆ ಸ್ವಾತಂತ್ರ್ಯವನ್ನು ನಿಷೇಧಿಸಲಾಗಿದೆ. ಶಾಸ್ತ್ರದ ಕರ್ತೃಗಳಾದ ಋಷಿ-ಮಹರ್ಷಿಗಳು, ತ್ರಿಕಾಲದರ್ಶಿಗಳೂ, ಸ್ವಾರ್ಥತ್ಯಾಗಿಗಳೂ, ಸಮದರ್ಶಿಗಳೂ, ಅನುಭವಿಗಳೂ, ಪೂರ್ವಾಪರವನ್ನು ಆಳವಾಗಿ ಚಿಂತಿಸುವವರೂ, ಹಾಗೂ ಪರಮ ಹಿತೈಷಿಗಳೂ ಆಗಿದ್ದರು. ಆದ್ದರಿಂದ ಅವರ ಮಾತುಗಳಿಗೆ ನಾವು ವಿಶೇಷ ಗಮನಕೊಟ್ಟು ಸ್ತ್ರೀಯರನ್ನು ಎಲ್ಲ ರೀತಿಯಿಂದಲೂ ರಕ್ಷಿಸಬೇಕು. ಶ್ರೀಮನುಮಹಾರಾಜರು ಹೇಳುತ್ತಾರೆ –

ಸೂಕ್ಷ್ಮೇಭ್ಯೋಽಪಿ ಪ್ರಸಂಗೇಭ್ಯಃ ಸ್ತ್ರಿಯೋ ರಕ್ಷ್ಯಾ ವಿಶೇಷತಃ ।
ದ್ವಯೋರ್ಹಿ ಕುಲಯೋಃ ಶೋಕಮಾವಹೇಯುರರಕ್ಷಿತಾಃ ॥

(ಮನು-೯/೩)

'ಆಸಕ್ತಿ ಅಥವಾ ಕುಸಂಗವೂ ಎಷ್ಟೇ ಸೂಕ್ಷ್ಮವಾಗಿದ್ದರೂ ಅವುಗಳಿಂದಲೂ ಸ್ತ್ರೀಯರನ್ನು ವಿಶೇಷವಾಗಿ ರಕ್ಷಿಸಬೇಕು. ಏಕೆಂದರೆ ಅವರು ಸುರಕ್ಷಿತರಾಗದಿದ್ದರೆ ಪತಿ ಮತ್ತು ಪಿತೃ ಎರಡೂ ಕುಲಗಳನ್ನೂ ಶೋಕದಲ್ಲಿ ತಳ್ಳಿಬಿಡುತ್ತಾರೆ.

ಸ್ವಾಂ ಪ್ರಸೂತಿಂ ಚರಿತ್ರಂ ಚ ಕುಲಮಾತ್ಮಾನಮೇವ ಚ ।
ಸ್ವಂ ಚ ಧರ್ಮಂ ಪ್ರಯತ್ನೇನ ಜಾಯಾಂ ರಕ್ಷನ್ ಹಿ ರಕ್ಷತಿ ॥

(ಮನು- ೯/೮)

'ಪತ್ನೀಯನ್ನು ಪ್ರಯತ್ನಪೂರ್ವಕವಾಗಿ ರಕ್ಷಿಸುವವನು ತನ್ನ ಸಂತಾನವನ್ನು ವರ್ಣಸಂಕರವಾಗದಂತೆ ಕಾಪಾಡುತ್ತಾನೆ. ತನ್ನ ಚರಿತ್ರೆಯನ್ನು ನಿಷ್ಕಲಂಕವಾಗಿ ಇಟ್ಟುಕೊಳ್ಳುತ್ತಾನೆ. ತನ್ನ ಕುಲ ಮರ್ಯಾದೆಯ ರಕ್ಷಣೆಯನ್ನು ಮಾಡುತ್ತಾನೆ. ಹಾಗೆಯೇ ತನ್ನ ಧರ್ಮದ ರಕ್ಷಣೆಯನ್ನೂ ಮಾಡುತ್ತಾನೆ.

ಅರ್ಥಸ್ಯ ಸಂಗ್ರಹೇ ಚೈನಾಂ ವ್ಯಯೇ ಚೈವ ನಿಯೋಜಯೇತ್ ।
ಶೌಚೇ ಧರ್ಮೇಽನ್ನಪಕ್ತ್ಯಾಂ ಚ ಪಾರಿಣಾಹ್ಯಸ್ಯ ವೇಕ್ಷಣೇ ॥

(ಮನು ೯/೧೧)

ಸ್ತ್ರೀಯ ರಕ್ಷಣೆಯ ಸರಳ ಉಪಾಯವೆಂದರೆ ಅವಳನ್ನು ಧನ ಸಂಗ್ರಹಿಸಿಡುವ

ಮತ್ತು ಯಥಾಯೋಗ್ಯವಾಗಿ ಅದನ್ನು ಖರ್ಚುಮಾಡುವ ಕೆಲಸಕ್ಕೆ ಹಚ್ಚಬೇಕು. ಮನೆಯನ್ನು ಪವಿತ್ರವಾಗಿಯೂ, ಸ್ವಚ್ಛವಾಗಿ ಇಡಲೂ, ದಾನ-ಪೂಜೆ ಮುಂತಾದ ಧರ್ಮ ಕಾರ್ಯ ಮಾಡಲೂ, ಮನೆಯ ವಸ್ತುಗಳನ್ನು ನೋಡಿಕೊಳ್ಳುವ ಕೆಲಸದಲ್ಲೂ ಅವಳನ್ನೂ ತೊಡಗಿಸಬೇಕು. ಈ ಕಾರ್ಯಗಳಲ್ಲಿ ದಕ್ಷಳಾದ ಸ್ತ್ರೀಯು ಕುಲ-ಕುಟುಂಬದ ಸೇವೆಯನ್ನು ಒಹಳ ಚೆನ್ನಾಗಿ ಮಾಡುತ್ತಾ ತಾನು ಸುರಕ್ಷಿತಳಾಗಿರುತ್ತಾಳೆ.

ಪಾನಂ ದುರ್ಜನಸಂಸರ್ಗಃ ಪತ್ಯಾ ಚ ವಿರಹೋಽಟನಮ್ ।
ಸ್ವಪ್ನೋಽನ್ಯಗೇಹವಾಸಶ್ಚ ನಾರೀಸಂದೂಷಣಾನಿ ಷಟ್ ॥
(ಮನು - ೯/೧೩)

'ಮದ್ಯಪಾನ, ದುರ್ಜನರ ಸಂಗ, ಗಂಡನಿಂದ ಬೇರೆಯಾಗಿರುವುದು, ಒಬ್ಬಳೇ ಹೊರಗೆ ತಿರುಗುವುದು, ಹೆಚ್ಚು ಮಲಗುವುದು, ಹಾಗೂ ಅನ್ಯರ ಮನೆಯಲ್ಲಿ ವಾಸ ಮಾಡುವುದು - ಇವು ಸ್ತ್ರೀಯರ ಆರು ದೋಷಗಳು. ಇವುಗಳಿಂದ ಸ್ತ್ರೀಯರು ದೂಷಿತರಾಗುವ ಸಂಭವವುಂಟು. ಆದ್ದರಿಂದ ಸ್ತ್ರೀಯರು ಇವುಗಳನ್ನು ತ್ಯಜಿಸಬೇಕು''. ಎಂದು ಮನು ಹೇಳಿದ್ದಾರೆ.

ಪಿತಾ ರಕ್ಷತಿ ಕೌಮಾರೇ ಭರ್ತಾ ರಕ್ಷತಿ ಯೌವನೇ ।
ರಕ್ಷಂತಿ ಸ್ಥವಿರೇ ಪುತ್ರಾ ನ ಸ್ತ್ರೀ ಸ್ವಾತಂತ್ರ್ಯಮರ್ಹತಿ ॥
(ಮನು -೯/೩)

'ಕೌಮಾರ್ಯಾವಸ್ಥೆಯಲ್ಲಿ ತಂದೆಯಿಂದಲೂ, ಯೌವನದಲ್ಲಿ ಪತಿಯಿಂದಲೂ, ವೃದ್ಧಾವಸ್ಥೆಯಲ್ಲಿ ಪುತ್ರನಿಂದಲೂ ಸ್ತ್ರೀಯು ರಕ್ಷಿಸಲ್ಪಡುತ್ತಾಳೆ. ಆದ್ದರಿಂದ ಅವಳು ಯಾವಾಗಲೂ ಒಬ್ಬಂಟಿಗಳಾಗಿರಬಾರದು' ಶ್ರೀಯಾಜ್ಞವಲ್ಕ್ಯರು ಹೇಳುತ್ತಾರೆ -

ರಕ್ಷೇತ್ ಕನ್ಯಾಂ ಪಿತಾ ವಿನ್ನಾಂ ಪತಿಃ ಪುತ್ರಾಸ್ತು ವಾರ್ಧಕೇ ।
ಅಭಾವೇ ಜ್ಞಾತಯಸ್ತೇಷಾಂ ನ ಸ್ವಾತಂತ್ರ್ಯಂ ಕ್ವಚಿತ್ ಸ್ತ್ರಿಯಃ ॥
(೧/೮೫)

'ವಿವಾಹದ ಪೂರ್ವದಲ್ಲಿ ಕನ್ಯೆಯನ್ನು ತಂದೆ ರಕ್ಷಿಸುತ್ತಾನೆ. ವಿವಾಹ ನಂತರ ಪತಿ ರಕ್ಷಿಸುತ್ತಾನೆ. ವೃದ್ಧಾಪ್ಯದಲ್ಲಿ ಪುತ್ರ ರಕ್ಷಿಸುತ್ತಾನೆ. ಈ ಮೂವರ ಅಭಾವದಲ್ಲಿ ಕುಟುಂಬದ ಅನ್ಯ ಸದಸ್ಯರು ಸ್ತ್ರೀಯನ್ನು ರಕ್ಷಿಸುತ್ತಾರೆ. ಏಕೆಂದರೆ ಸ್ತ್ರೀಯು ಎಲ್ಲೂ ಸ್ವತಂತ್ರಳಾಗಿ ಒಬ್ಬಂಟಿಗಳಾಗಿರಬಾರದು'.

❑❑

5. ವಿವಾಹ

ತಂದೆ ತಾಯಿಗಳ ಕರ್ತವ್ಯವೆಂದರೆ ತಮ್ಮ ಕುಲ ಮರ್ಯಾದೆಗೆ, ಯೋಗ್ಯನಾದ, ಸವರ್ಣೀಯನಾದ, ಸುಂದರನಾದ, ಶ್ರೇಷ್ಠನಾದ, ಒಳ್ಳೆಯ ಸ್ವಭಾವವುಳ್ಳ, ಗುಣವಂತನಾದ, ಸದಾಚಾರಿಯಾದ, ಪರಿಶ್ರಮಶೀಲನಾದ ಸ್ವದೇಶೀಯನಾದ ವರನನ್ನು ಪ್ರಯತ್ನಪಟ್ಟು ಹುಡುಕಿ ಅವನ ಜೊತೆ ತನ್ನ ಕನ್ಯೆಯ ವಿವಾಹ ಮಾಡಬೇಕು. ಈ ವಿಷಯದಲ್ಲಿ ನಾವು ಮನು ಹೇಳಿರುವ ವಚನಗಳ ಕಡೆಗೂ ಗಮನಕೊಡಬೇಕು. ಮನು ಹೇಳುತ್ತಾನೆ –

ಉತ್ಕೃಷ್ಟಾಯಾಭಿರೂಪಾಯ ವರಾಯ ಸದೃಶಾಯ।
ಅಪ್ರಾಪ್ತಾಮಪಿ ತಾಂ ತಸ್ಮೈ ಕನ್ಯಾಂ ದದ್ಯಾದ್ ಯಥಾವಿಧಿ ॥
ಕಾಮಮಾಮರಣಾತ್ ತಿಷ್ಠೇದ್ ಗೃಹೇ ಕನ್ಯರ್ತುಮತ್ಯಪಿ।
ನ ಚೈವೈನಾಂ ಪ್ರಯಚ್ಛೇತ್ತು ಗುಣಹೀನಾಯಕರ್ಹಿಚಿತ್ ॥

(೯/೯೦/೯೧)

'ಶ್ರೇಷ್ಠ ರೂಪವಂತ ಮತ್ತು ಕನ್ಯೆಗೆ ಯೋಗ್ಯನಾದ ವರ ಸಿಕ್ಕಿದರೆ, ಕನ್ಯೆಗೆ ವಿವಾಹ ಯೋಗ್ಯವಯಸ್ಸು ಆಗದಿದ್ದರೂ ಅವಳನ್ನು ಆ ವರನಿಗೆ ವಿಧಿ ಪೂರ್ವಕವಾಗಿ ಕೊಡಬೇಕು. (ಪಕ್ಷಾಂತರದಲ್ಲಿ) ಋತುಮತಿಯಾದ ಮೇಲೆ ಕನ್ಯೆಯು ಜನ್ಮಪೂರ್ತಿ ಮನೆಯಲ್ಲಿ ಇರಬೇಕಾಗಿ ಬಂದರೂ ಯಾರೇ ಗುಣಹೀನ, ಅಯೋಗ್ಯ ವರನಿಗೆ ಮಾತ್ರ ಎಂದೂ ಕೊಡಬಾರದು.' ಕನ್ಯೆಗೆ ಉಚಿತವಾದುದೆಂದರೆ –

ತ್ರೀಣಿ ವರ್ಷಾಣ್ಯುದೀಕ್ಷೇತ ಕುಮಾರ್ಯೃತುಮತೀ ಸತೀ ।
ಊರ್ಧ್ವಂತು ಕಾಲಾದೇತಸ್ಮಾದ್ ವಿಂದೇತ ಸದೃಶಮ್ ಪತಿಮ್ ॥
ಅದೀಯಮಾನಾ ಭರ್ತಾರಮಧಿಗಚ್ಛೇದ್ ಯದಿ ಸ್ವಯಮ್ ।
ನೈನಃ ಕಿಞ್ಚಿದವಾಪ್ನೋತಿ ನ ಚ ಯಂ ಸಾಽಧಿಗಚ್ಛತಿ ॥
(೯/೯೦/೯೧)

ಋತುಮತಿಯಾದ ಮೇಲೂ ಮೂರು ವರ್ಷಗಳವರೆಗೆ ತಂದೆಯು ದಾನ ಮಾಡುವ ನಿರೀಕ್ಷೆ ಮಾಡಬೇಕು. ಇಷ್ಟು ಸಮಯದವರೆಗೆ ಕಾದು ನೋಡಿ ಅನಂತರ ಅವಳು ಸ್ವತಃ ತನಗೆ ತಕ್ಕ ವರನನ್ನು ವರಿಸಬೇಕು. ತಂದೆಯಾಗಲಿ, ಇತರ ಪೋಷಕರಾಗಲೀ ಮೂರು ವರ್ಷಗಳವರೆಗೆ ಕನ್ಯಾದಾನ ಮಾಡದೇ ಹೋದರೆ ಯೋಗ್ಯ ಸಮಯದಲ್ಲಿ ಕನ್ಯೆಯು ಯಾರಾದರೊಬ್ಬ ಪುರುಷನನ್ನು ಪತಿಯಾಗಿ ಸ್ವೀಕರಿಸಿದರೆ ಅವಳಿಗೆ ಅದರಿಂದ ಪಾಪ ಹಗುಲುವುದಿಲ್ಲ. ಅಥವಾ ಅವಳು ಯಾರನ್ನು ವರಿಸುವಳೋ ಅವನಿಗೂ ಪಾಪ ತಟ್ಟುವುದಿಲ್ಲ.

ಕನ್ಯೆಯ ತಂದೆ, ಸಹೋದರ ಅಥವಾ ಅಭಿಭಾವಕ ವರನ ಕಡೆಯವರಿಂದ ಧನ – ಸಂಪತ್ತನ್ನು ತೆಗೆದುಕೊಳ್ಳಬಾರದು, ವಾಗ್ದಾನ ಮಾಡಿದ ಮೇಲೆ ಅದನ್ನು ಬದಲಿಸಬಾರದು. ಮನು ಮಹಾರಾಜರು ಹೇಳುತ್ತಾರೆ –

ಆದದೀತ ನ ಶೂದ್ರೋಽಪಿ ಶುಲ್ಕಂ ದುಹಿತರಂ ದದತ್ ।
ಶುಲ್ಕಂ ಗೃಹ್ಣನ್ ಕುರುತೇ ಭನ್ನಂ ದುಹಿತೃವಿಕ್ರಯಮ್ ॥
(೯/೯೮)

'ಕನ್ಯೆಯ ವಿವಾಹದಲ್ಲಿ ಶೂದ್ರನೂ ಸಹ ಶುಲ್ಕವನ್ನು ಪಡೆಯಬಾರದು. ಏಕೆಂದರೆ ಹಾಗೆ ಶುಲ್ಕ ತೆಗೆದುಕೊಳ್ಳುವವನು ರಹಸ್ಯವಾಗಿ ಕನ್ಯೆಯನ್ನು ಮಾರಿದಂತಾಗುತ್ತದೆ'.

ನಾನುಶುಶ್ರುಮ ಜಾತ್ವೇತತ್ ಪೂರ್ವೇಷ್ವಸಿ ಹಿ ಜನ್ಮಸು ।
ಶುಲ್ಕಸಂಜ್ಞೇನ ಮೂಲ್ಯೇನ ಭನ್ನಂ ದುಹಿತೃವಿಕ್ರಯಮ್ ॥
(ಮನು - ೯/೧೦೦)

"ಕನ್ಯಾ ಶುಲ್ಕವನ್ನು ಪಡೆದು ಯಾರಾದರೂ ರಹಸ್ಯವಾಗಿ ಕನ್ಯೆಯ

ವಿಕ್ರಯವನ್ನು ಮಾಡಿದ್ದಾರೆಂಬ ವಿಚಾರವನ್ನು ನಾವು ಹಿಂದಿನ ಯಾವ ಕಲ್ಪದಲ್ಲಿಯೂ ಕೇಳಿಲ್ಲ'.

ಏತತ್ತು ನ ಪರೇ ಚಕ್ರುರ್ನಾಪರೇ ಜಾತು ಸಾಧವಃ।
ಯದನ್ಯಸ್ಯ ಪ್ರತಿಜ್ಞಾಯ ಪುನರನ್ಯಸ್ಮ ದೀಯತೇ ॥

(ಮನು -೯/೯೪)

'ಪೂರ್ವದಲ್ಲಿ ಪ್ರಾಚೀನ ಸಜ್ಜನ ಪುರುಷರು ಯಾರೂ ಸಹ ಒಬ್ಬನಿಗೆ ವಾಗ್ದಾನ ಮಾಡಿ ತಮ್ಮ ಕನ್ಯೆಯನ್ನು ಎಂದೂ ಇನ್ನೊಬ್ಬನಿಗೆ ಕೊಟ್ಟ ಪ್ರಸಂಗ ಸಿಗುವುದಿಲ್ಲ. ವರ್ತಮಾನ ಕಾಲದಲ್ಲಿಯೂ ಪ್ರಾಯಶಃ ಜನರು ಹೀಗೆ ಮಾಡುವುದಿಲ್ಲ'.

❑❑

6. ಅನುಚಿತ ಹಾಸ್ಯ-ಗೇಲಿ ಮತ್ತು ಅಶ್ಲೀಲ ಹಾಡುಗಳ ತ್ಯಾಗದ ಆವಶ್ಯಕತೆ

ಕೆಲವು ಕಡೆಗಳಲ್ಲಿ ಸ್ತ್ರೀಯರು ತಮ್ಮ ಮೈದುನರ ಜೊತೆ ಹಾಸ್ಯ-ಗೇಲಿ ಮುಂತಾದುವನ್ನು ಮಾಡುತ್ತಾ ಅವರ ಹೆಸರು ಸೇರಿಸಿ ಕೆಟ್ಟ ಹಾಡುಗಳನ್ನು ಹಾಡುತ್ತಾರೆ. ಇದು ಶಾಸ್ತ್ರವಿರುದ್ಧವಾದುದು. ಅಶ್ಲೀಲವಾದ ಹಾಡುಗಳನ್ನು ಸ್ತ್ರೀಯರು ಯಾವ ಸಂದರ್ಭದಲ್ಲೂ ಹಾಡಬಾರದು ಹಾಗೂ ಮೈದುನನ ಹೆಸರನ್ನು ಹೇಳಿ ಅಶ್ಲೀಲ ಹಾಡುಗಳನ್ನು ಹಾಡುವುದು ಮಹಾಪಾಪವೆಂದು ತಿಳಿಯಬೇಕು. ಏಕೆಂದರೆ ಮೈದುನನು ಮಗನಿಗೆ ಸಮಾನ, ಮೈದುನನಿಗೆ ಅತ್ತಿಗೆಯು ತಾಯಿಯಂತೆ ವಂದನೀಯಳು. ಮನು ಹೇಳುತ್ತಾರೆ –

ಭ್ರಾತುರ್ಜ್ಯೇಷ್ಠಸ್ಯ ಭಾರ್ಯಾ ಯಾ ಗುರುಪತ್ನ್ಯನುಜಸ್ಯ ಸಾ।
ಯವೀಯಸಸ್ತು ಯಾ ಭಾರ್ಯಾ ಸ್ನುಷಾ ಜ್ಞೇಷ್ಠಸ್ಯ ಸಾ ಸ್ಮೃತಾ ॥

(೯/೫೭)

ದೊಡ್ಡ ಅಣ್ಣನ ಹೆಂಡತಿಯು ತಮ್ಮನಿಗೆ ಗುರುಪತ್ನಿಯ ಸಮಾನಳು. ತಮ್ಮನ ಸ್ತ್ರೀಯು ದೊಡ್ಡ ಅಣ್ಣನಿಗೆ ಸೊಸೆಯ ಸಮಾನಳೆಂದು ಪರಿಗಣಿಸಲ್ಪಟ್ಟಿದೆ.

ಆದ್ದರಿಂದ ಸ್ತ್ರೀಯರು ತಂದೆ, ಸಹೋದರ, ಪುತ್ರ, ಮಾವ, (ಗಂಡನ ತಂದೆ) ಭಾವ (ಗಂಡನ ಅಣ್ಣ) ಮೊದಲಾದ ಹಾಗೂ ಸಭ್ಯ ಸಮಾಜದ ಎದುರಿಗಾಗಲೀ ಅಥವಾ ಒಬ್ಬರಿದ್ದಾಗಲೀ ಅಪಶಬ್ದಗಳನ್ನು ಮತ್ತು ಅಶ್ಲೀಲ ಗೀತೆಗಳನ್ನು ಹಾಡಿದರೆ ಲೋಕದಲ್ಲಿ ನಿಂದೆಯನ್ನು ಪರಲೋಕದಲ್ಲಿ ನರಕವನ್ನು ಪಡೆಯುವುದು ನಿಶ್ಚಯವೆಂದು ತಿಳಿದಿರಬೇಕು. ಕೆಟ್ಟ ಮತ್ತು ಅಶ್ಲೀಲ ಗೀತೆಗಳಿಂದ ನಾಲಿಗೆಯು ಹೊಲಸಾಗುತ್ತದೆ. ಮನಸ್ಸಿನಲ್ಲಿ ಅಶುದ್ಧವಾದ ಅಭಿಲಾಷೆಗಳು ಪ್ರಬಲವಾಗುತ್ತವೆ. ಕೇಳುವವರ ಮೇಲೂ ಕೆಟ್ಟ ಪರಿಣಾಮಗಳುಂಟಾಗುತ್ತವೆ ಮತ್ತು ವಾತಾವರಣವೆಲ್ಲವೂ ಮಲಿನಗೊಳ್ಳುತ್ತದೆ. ಇಂತಹ ಅಶುದ್ಧವಾದ ಹಾಡುಗಳನ್ನು ಕೇಳಿ ಪ್ರಸನ್ನಗೊಂಡು ಚೆನ್ನಾಗಿದೆಯೆಂದು ಹೇಳುವ ಯಾವ ಸಜ್ಜನರು ಸಿಗಲಾರರು. ಆದ್ದರಿಂದ ಅಶುದ್ಧವಾದ ಹಾಡುಗಳನ್ನು ಹಾಡಲೂಬಾರದು. ಹಾಗೂ ಅದನ್ನು ಹಾಡುವ ಜಾಗಕ್ಕೆ ಹೋಗಲೂಬಾರದು. ಒಂದು ವೇಳೆ ಅಂತಹ ಜಾಗಕ್ಕೆ ಹೋಗಲೇಬೇಕಾಗಿ ಬಂದರೆ ಅಂತಹ ಅಶ್ಲೀಲ ಹಾಡನ್ನು ಹಾಡುವ ಸ್ತ್ರೀಯರನ್ನು ನಯವಿನಯದಿಂದ ಹಾಡದಂತೆ ತಡೆಯಬೇಕು. ತಡೆಯಲು ಎಷ್ಟು ಪ್ರಯತ್ನಪಟ್ಟರೂ ಸಾಧ್ಯವಾಗದೇ ಹೋದರೆ ಶಾಂತಿಯಿಂದ ಮೌನವಾಗಿ ಆ ಜಾಗದಿಂದ ಹೊರಟು ಬರಬೇಕು. ಅಶ್ಲೀಲವಾದ ಹಾಡುಗಳನ್ನು ಸ್ವತಃ ಹಾಡಬಾರದು. ಕೇಳಲೂ ಬಾರದು. ಹೆಣ್ಣು ಮಕ್ಕಳಿಗೂ ಕಲಿಸಬಾರದು. ಏಕೆಂದರೆ ಬಾಲ್ಯದಲ್ಲಿ ಹೆಣ್ಣು ಮಕ್ಕಳಿಗೆ ಕೆಟ್ಟ ಮತ್ತು ಅಶ್ಲೀಲ ಹಾಡುಗಳನ್ನು ಹಾಡುವ ಅಭ್ಯಾಸವಾದರೆ ಅವರಲ್ಲಿ ಜೀವನಪೂರ್ತಿ ಅದೇ ದೋಷವುಂಟಾಗಬಹುದು. ಕೆಟ್ಟ ಅಶ್ಲೀಲ ಹಾಡುಗಳನ್ನು ಹಾಡುವುದು ಒಂದು ಅನಿಷ್ಟಕಾರಿ ದುರ್ವ್ಯಸನವೇ ಆಗಿದೆ. ಇದು ಸ್ತ್ರೀ-ಪುರುಷರಿಬ್ಬರಿಂದಲೂ ನಡೆಸಿಕೊಂಡು ಬಂದುದಾಗಿದೆ. ಸ್ತ್ರೀಯರಿಗಂತೂ ಇದು ಅತ್ಯಂತ ಲಜ್ಜಾಸ್ಪದವಾದುದು ಹಾಗೂ ಹಾನಿಕಾರಕವಾದುದು. ಹಿಂದಿನ ಹಳೆಯ ಸಂಪ್ರದಾಯ ಎಂದು ಹೇಳಿ ಯಾರಾದರೂ ಇದರ ಸಮರ್ಥನೆ ಮಾಡುವುದೂ ಉಚಿತವಲ್ಲ. ಏಕೆಂದರೆ ಹಿಂದಿನಿಂದ ನಡೆದು ಬಂದಿದ್ದರೂ ಆ ಪದ್ಧತಿಯು

ಶಾಸ್ತ್ರ ವಿರುದ್ಧವಾಗಿ ಅನಿಷ್ಟ ಕಾರಿಯಾಗಿದ್ದರೆ ಅದನ್ನು ತ್ಯಜಿಸುವುದೇ ಒಳ್ಳೆಯದು ಹಾಗೂ ಹಿತಕರವಾದುದು. ಶಾಸ್ತ್ರವಿರುದ್ಧ ಕೆಟ್ಟಸಂಪ್ರದಾಯಗಳನ್ನು ತೊರೆಯುವುದಕ್ಕೂ, ಶಾಸ್ತ್ರಾನುಕೂಲ ಹಿತಕರ ಪದ್ಧತಿಗಳನ್ನು ಗ್ರಹಣ ಮಾಡುವುದಕ್ಕೂ ಸದಾ ಸಿದ್ಧರಾಗಿರಬೇಕು.

❑❑

7. ಅನಾವಶ್ಯಕ ಭೋಜನ ತ್ಯಾಗದ ಆವಶ್ಯಕತೆ

ಅಧಿಕ ಭೋಜನ ಮಾಡುವುದರಿಂದ ಮನುಷ್ಯರು ಹೆಚ್ಚು ಹೃಷ್ಟ-ಪುಷ್ಟನೂ, ಬಲಿಷ್ಟನೂ ಹಾಗೂ ವೀರ್ಯವಂತನೂ ಆಗುತ್ತಾನೆಂದು ಅಜ್ಞಾನದಿಂದ ಕೆಲವು ಸ್ತ್ರೀಯರು ತಿಳಿದಿರುತ್ತಾರೆ. ಈ ದೃಷ್ಟಿಯಿಂದ ಅವರು ಆಗ್ರಹ ಮಾಡಿ ತಮ್ಮ ಗಂಡಂದಿರಿಗೆ ಹೆಚ್ಚು ಊಟ ಮಾಡಿಸುತ್ತಾರೆ. ಆದರೆ ಇದು ಅವರ ತಪ್ಪು ತಿಳಿವಳಿಕೆ. ಅದ್ದರಿಂದ ಸ್ತ್ರೀಯಲ್ಲಿ ನಿವೇದಿಸಿ ಕೊಳ್ಳುವುದೇನೆಂದರೆ, ಅವರು ಸ್ವತಃ ರುಚಿಯಾಗಿದೆ ಎಂದು ಹಿತವಾಗಿದೆಯೆಂದು ಅಧಿಕ ಭೋಜನವನ್ನು ಮಾಡಬಾರದು ಹಾಗೂ ಪುರುಷರಿಗೂ ಬಲವಂತವಾಗಿ ಮಾಡಿಸಬಾರದು. ಸುಲಭವಾಗಿ ಅರಗುವಷ್ಟು ಭೋಜನವನ್ನು ಮಾಡಬೇಕು ಹಾಗೂ ಮಾಡಿಸಬೇಕು. ಇನ್ನೂ ಸ್ವಲ್ಪ ಆಹಾರ ಬೇಕು ಎನ್ನುವಾಗಲೇ ಆಹಾರ ಸೇವನೆಯನ್ನು ನಿಲ್ಲಿಸಬೇಕು. ಅದರಿಂದ ಲಾಭವೇ ಆಗುತ್ತದೆ. ಅದರಿಂದ ಆಹಾರದ ಪಚನ ಕ್ರಿಯೆ ಚೆನ್ನಾಗಿ ಆಗುತ್ತದೆ. ಅದರಿಂದ ಶಕ್ತಿ, ಬುದ್ಧಿ, ತೇಜಸ್ಸು, ತುಷ್ಟಿ-ಪುಷ್ಟಿ, ಮುಂತಾದವುಗಳು ವೃದ್ಧಿಯಾಗುತ್ತವೆ. ಸ್ತ್ರೀಯರ ಕರ್ತವ್ಯವೆಂದರೆ ಪತಿಯ ಇಷ್ಟಾನುಸಾರ ಒಳ್ಳೆಯ ಭೋಜನವನ್ನು ಸಿದ್ಧಪಡಿಸಬೇಕು. ಹಾಗೂ ಅವನ ಇಚ್ಛೆಯಂತೆಯೇ ಬಡಿಸಬೇಕು. ಬಲವಂತವಾಗಿ ಹೆಚ್ಚಿಗೆ ಬಡಿಸುವುದರಿಂದ ಒಂದೋ ಅವನು ತಿನ್ನದೆ ಎಂಜಲನ್ನು ಚೆಲ್ಲುತ್ತಾನೆ, ಇಲ್ಲವೇ ಹೆಚ್ಚಿಗೆ ತಿಂದರೆ ಅದು ವಿಷವಾಗಿ ಕೆಟ್ಟ ಪರಿಣಾಮವುಂಟುಮಾಡುತ್ತದೆ. ಹೀಗೆ ನಾನಾ ರೀತಿಯ ರೋಗಗಳು ಉತ್ಪನ್ನವಾಗುತ್ತವೆ. ಮನುಸ್ಮೃತಿಯಲ್ಲಿ ಹೀಗೆ ಹೇಳಿದೆ –

ಅನಾರೋಗ್ಯಮನಾಯುಷ್ಯಮಸ್ವರ್ಗ್ಯಂ ಚಾತಿಭೋಜನಮ್ ।
ಅಪುಣ್ಯಂ ಲೋಕವಿದ್ವಿಷ್ಟಂ ತಸ್ಮಾತ್ ತತ್ ಪರಿವರ್ಜಯೇತ್ ॥

(೨/೫೭)

'ಹೆಚ್ಚಾಗಿ ಭೋಜನ ಮಾಡುವುದರಿಂದ ಆರೋಗ್ಯ, ಆಯುಸ್ಸು, ಸ್ವರ್ಗ ಮತ್ತು ಪುಣ್ಯದ ನಾಶ ಹಾಗೂ ಲೋಕನಿಂದಿತವಾಗಿದೆ. ಆದ್ದರಿಂದ ಅಗತ್ಯಕ್ಕಿಂತ ಹೆಚ್ಚು ತಿನ್ನುವುದನ್ನು ಬಿಡಬೇಕು'.

❑❑

8. ಲಜ್ಜಾಶೀಲತೆ ಮತ್ತು ಪರಪುರುಷರ ತ್ಯಾಗ

ಸ್ತ್ರೀಯರು ಶಾಸ್ತ್ರ ಮರ್ಯಾದೆ ಮತ್ತು ಲೋಕಮರ್ಯಾದೆಯನ್ನು ರಕ್ಷಿಸುವುದಕ್ಕೆ ವಿಶೇಷ ಗಮನ ಕೊಡಬೇಕು. ಶಾಸ್ತ್ರಕ್ಕೆ ಅಪಚಾರವಾಗುವಂತಹ ಮತ್ತು ಲೋಕನಿಂದಿತವಾದ ಯಾವ ಕೆಲಸವನ್ನೂ ಮಾಡಬಾರದು. ಗಂಡನ ಮನೆ ಮತ್ತು ತವರು ಮನೆ ಎರಡರ ಗೌರವವನ್ನೂ ಕಾಪಾಡಬೇಕು. ಶರೀರದ ಯಾವ ಭಾಗವೂ ವಿಶೇಷವಾಗಿ ಸ್ಪಷ್ಟ-ಸಾಫಿ ಮುಚ್ಚಿರುವಂತೆ ವಸ್ತ್ರವನ್ನು ಧರಿಸಬೇಕು. ದೇಹದ ಭಾಗವು ಬೇರೆಯವರಿಗೆ ಕಾಣುವಂತೆ ತೆಳುವಾದ ವಸ್ತ್ರವನ್ನುಡಬಾರದು. ಇದರಿಂದ ಲಜ್ಜೆಯ ಹಾನಿಯಾಗುತ್ತದೆ. ಏಕೆಂದರೆ ಸ್ತ್ರೀಯರು ಯಾವುದೇ ರೀತಿಯಲ್ಲಿ ತಮ್ಮ ಅಂಗಗಳನ್ನು ಪರ ಪುರುಷರಿಗೆ ತೋರಿಸುವುದು ಶಾಸ್ತ್ರನಿಷಿದ್ಧವೂ, ಹಾನಿಕಾರಕವೂ ಆಗಿದೆ. ಸ್ತ್ರೀಯರು ತಮ್ಮ ಲಜ್ಜೆಯನ್ನು ರಕ್ಷಿಸಿಕೊಳ್ಳಲು ಎರಡು ವಸ್ತ್ರಗಳನ್ನು ಸದಾ ಧರಿಸಬೇಕು. ಒಂದು ಸೀರೆ, ಇನ್ನೊಂದು ಸೊಂಟದಿಂದ ಮೇಲೆ ಕುತ್ತಿಗೆಯವರೆಗೂ ಮುಚ್ಚಲು ಹೊಲಿದಿರುವ ರವಿಕೆ ಮುಂತಾದುವು. ಇವು ಹಲವಾರು ರೀತಿಯಲ್ಲಿರುತ್ತವೆ. ಅವುಗಳಲ್ಲಿ ಅತ್ಯಂತ ಸರಳವಾದುದನ್ನೂ ಫ್ಯಾಷನ್ ಇಲ್ಲದೇ ಇರುವುದನ್ನು ಧರಿಸಬೇಕು. ಸೀರೆಯ ಒಳಗೆ ಲಂಗವಿದ್ದರೆ ಹೆಚ್ಚು ಒಳ್ಳೆಯದು. ಎಲ್ಲಿ ಬರೀ ಲಂಗವನ್ನೇ ಧರಿಸುವ ಪದ್ಧತಿಯಿರುವುದೋ ಅಲ್ಲಿ ಮೊರನೆಯ ಇನ್ನೊಂದು ಹೊದೆಯುವ ವಸ್ತ್ರವನ್ನು ಹೊದೆಯುವುದು ಆವಶ್ಯಕ. ಹೊರಗೆ ಹೋಗುವ ಸಮಯದಲ್ಲಿ ಸೀರೆ ಉಡುವ ಸ್ತ್ರೀಯೂ ಸಹ

ಹೊದೆಯುವ ವಸ್ತ್ರವನ್ನು ಹೊದ್ದುಕೊಳ್ಳುವುದು ಉತ್ತಮ. ಸ್ತ್ರೀಯರಿಗೆ ಲಜ್ಜೆಯು ಭೂಷಣವಾದುದರಿಂದ ಅದರ ಕಡೆಗೆ ವಿಶೇಷ ಗಮನವಿರಬೇಕು. ಬೃಹದ್ಧರ್ಮ ಪುರಾಣದ ವಚನವು ಹೀಗಿದೆ –

ಗೃಹೇಷು ತನಯಾ ಭೂಷಾ ಭೂಷಾ ಸಂಸತ್ಸು ಪಂಡಿತಾಃ ।
ಸುಬುದ್ಧಿಃ ಪುಂಸು ಭೂಷಾ ಸ್ಯಾತ್ ಸ್ತ್ರೀಷು ಭೂಷಾ ಸಲಜ್ಜತಾ ॥

(ಪೂರ್ವಖಂಡ ೪/೩೦)

'ಗೃಹಸ್ಥನ ಮನೆಯಲ್ಲಿ ಬಾಲಕರು ಭೂಷಣರಾಗಿರುತ್ತಾರೆ. ಸಭೆಯಲ್ಲಿ ಪಂಡಿತರು ಭೂಷಣರಾಗಿರುತ್ತಾರೆ. ಮನುಷ್ಯನಿಗೆ ಶ್ರೇಷ್ಠ ಬುದ್ಧಿಯೇ ಭೂಷಣವಾಗಿದೆ, ಮತ್ತು ಸ್ತ್ರೀಯರಿಗೆ ಲಜ್ಜೆಯೇ ಭೂಷಣವಾಗಿದೆ.

ಅಪಂಡಿತೋ ಮೃತೋ ವಿಪ್ರೋ ಮೃತೋ ಯಜ್ಞೋ ಹ್ಯದಕ್ಷಿಣಃ ।
ಮೃತಾ ಸಭಾ ಸುಧೀಹೀನಾ ಮೃತಾ ನಾರೀ ಗತತ್ರಪಾ ॥

(ಪೂರ್ವ - ೪/೩೧)

'ಮೂರ್ಖ' ವಿಪ್ರನು ಇದ್ದರೂ ಸತ್ತಂತೆಯೇ. ದಕ್ಷಿಣೆಯಿಲ್ಲದ ಯಜ್ಞವು ನಿಷ್ಫಲವಾಗುತ್ತದೆ. ಬುದ್ಧಿವಂತರಿಲ್ಲದ ಸಭೆ ನಿಷ್ಫಲವಾಗಿದೆ ಮತ್ತು ಲಜ್ಜಾಹೀನ ನಾರಿಯು ಮೃತಪ್ರಾಯಳಂತಿರುತ್ತಾಳೆ'.

ಅಸ್ವತಂತ್ರಾ ಭವೇನ್ನಾರೀ ಸಲಜ್ಜಾ ಸ್ಮಿತಭಾಷಿಣೀ ।
ಅನಾಲಸ್ಯಾ ಸದಾ ಸ್ನಿಗ್ಧಾ ಮಿತವಾಗ್ಲೋಭವರ್ಜಿತಾ ॥

(ಉತ್ತರ ಖಂಡ - ೮/೨)

'ಸ್ತ್ರೀಯು ಯಾವಾಗಲೂ ಸ್ವಚ್ಛಂದತೆಯಿಲ್ಲದವಳಾಗಿಯೂ, ಲಜ್ಜಾಯುಕ್ತಳೂ, ಮಂದಸ್ಮಿತಳಾಗಿ ಮಾತನಾಡುವವಳೂ, ಆಲಸ್ಯರಹಿತಳೂ, ಪ್ರೇಮಪೂರ್ವಕ ಮಿತವಾಗಿ ಸಂಭಾಷಿಸುವವಳೂ ಮತ್ತು ಲೋಭರಹಿತಳೂ ಆಗಿರಬೇಕು'.

ಚಾಣಕ್ಯ ನೀತಿಯಲ್ಲೂ ಹೇಳಿದೆ –

ಅಸಂತುಷ್ಟಾ ದ್ವಿಜಾ ನಷ್ಟಾಃ ಸಂತುಷ್ಟಾಶ್ಚ ಮಹೀಭೃತಃ।
ಸಲಜ್ಜಾ ಗಣಿಕಾ ನಷ್ಟಾ ನಿರ್ಲಜ್ಜಾಶ್ಚ ಕುಲಾಂಗನಾಃ॥
(೮/೧೭)

'ಅಸಂತುಷ್ಟನಾದ ಬ್ರಾಹ್ಮಣನು ನಷ್ಟ ಹೊಂದುತ್ತಾನೆ, ಅಂದರೆ ಬ್ರಾಹ್ಮಣತ್ವದಿಂದ ಪತನನಾಗುತ್ತಾನೆ. ಸಂತುಷ್ಟರಾದ ರಾಜರು ನಷ್ಟಹೊಂದುತ್ತಾರೆ. ಅಂದರೆ, ರಾಜ್ಯ ವಿಸ್ತಾರ ಮಾಡುವುದನ್ನು ಬಿಟ್ಟರೆ, ಮಹತ್ವಾಕಾಂಕ್ಷೆಯಿಲ್ಲದೇ ಹೋದರೆ ರಾಜನು ನಷ್ಟ ಹೊಂದುತ್ತಾನೆ. ವೇಶ್ಯೆಯು ಲಜ್ಜಾಶೀಲಳಾದರೆ ಅವಳ ವೃತ್ತಿ ನಡೆಯದೆ ನಷ್ಟ ಹೊಂದುತ್ತಾಳೆ. ಕುಲೀನ ಸ್ತ್ರೀಯರು ಲಜ್ಜೆಯನ್ನು ಬಿಟ್ಟರೆ ಅವರ ಪತನವಾಗಿ ನಷ್ಟ ಹೊಂದುತ್ತಾರೆ'.

ಆದ್ದರಿಂದ ಸ್ತ್ರೀಯರು ಯಾವಾಗಲೂ ಲಜ್ಜಾಶೀಲರಾಗಿರಬೇಕು. ಪರಪುರುಷರ ಸಂಸರ್ಗದಿಂದ ಯಾವಾಗಲೂ ದೂರವಿರಬೇಕು. ಪರಪುರುಷರೆದುರಿಗೆ ನರ್ತಿಸುವುದಾಗಲೀ, ಹಾಡುವುದಾಗಲೀ, ಅಶ್ಲೀಲ ಹಾವ-ಭಾವ ತೋರಿಸುವುದಾಗಲೀ, ಕಟಾಕ್ಷ ಬೀರುವುದಾಗಲೀ, ನಗೆ ಚಟಾಕಿ-ಹಾಸ್ಯ ಮಾಡುವುದಾಗಲೀ, ಮಾಡಬಾರದು. ಅವರ ಜೊತೆ ಅನಾವಶ್ಯಕ ಭೇಟಿಯನ್ನಾಗಲೀ ಪುರುಷರ ಗೋಷ್ಠಿಯಲ್ಲಿ ಸೇರುವುದಾಗಲೀ ಮಾಡಬಾರದು. ಏಕೆಂದರೆ ಸ್ತ್ರೀಯರು ಯಾವ ಕಾರಣಕ್ಕೂ ಪರ ಪುರುಷರ ಸಂಪರ್ಕಕ್ಕೆ ಬರುವುದು ಶಾಸ್ತ್ರ ನಿಷಿದ್ಧ. ಆದ್ದರಿಂದ ಸ್ತ್ರೀಯರು ಎಂಟು ಪ್ರಕಾರದ ಮೈಥುನಗಳನ್ನು ಸರ್ವಥಾ ತ್ಯಜಿಸಬೇಕು. ಅವುಗಳೆಂದರೆ –

ಸ್ಮರಣಂ ಕೀರ್ತನಂ ಕೇಲಿಃ ಪ್ರೇಕ್ಷಣಂ ಗುಹ್ಯಭಾಷಣಮ್।
ಸಂಕಲ್ಪೋಧ್ಯವಸಾಯಶ್ಚ ಕ್ರಿಯಾನಿಷ್ಪತ್ತಿರೇವ ಚ॥
ಏತನ್ಮೈಥುನಮಷ್ಟಾಂಗಂ ಪ್ರವದಂತಿ ಮನೀಷಿಣಃ।
ವಿಪರೀತಂ ಬ್ರಹ್ಮಚರ್ಯಮೇತದೇವಾಷ್ಟಲಕ್ಷಣಮ್॥

"ಪರ ಪುರುಷನ (ರೂಪ ಲಾವಣ್ಯ ಮುಂತಾದವು ಮತ್ತು ಅಶ್ಲೀಲ ಮಾತುಗಳು) ಸ್ಮರಣೆ ಮಾಡುವುದು. ಅವರ ಸಂಬಂಧವಾಗಿ ಮಾತನಾಡುವುದು, ಅವರನ್ನು ಏಕಾಂತದಲ್ಲಿ ಭೇಟಿ ಮಾಡಲು ಸಂಕಲ್ಪಿಸುವುದು, ಪ್ರಯತ್ನಿಸುವುದು

ಮತ್ತು ಸಹವಾಸ ಮಾಡುವುದು – ಇವುಗಳನ್ನು ಎಂಟು ವಿಧ ಮೈಥುನಗಳೆಂದು ವಿದ್ವಾಂಸರು ಹೇಳುತ್ತಾರೆ. ಇವುಗಳಿಂದ ರಹಿತವಾಗಿರುವುದೇ ಎಂಟು ಲಕ್ಷಣಗಳನ್ನುಳ್ಳ ಬ್ರಹ್ಮಚರ್ಯವೆನ್ನುತ್ತಾರೆ".

ಆದ್ದರಿಂದ ಸ್ತ್ರೀಯರಲ್ಲಿ ಪ್ರಾರ್ಥನೆ ಏನೆಂದರೆ – ತಂದೆ, ಸಹೋದರ ಮತ್ತು ಪುತ್ರರ ಜೊತೆಯಲ್ಲೂ ಸಹ ಏಕಾಂತದಲ್ಲಿರಬಾರದು, ಏಕೆಂದರೆ ಇಂದ್ರಿಯಗಳ ಸೆಳತ ಬಹಳ ಬಲಶಾಲಿಯಾಗಿರುತ್ತದೆ. ಅದು ಎಂತಹ ವಿದ್ವಾಂಸನಾದ ಮನುಷ್ಯನ ಮನವನ್ನೂ ಚಂಚಲಗೊಳಿಸುತ್ತದೆ. ಇನ್ನು ಅಬಲೆಯರಾದ ಸ್ತ್ರೀಯರ ಬಗೆಗೆ ಹೇಳುವುದೇನಿದೆ. ಮನು ಹೇಳುತ್ತಾರೆ –

ಮಾತ್ರಾ ಸ್ವಸ್ರಾ ದುಹಿತ್ರಾ ವಾ ನ ವಿವಿಕ್ತಾಸನೋ ಭವೇತ್ ।
ಬಲವಾನಿಂದ್ರಿಯಗ್ರಾಮೋ ವಿದ್ವಾಂಸಮಪಿ ಕರ್ಷತಿ ॥

(೨/೨೧೫)

'ಪುರುಷರು – ತಾಯಿಯಾಗಲೀ, ಸಹೋದರಿಯಾಗಲೀ ಅಥವಾ ಮಗಳಾಗಲೀ ಇವರುಗಳ ಜೊತೆಗೆ ಏಕಾಂತದಲ್ಲಿ ಕುಳಿತುಕೊಳ್ಳಬಾರದು. ಏಕೆಂದರೆ ಇಂದ್ರಿಯ ಸಮೂಹವೂ ಅತ್ಯಂತ ಬಲಯುತವಾಗಿರುತ್ತದೆ. ಅದು ಅತ್ಯಂತ ದೊಡ್ಡ ವಿದ್ವಾಂಸರನ್ನೂ ಸಹ ವಿಷಯ ಭೋಗಗಳ ಕಡೆ ಸೆಳೆಯುತ್ತದೆ'. ಯಾವ ನಿಯಮಾನುಸಾರವಾಗಿ ಪುರುಷರು ತಾಯಿ-ಸಹೋದರಿ ಅಥವಾ ಪುತ್ರಿಯ ಜೊತೆ ಏಕಾಂತದಲ್ಲಿ ಕುಳಿತುಕೊಳ್ಳಬಾರದೆಂದು ನಿಷೇಧವಿದೆಯೋ, ಹಾಗೆಯೇ ಸ್ತ್ರೀಯರಿಗೆ ತಂದೆ, ಸಹೋದರ ಮತ್ತು ಪುತ್ರನ ಸಂಗಡ ಏಕಾಂತದಲ್ಲಿ ಕುಳಿತುಕೊಳ್ಳುವುದೂ ನಿಷೇಧವೆಂದು ತಿಳಿಯಬೇಕು. ಆದ್ದರಿಂದ ಸ್ತ್ರೀಯರು ಯಾರೇ ಪರಪುರುಷರ ಸಂಗಡ ಏಕಾಂತದಲ್ಲಿ ಕುಳಿತುಕೊಳ್ಳಬಾರದು. ಯಾರು ಪರಪುರುಷನನ್ನು ಮೋಹಿಸಿ ಕುಕರ್ಮವನ್ನು ಮಾಡುವಳೋ ಅವಳು ಭಯಂಕರ ನರಕಕ್ಕೆ ಹೋಗುವಳು. ಮನು ಮಹಾರಾಜರು ಹೇಳಿದ್ದಾರೆ –

ವ್ಯಭಿಚಾರಾತ್ತು ಭರ್ತುಃ ಸ್ತ್ರೀ ಲೋಕೇ ಪ್ರಾಪ್ನೋತಿ ನಿಂದ್ಯತಾಮ್ ।
ಶೃಗಾಲಯೋನಿಂ ಚಾಪ್ನೋತಿ ಪಾಪರೋಗೈಶ್ಚ ಪೀಡ್ಯತೇ ॥

(೯/೩೦)

ವ್ಯಭಿಚಾರ ಮಾಡುವುದರಿಂದ ಸ್ತ್ರೀಯು ಈ ಲೋಕದಲ್ಲಿ ಜನರ ನಿಂದನೆಗೆ ಗುರಿಯಾಗುತ್ತಾಳೆ. ಸತ್ತ ಮೇಲೆ ನರಿಯ ಯೋನಿಯಲ್ಲಿ ಹುಟ್ಟುತ್ತಾಳೆ. ಕೆಟ್ಟ ಕೆಟ್ಟ ರೋಗಗಳಿಂದ ಪೀಡಿತಳಾಗುತ್ತಾಳೆ.

ಬೇರೊಬ್ಬ ಸ್ತ್ರೀಯನ್ನೂ ಸಹ ಕುಕರ್ಮಕ್ಕಿಳಿಯುವಂತೆ ಮಾಡುವವಳು ಅಪಳಿಗಿಂತಲೂ (ಮೇಲೆ ಹೇಳಿದ) ಹೆಚ್ಚು ಪಾಪಕ್ಕೆ ಗುರಿಯಾಗುತ್ತಾಳೆ. ಇದಕ್ಕೆ ವಿಪರೀತವಾಗಿ ಯಾರು ಬೇರೆ ಸ್ತ್ರೀಯರನ್ನು ಕುಕರ್ಮ ಮಾಡುವುದರಿಂದ ತಪ್ಪಿಸಿ ಒಳ್ಳೆಯ ಮಾರ್ಗಕ್ಕೆ ತರುವಳೋ ಅವಳು ಪುಣ್ಯ ಭಾಗಿನಿಯಾಗುತ್ತಾಳೆ. ಆದ್ದರಿಂದ ಸ್ತ್ರೀಯರು ತಾವೂ ಕುಕರ್ಮ ಮಾಡಬಾರದು ಹಾಗೆಯೇ ಬೇರೊಬ್ಬ ಸ್ತ್ರೀಯು ಅಂತಹ ಕುಕರ್ಮ ಮಾಡಲು ಹೋದರೆ ಅವಳಿಗೆ ಬುದ್ಧಿಹೇಳಿ ಅವಳನ್ನು ತಡೆಯಬೇಕು.

9. ಸದಾಚರಣೆ

ಸ್ತ್ರೀಯರು ಪುರುಷರ ಅನುಮತಿಯಿಲ್ಲದೆ ಯಾವಾಗಲೂ ಮನೆಯಿಂದ ಹೊರಗೆ ಹೋಗಬಾರದು. ಎಲ್ಲಿಗಾದರೂ ಹೋಗಬೇಕಾಗಿ ಬಂದಾಗ ಮನೆಯವರ ಜೊತೆಯಲ್ಲಿ ಅಥವಾ ಮನೆಯವರ ಅನುಮತಿ ಪಡೆದು ಹೋಗಬೇಕು. ನಡೆಯುವಾಗ ಹೆಚ್ಚು ವೇಗದಿಂದ ನಡೆಯಬಾರದು. ಮನೆಯ ಬಾಗಿಲಿನ ಹತ್ತಿರ ಕುಳಿತುಕೊಳ್ಳುವುದಾಗಲೀ, ನಿಂತುಕೊಳ್ಳುವುದಾಗಲೀ ಮಾಡಬಾರದು. ಕಿಟಕಿಯಿಂದಲೂ ಪರಪುರುಷರನ್ನು ನೋಡಬಾರದು. ದುಷ್ಟ ಪುರುಷರ ಜೊತೆ ಮಾತನಾಡಬಾರದು. ಯಾರನ್ನೂ ಬೈಯ್ಯಬಾರದು. ಅಮೃತದಂತೆ ಹಿತವಾದ ಪ್ರೀತಿಯ ಮಾತುಗಳನ್ನಾಡಬೇಕು. ಏಕೆಂದರೆ ಬೈಗಳು ಕೇಳುವವರಿಗೆ ವಿಷದಂತೆ ಇರುತ್ತವೆ. ಸವಿಯಾದ ಮಾತುಗಳನ್ನು ಅಮೃತಮಯವಾಗಿರುತ್ತವೆ. ಬೈಯುವುದರಿಂದ ಬೈದವರಿಗೆ ಯಾವ ಲಾಭವೂ ಆಗುವುದಿಲ್ಲ. ಅದರ ಬದಲಾಗಿ ಅವರ ತಪಸ್ಸಿನ ಹಾಗೂ ಪಾಣಿಯ ಪಾವಿತ್ರ್ಯವೂ ಕ್ಷಯವಾಗುತ್ತದೆ. ಆದ್ದರಿಂದ ಇತರರನ್ನು ನಿಂದಿಸುವುದರಿಂದ ಸ್ವತಃ ತಮಗೇ ಹಾನಿ ಮಾಡಿಕೊಂಡಂತೆ. ಬೈಗಳಿಂದ ಜಗಳವಾಗುತ್ತದೆ, ಹೊಡೆದಾಟವಾಗುತ್ತದೆ,

ಮುಂದುವರಿದು ಕೋರ್ಟು-ಕಛೇರಿಯನ್ನೂ ಹತ್ತಬೇಕಾಗುತ್ತದೆ. ಅದರಿಂದ ದಾನ, ಧರ್ಮ ಮತ್ತು ಗೌರವ ಎಲ್ಲವೂ ಹಾಳಾಗುತ್ತವೆ. ಕೊನೆಗೆ ಎಲ್ಲವನ್ನೂ ಕಳೆದುಕೊಂಡು ಬುದ್ಧಿ ಬಂದಾಗ ಪಶ್ಚಾತ್ತಾಪವನ್ನೂ ಪಡಬೇಕಾಗುತ್ತದೆ. ಪರಲೋಕದಲ್ಲಿ ನರಕ ಪ್ರಾಪ್ತಿ ಹಾಗೂ ನೀಚಯೋನಿಗಳಲ್ಲಿ ಜನ್ಮ ಕಳೆಯುವುದು ಬೇರೆ ವಿಷಯ. ಆದ್ದರಿಂದ ತಮ್ಮನ್ನು ಯಾರಾದರೂ ಬೈಯ್ದರೆ ಬದಲಿಗೆ ಅವರನ್ನು ಬೈಯ್ಯದೆ ಸ್ತ್ರೀಯರು ಶಾಂತಿಯಿಂದಿದ್ದು ಅವರನ್ನು ಕ್ಷಮಿಸಬೇಕು. ಅಪರಾಧಗಳನ್ನು ಕ್ಷಮಿಸಿ ಶಾಂತಿಯಿಂದಿರುವವರನ್ನು ಶಾಸ್ತ್ರಕಾರರು ಪ್ರಶಂಸೆ ಮಾಡಿದ್ದಾರೆ. ಮಹಾ ಭಾರತದಲ್ಲಿ ಹೇಳಿದೆ –

ಶಾಂತಿಖಿಡ್ಗಃ ಕರೇ ಯಸ್ಯ ಕಿಂ ಕರಿಷ್ಯತಿ ದುರ್ಜನಃ।
ಅತೃಣೇ ಪತಿತೋ ವಹ್ನಿಃ ಸ್ವಯಮೇವೋಪಶಾಮ್ಯತಿ ॥

(ಉದ್ಯೋಗ – ೨೨/೫೫)

'ಶಾಂತಿ ರೂಪ ಖಿಡ್ಗವು ಕೈಯ್ಯಲಿರುವವರನ್ನು ದುರ್ಜನರು ಏನು ಮಾಡಬಲ್ಲರು? ಯಾವ ರೀತಿ ಹುಲ್ಲಿಲ್ಲದ ಜಾಗದಲ್ಲಿ ಬಿದ್ದ ಬೆಂಕಿಯು ಅಲ್ಲಿ ಸುಡಲು ಏನೂ ಇಲ್ಲದೆ ಸ್ವತಃ ಆರಿ ಹೋಗುವುದೋ ಅದೇ ರೀತಿ ಶಾಂತಿ ಪ್ರಿಯರನ್ನು ಶತ್ರುಗಳೂ ಸಹ ಏನೂ ಮಾಡಲಾರರು. ಬದಲಿಗೆ ಅವರೂ ಶಾಂತರಾಗಿ ಹೋಗುತ್ತಾರೆ.

❑❑

10. ಕನ್ಯೆಯರಿಗೆ ಉತ್ತಮ ಶಿಕ್ಷಣ

ಹೆಣ್ಣುಮಕ್ಕಳಿಗೆ ಬಾಲ್ಯದಿಂದಲೇ ಉತ್ತಮ ಶಿಕ್ಷಣವನ್ನು ಕೊಡಬೇಕಾದುದು ಸ್ತ್ರೀಯರ ಕರ್ತವ್ಯವಾಗಿದೆ. ತಮ್ಮ ಅತ್ತೆ-ಮಾವ, ಗಂಡ ಮತ್ತು ಹಿರಿಯರಿಗೆ ವಿನಯದಿಂದ ನಮಸ್ಕರಿಸುವುದು, ಅವರ ಸೇವೆ ಮಾಡುವುದು, ಅವರ ಆಜ್ಞಾಪಾಲನೆ ಮಾಡುವುದು ಮುಂತಾದವುಗಳ ಬಗ್ಗೆ ಅವರಿಗೆ ಉಪದೇಶ ನೀಡಬೇಕು. ಅದರಿಂದ 'ಮುಂದೆ ಅವರು ಗಂಡನ ಮನೆಯನ್ನು ಸೇರಿದಾಗ ತಮ್ಮ ಕರ್ತವ್ಯದಲ್ಲಿ ತತ್ಪರರಾಗಲು ಸಹಾಯಕವಾಗುತ್ತದೆ. ಜೊತೆಗೆ ನಾದಿನಿ, ಓರಗಿತ್ತಿ (ಗಂಡನ ಅಣ್ಣನ ಹೆಂಡತಿ) ಮುಂತಾದ ಮನೆಯಬೇರೆ ಸ್ತ್ರೀಯರ

ಜೊತೆ ಯಥಾಯೋಗ್ಯವಾಗಿ ವಿಶ್ವಾಸ ಪ್ರೀತಿಯಿಂದ ನಡೆದುಕೊಳ್ಳಲು ಕಲಿಸಬೇಕು. ಇದರಿಂದ ಅವರು ಯಾರೊಡನೆಯೂ ವೈರ-ವಿರೋಧ ಕಟ್ಟಿಕೊಳ್ಳದೆ ಎಲ್ಲರ ಜೊತೆಯೂ ಆದರ ಪ್ರೀತಿ ವಿಶ್ವಾಸಗಳಿಂದ ನಡೆದುಕೊಳ್ಳಲು ಅವಕಾಶವಾಗುತ್ತದೆ. ಯಾರನ್ನೂ ಕಟು ವಚನಗಳಿಂದ ನೋಯಿಸಬಾರದು. ಯಾವಾಗಲೂ ಎಲ್ಲರೊಡನೆ ಅಮೃತಮಯ, ಪರಿಮಿತ ಹಿತವಚನಗಳನ್ನಾಡಬೇಕು. ಓರ್ವ ಕವಿಯು ಹೀಗೆ ಹೇಳಿದ್ದಾನೆ ''ಕುಟಿಲ ವಚನಗಳು ಕೆಟ್ಟದ್ದಾಗಿದ್ದು ಶರೀರವನ್ನು ಕ್ಷಾರದಂತೆ ಸುಡುತ್ತವೆ. ಅರ್ಥಾತ್ ಕಠೋರವಾದ ನಿಂದನೆಯ ಮಾತುಗಳು ಮನಸ್ಸಿಗೆ ಹೆಚ್ಚು ನೋವನ್ನುಂಟುಮಾಡುತ್ತವೆ. ಉತ್ತಮವಾದ ಸಾಧು ವಚನಗಳು ಅಮೃತ ಧಾರೆಯು ಸುರಿದಂತೆ ಮನಸ್ಸಿಗೆ ಆನಂದದಾಯಕವಾಗಿರುತ್ತವೆ''.

ಈ ರೀತಿಯಾಗಿ ಸ್ತ್ರೀಯರು ಹೆಣ್ಣು ಮಕ್ಕಳಿಗೆ ಚಿಕ್ಕಂದಿನಿಂದಲೇ ಅಡಿಗೆ ಮಾಡುವುದು, ಬಡಿಸುವುದು, ಹೊಲಿಯುವುದು, ಹೆಣೆಯುವುದು, ಮನೆಯ ವಸ್ತುಗಳನ್ನು ಜೋಪಾನ ಮಾಡುವುದು, ಗುಡಿಸಿ-ಸಾರಿಸಿ ಮನೆಯನ್ನು ಚೊಕ್ಕಟವಾಗಿಡುವುದು ಮುಂತಾದ ಮನೆಯ ಕೆಲಸ ಕಾರ್ಯಗಳನ್ನು ಹಾಗೂ ಕಸೂತಿ ಕೆಲಸಗಳನ್ನು ಕಲಿಸಿರಬೇಕು. ಈ ಪ್ರಕಾರವಾಗಿ ಒಳ್ಳೆಯ ಶಿಕ್ಷಣಪಡೆದ ಯಾವ ಹೆಣ್ಣುಮಗಳು ಮನೆಯ ಎಲ್ಲ ಕೆಲಸ ಕಾರ್ಯಗಳನ್ನು ಚತುರತೆಯಿಂದ ಆಲಸಿಯಾಗದೆ ಮಾಡುವಳೊ, ಅವಳ ಗಂಡನ ಮನೆಯವರು ಅವಳನ್ನು ವಿಶೇಷವಾಗಿ ಆದರಿಸಿ ತಂದೆ ತಾಯಿಗಳಿಗೆ ಧನ್ಯವಾದವನ್ನರ್ಪಿಸುತ್ತಾರೆ.

❑❑

11. ಆಲಸ್ಯ - ಪ್ರಮಾದ ತ್ಯಾಗದ ಅವಶ್ಯಕತೆ

ಸ್ತ್ರೀಯರು ಸ್ವತಃ ಆಲಸಿಗಳಾಗದೆ ತಮ್ಮ ಅತ್ತೆ ಮಾವ, ಪತಿ ಮತ್ತು ಹಿರಿಯರಿಗೆ ವಿನಯಪೂರ್ವಕ ನಮಸ್ಕರಿಸುವುದು, ಅವರ ಸೇವೆಯನ್ನು ಹಾಗೂ ಆಜ್ಞಾಪಾಲನೆಯನ್ನು ಮಾಡುತ್ತಾ, ಉತ್ಸಾಹದಿಂದ ಮನಸ್ಸಿಟ್ಟು ಎಲ್ಲಾ ಕೆಲಸಗಳನ್ನು ಮಾಡಬೇಕು. ಹೀಗೆ ಮಾಡುವುದರಿಂದ ಇಹದಲ್ಲಿ ಉತ್ತಮಕೀರ್ತಿ,

ಮನೆಯಲ್ಲಿ ಸುವ್ಯವಸ್ಥೆ ಹಾಗೂ ಜೀವನದಲ್ಲಿ ಸುಖ-ಶಾಂತಿ ದೊರೆಯುತ್ತದೆ. ಪರದಲ್ಲೂ ಸಹ ಉತ್ತಮಗತಿ ಪ್ರಾಪ್ತಿಯಾಗುತ್ತದೆ.

ಇಂದಿನ ದಿನಗಳಲ್ಲಿ ಸಿರಿವಂತರ ಮನೆಯ ಸ್ತ್ರೀಯರು ಅಥವಾ ವಿದ್ಯಾವಂತ ಸ್ತ್ರೀಯರು ಕೆಲಸ ಕಾರ್ಯವನ್ನು ಮಾಡದೇ ಕಲ್ಲಿನ ಮೂರ್ತಿಯಂತೆ ಕುಳಿತಿರುತ್ತಾರೆ ಅಥವಾ ಬಣ್ಣದ ಬೊಟ್ಟಿಯಂತೆ ಚಪಲ ಚಿತ್ತರಾಗಿ ಶೋಕಿ ಮಾಡುತ್ತಾ ಉದ್ದೇಶರಹಿತರಾಗಿ ತಿರುಗಾಡುತ್ತಿರುತ್ತಾರೆ. ಈ ಶೋಕಿ ಮಾಡುವ ಸ್ತ್ರೀಯರು ನಿರುಪಯೋಗಿಗಳಾಗಿ, ಅವರಿಂದ ಯಾವ ಉಪಯೋಗೀ ಕೆಲಸ ಕಾರ್ಯಗಳೂ ಆಗುವುದಿಲ್ಲ. ಜೊತೆಗೆ ಅವರಲ್ಲಿ ಹಲವಾರು ದೋಷಗಳೂ ಉಂಟಾಗುತ್ತವೆ. ಅದ್ದರಿಂದ ಅಕರ್ಮಣ್ಯ ಮತ್ತು ವಿಲಾಸಿಗಳಾಗುವುದರಿಂದ ಅವರು ಅನೇಕ ಕಾಯಿಲೆಗಳಿಗೂ ಗುರಿಯಾಗುತ್ತಾರೆ. ವಿಲಾಸಿತನ ಹಾಗೆ ನಾಜೂಕತೆ ಇರುವವರು ರೋಗಿಗಳೇ ಆಗಿದ್ದಾರೆ. ಈ ರೀತಿ ಉದ್ಯಮವಿಲ್ಲದೆ ಕುಳಿತಿರುವ ಹಾಗೂ ಹೊರಗೆ ಅಲೆದಾಡುವ ಸ್ತ್ರೀಯರಿಗೆ ಈ ಲೋಕದಲ್ಲಿಯೂ ನಿಂದನೆ ತಪ್ಪಿದ್ದಲ್ಲ. ಪರಲೋಕದಲ್ಲಿಯೂ ಅವರಿಗೆ ಸದ್ಗತಿ ದೊರೆಯುವುದಿಲ್ಲ. ಅದ್ದರಿಂದ ಎಲ್ಲ ಸ್ತ್ರೀಯರಲ್ಲೂ ಸರ್ವದಾ ತಮ್ಮ ಕರ್ತವ್ಯ - ಕರ್ಮಗಳನ್ನು ಮನಸ್ಸಿಟ್ಟು ಮಾಡಲು ಪ್ರಾರ್ಥಿಸುತ್ತೇನೆ. ತಾಯಿ ಮತ್ತು ಅತ್ತೆಯವರು ಗೃಹಕಾರ್ಯದಲ್ಲಿ ತತ್ಪರರಾಗಿ ಹಿರಿಯರ ಸೇವೆಯನ್ನು ಆಸ್ಥೆಯಿಂದ ಮಾಡುವುದನ್ನು ಹೆಣ್ಣುಮಕ್ಕಳು - ಸೊಸೆಯರೂ ನೋಡಿದಾಗ ಅವರಿಗೂ ಗೃಹಕಾರ್ಯಗಳಲ್ಲಿ ಹಿರಿಯರ ಸೇವೆ ಮಾಡುವುದರಲ್ಲಿ ಆಸಕ್ತಿಯುಂಟಾಗುತ್ತದೆ. ಏಕೆಂದರೆ ದೊಡ್ಡವರು ಮಾಡುವ ಕಾರ್ಯವನ್ನು ನೋಡಿದಾಗ ಅವನ್ನು ಕಲಿಸದೆಯಿದ್ದರೂ ಅವುಗಳ ಪ್ರಭಾವ ಮನೆಯ ಬಾಲಕ ಬಾಲಕಿಯರ ಮೇಲಾಗುತ್ತದೆ. ಅದ್ದರಿಂದ ತಿಳಿವಳಿಕೆಯುಳ್ಳ ಸ್ತ್ರೀಯರ ಕರ್ತವ್ಯವೆಂದರೆ ಶಾಸ್ತ್ರೋಕ್ತ ವಿಧಿಯಂತೆ ಆಲಸಿಗಳಾಗದೆ ತಾವೇ ಸ್ವತಃ ಉತ್ತಮ ಕೆಲಸವನ್ನು ಮಾಡಬೇಕು. ಅದ್ದರಿಂದ ಬಾಲಕ ಬಾಲಕಿಯರಿಗೂ ಹಿರಿಯರ ದಾರಿಯಲ್ಲಿ ನಡೆಯಲು ಪ್ರೇರೇಪಣೆ ದೊರೆಯುತ್ತದೆ. ಈ ರೀತಿ ತಾವೂ ಸ್ವತಃ ಆಚರಣೆ ಮಾಡಿ ಬಾಲಕ-ಬಾಲಕಿಯರಿಗೂ ಕಲಿಯಬೇಕಾದ ಮಾತುಗಳನ್ನು ಹೇಳಿದರೆ ಅದು ಅವರ ಮೇಲೆ ಒಳ್ಳೆಯ ಪ್ರಭಾವವನ್ನು ಬೀರುತ್ತದೆ.

12. ವಿದ್ಯೆಯ ಉಪಯೋಗ

ಸ್ತ್ರೀಯರು ತಮ್ಮ ಬಾಲಕ-ಬಾಲಕಿಯರಿಗೆ ಬಾಲ್ಯದಿಂದಲೇ ವಿದ್ಯೆಯನ್ನು ಕಲಿಯಲು ಆಸಕ್ತಿ ಉಂಟು ಮಾಡಬೇಕು. ತಮ್ಮ ಮಕ್ಕಳಿಗೆ ಉತ್ತಮ ವಿದ್ಯೆಯನ್ನು ಕಲಿಸುವುದು ತಂದೆ ತಾಯಿಗಳ ಆದ್ಯ ಕರ್ತವ್ಯ. ಅವರು ತಮ್ಮ ಮಕ್ಕಳನ್ನು ಪ್ರಯತ್ನಪೂರ್ವಕವಾಗಿ ಓದಿಸಬೇಕು. ಏಕೆಂದರೆ ಚಿಕ್ಕಂದಿನಲ್ಲಿ ವಿದ್ಯೆಯನ್ನು ಕಲಿಯಲು ಸಾಧ್ಯವಾಗುತ್ತದೆ. ವಯಸ್ಸಾದ ಮೇಲೆ ಕಲಿಯುವುದು ಕಷ್ಟವಾಗುತ್ತದೆ. ವಿದ್ಯೆಯನ್ನು ಕಲಿತು ಬಾಲಕ ನಿಪುಣನಾದರೆ ಎಲ್ಲೆಲ್ಲೂ ಅವನಿಗೆ ಆದರ ಗೌರವಗಳು ದೊರೆಯುತ್ತವೆ, ಅವನ ಜೀವನ ಚೆನ್ನಾಗಿ ನಡೆಯುತ್ತದೆ, ಅವನು ಸುಖಿಯಾಗುತ್ತಾನೆ. ವಿದ್ಯೆಯನ್ನು ಕಲಿಯದೇ ಹೋದರೆ ಬಾಲಕನು ಮೂರ್ಖನಾಗುತ್ತಾನೆ. ಅವನ ಬದುಕು ದುರ್ಭರವಾಗುತ್ತದೆ, ಹೋದ ಕಡೆಯಲ್ಲೆಲ್ಲಾ ಅಪಮಾನಿತನಾಗುತ್ತಾನೆ. ದೊಡ್ಡವನಾದ ಮೇಲೆ ಎಷ್ಟು ಪ್ರಯತ್ನಪಟ್ಟರೂ ವಿದ್ಯೆಯು ತಲೆಗೆ ಹತ್ತುವುದಿಲ್ಲ. ತಮ್ಮ ಮಗನನ್ನು ಮೂರ್ಖ ಅಥವಾ ಪಂಡಿತನನ್ನಾಗಿ ಮಾಡುವುದು ತಂದೆ ತಾಯಿಗಳ ಕೈಯಲ್ಲೇ ಇದೆ. ಅವರು ಪ್ರಯತ್ನಪಟ್ಟು ಅವನನ್ನು ಓದಿಸಿದರೆ ಅವನು ವಿದ್ವಾಂಸನೂ, ನಿಪುಣನೂ ಆಗುತ್ತಾನೆ. ಏಕೆಂದರೆ ಚಿಕ್ಕಂದಿನಲ್ಲಿ ತಂದೆ-ತಾಯಿ ಮತ್ತು ಗುರುವಿನ ಮುಖಾಂತರ ಪ್ರಾಪ್ತವಾದ ವಿದ್ಯೆಯು ಯಾವಾಗಲೂ ನೆನಪಿನಲ್ಲಿರುತ್ತದೆ. 'ಮೂರು ವರುಷದ ಬುದ್ಧಿ ನೂರು ವರುಷದವರೆಗೆ' ಎಂಬ ಗಾದೆಯೇ ಇದೆ. ಮಕ್ಕಳಿಗೆ ವಿದ್ಯೆಯನ್ನು ಕಲಿಸದ, ಶಿಕ್ಷಣವನ್ನು ಕೊಡದ ತಂದೆ-ತಾಯಿಗಳು ಶತ್ರುವಿಗೆ ಸಮಾನವೆಂದು ಚಾಣಕ್ಯ ನೀತಿಯಲ್ಲಿ ಹೇಳಲಾಗಿದೆ.

ಮಾತಾ ಶತ್ರುಃ ಪಿತಾ ವೈರೀ ಯೇನ ಬಾಲೋ ನ ಪಾಠಿತಃ ।
ನ ಶೋಭತೇ ಸಭಾಮಧ್ಯೇ ಹಂಸಮಧ್ಯೇ ಬಕೋ ಯಥಾ ॥

(೨/೧೧)

'ಬಾಲಕನಿಗೆ ವಿದ್ಯೆಕಲಿಸದ ತಾಯಿ ಶತ್ರು ಮತ್ತು ತಂದೆ ವೈರಿಗಳಂತೆ ಇದ್ದಾರೆ. ವಿದ್ಯೆಯನ್ನು ಕಲಿಯದ ಬಾಲಕನು ವಿದ್ವಾಂಸರ ಸಭೆಯಲ್ಲಿ ಹಂಸಗಳ ಮಧ್ಯೆ ಬಕಪಕ್ಷಿಯಂತೆ ಶೋಭಿಸುವುದಿಲ್ಲ'.

ವಿದ್ಯೆಯಲ್ಲಿ ಅನೇಕ ಗುಣಗಳು ಇವೆ. ಎಲ್ಲ ಧನಕ್ಕಿಂತಲೂ ವಿದ್ಯಾ ಧನವೇ ಸರ್ವೋತ್ತಮವಾದುದಾಗಿದೆ. ಇದನ್ನು ಯಾರೂ ಕಿತ್ತುಕೊಳ್ಳುವುದು ಸಾಧ್ಯವಿಲ್ಲ. ಅದನ್ನು ಕೊಳ್ಳುವುದಾಗಲೀ, ನಾಶ ಮಾಡುವುದಾಗಲೀ ಸಾಧ್ಯವಾಗುವುದಿಲ್ಲ. ಅದರ ವಿಚಾರದಲ್ಲಿ ಹೀಗೆ ಹೇಳಿದೆ –

ಸರ್ವ ದ್ರವ್ಯೇಷು ವಿದ್ಯೈವ ದ್ರವ್ಯಮಾಹುರನುತ್ತಮಮ್ ।
ಅಹಾರ್ಯ ತ್ವಾದನರ್ಘ್ಯತ್ವಾದಕ್ಷಯತ್ವಾಚ್ಚ ಸರ್ವದಾ ॥

'ಎಲ್ಲ ಸಂಪತ್ತಿಗಿಂತಲೂ ವಿದ್ಯಾ ಸಂಪತ್ತೇ ಸರ್ವೋತ್ತಮವೆಂದು ಹೇಳುತ್ತಾರೆ. ಏಕೆಂದರೆ ಅದು ಸದಾ-ಸರ್ವದಾ ಕಿತ್ತುಕೊಳ್ಳಲಾಗದ ಮತ್ತು ಅಮೂಲ್ಯವಾದುದು. ಅದು ಕೊಂಡುಕೊಳ್ಳಲಾಗದಂತಹ ಸಂಪತ್ತು. ಅದು ಅಕ್ಷಯವಾದ ಮತ್ತು ನಾಶವಾಗದೇ ಇರುವ ಸಂಪತ್ತಾಗಿದೆ.

ನ ಚೌರಹಾರ್ಯಂ ನ ಚ ರಾಜಹಾರ್ಯಂ
ನ ಭಾತೃಭಾಜ್ಯಂ ನ ಚ ಭಾರಕಾರಿ ।
ವ್ಯಯೇ ಕೃತೇ ವರ್ಧತ ಏವ ನಿತ್ಯಂ
ವಿದ್ಯಾಧನಂ ಸರ್ವಧನಪ್ರಧಾನಮ್ ॥

'ವಿದ್ಯೆಯನ್ನು ಕಳ್ಳನಾಗಲೀ, ರಾಜನಾಗಲೀ ಅಪಹರಿಸಲು ಸಾಧ್ಯವಿಲ್ಲ. ಇದನ್ನು ಸಹೋದರರು ಪಾಲು ಮಾಡಿಕೊಳ್ಳಲೂ ಸಾಧ್ಯವಿಲ್ಲ. ಇದು ಭಾರವೆನಿಸುವುದೂ ಇಲ್ಲ. ವಿದ್ಯೆಯನ್ನು ದಾನ ಮಾಡುವುದರಿಂದ ಹಾಗೂ ಬೇರೆಯವರಿಗೆ ಕಲಿಸುವುದರಿಂದ-ನಿತ್ಯವೂ ಹೆಚ್ಚುತ್ತದೆ. ಆದ್ದರಿಂದ ವಿದ್ಯಾರೂಪಿ ಧನವು ಎಲ್ಲ ಧನಗಳಲ್ಲೂ ಪ್ರಧಾನವಾದುದು'. ಶ್ರೀಭರ್ತೃಹರಿ ಹೇಳುತ್ತಾನೆ –

ವಿದ್ಯಾ ನಾಮ ನರಸ್ಯ ರೂಪಮಧಿಕಂ ಪ್ರಚ್ಛನ್ನಗುಪ್ತಂ ಧನಂ
ವಿದ್ಯಾ ಭೋಗಕರೀ ಯಶಃಸುಖಕರೀ ವಿದ್ಯಾ ಗುರೂಣಾಂ ಗುರುಃ ।
ವಿದ್ಯಾ ಬಂಧುಜನೋ ವಿದೇಶಗಮನೇ ವಿದ್ಯಾ ಪರಾ ದೇವತಾ
ವಿದ್ಯಾ ರಾಜಸು ಪೂಜ್ಯತೇ ನ ಹಿ ಧನಂ ವಿದ್ಯಾವಿಹೀನಃ ಪಶುಃ ॥

(ನೀತಿಶತಕ ೧೭)

'ವಿದ್ಯೆಯೇ ಮನುಷ್ಯನ ಅಪ್ರತಿಮ ಸೌಂದರ್ಯ ಮತ್ತು ಅಡಗಿರುವ ಗುಪ್ತಧನವಾಗಿದೆ. ವಿದ್ಯೆಯು ಭೋಗ, ಯಶಸ್ಸು ಮತ್ತು ಸುಖವನ್ನು ಕೊಡುವುದು. ವಿದ್ಯೆಯು ಗುರುಗಳಿಗೆ ಗುರು, ವಿದೇಶಕ್ಕೆ ಹೋದಾಗ ವಿದ್ಯೆಯು ಬಂಧುವಿನಂತೆ ಸಹಾಯ ಮಾಡುತ್ತದೆ. ವಿದ್ಯೆಯೇ ಪರಾ (ಶ್ರೇಷ್ಠ) ದೇವತೆ. ರಾಜ ಸಭೆಗಳಲ್ಲೂ ವಿದ್ಯೆಯನ್ನು ಪೂಜಿಸಲಾಗುತ್ತದೆ, ಧನವನ್ನಲ್ಲ. ಆದ್ದರಿಂದ ಯಾರು ವಿದ್ಯಾ ವಿಹೀನನೋ ಅವನು ಪಶುವಿಗೆ ಸಮಾನನಾಗಿದ್ದಾನೆ'. ಚಾಣಾಕ್ಯ ನೀತಿಯಲ್ಲೂ ಹೀಗೆ ಹೇಳಿದೆ –

ಕಾಮಧೇನುಗುಣಾ ವಿದ್ಯಾ ಹ್ಯಕಾಲೇ ಫಲದಾಯಿನೀ ।
ಪ್ರವಾಸೇ ಮಾತೃಸದೃಶೀ ವಿದ್ಯಾ ಗುಪ್ತಂ ಧನಮ್ ಸ್ಮೃತಮ್ ॥

(೪/೫)

'ವಿದ್ಯೆಯಲ್ಲಿ ಕಾಮಧೇನುವಿನ ಗುಣಗಳಿವೆ. ಅದು ಅಕಾಲದಲ್ಲೂ ಫಲವನ್ನು ಕೊಡುತ್ತದೆ. ವಿದೇಶದಲ್ಲಿ ಮಾತೃವಿನಂತೆ ರಕ್ಷಿಸುತ್ತದೆ. ಆದ್ದರಿಂದ ವಿದ್ಯೆಯು ಮನುಷ್ಯನ ಗುಪ್ತ ಧನವಾಗಿದೆ'.

ವಿದ್ಯಾಮಿತ್ರಂ ಪ್ರವಾಸೇ ಚ ಭಾರ್ಯಾ ಮಿತ್ರಂ ಗೃಹೇಷು ಚ ।
ವ್ಯಾಧಿತಸ್ಯೌಷಧಂ ಮಿತ್ರಂ ಧರ್ಮೋ ಮಿತ್ರಂ ಮೃತಸ್ಯ ಚ ॥

(೧೨/೧೭)

"ವಿದೇಶಗಳಲ್ಲಿ ವಿದ್ಯೆಯು ಮಿತ್ರನಂತಿರುತ್ತದೆ. ಗೃಹದಲ್ಲಿ ಪತ್ನಿಯು-ಮಿತ್ರನಂತಿರುತ್ತಾಳೆ.ರೋಗಿಗೆ ಮಿತ್ರ ಔಷಧವಾದರೆ, ಸತ್ತ ಮೇಲೆ ಮನುಷ್ಯನ ಧರ್ಮವೇ ಮಿತ್ರವಾಗಿರುತ್ತದೆ".

ರೂಪಯೌವನಸಂಪನ್ನಾ ವಿಶಾಲಕುಲಸಂಭವಾಃ ।
ವಿದ್ಯಾಹೀನಾನ ಶೋಭಂತೇ ನಿರ್ಗಂಧಾ ಇವ ಕಿಂಶುಕಾಃ ॥

(೩/೮)

'ವಿದ್ಯಾರಹಿತವಾದ ಮನುಷ್ಯನು ರೂಪ-ಯೌವನ ಸಂಪನ್ನನಾಗಿ ದೊಡ್ಡ ವಂಶದಲ್ಲಿ ಹುಟ್ಟಿದರೂ ವಿದ್ವಾಂಸರ ಸಭೆಯಲ್ಲಿ ನಿರ್ಗಂಧ ಕುಸುಮವಾದ ಮುತ್ತುಗದ ಹೂವಿನಂತೆ ಶೋಭಿಸುವುದಿಲ್ಲ'.

ಯೇಷಾಂ ನ ವಿದ್ಯಾ ನ ತಪೋ ನ ದಾನಂ
ನ ಚಾಪಿ ಶೀಲಂ ನ ಗುಣೋ ನ ಧರ್ಮಃ ।
ತೇ ಮೃತ್ಯುಲೋಕೇ ಭುವಿ ಭಾರಭೂತಾ
ಮನುಷ್ಯರೂಪೇಣ ಮೃಗಾಶ್ಚರಂತಿ ॥
(೧೦/೭)

ಯಾರಲ್ಲಿ ವಿದ್ಯೆ, ತಪಸ್ಸು, ದಾನ, ಶೀಲ, ಗುಣ ಹಾಗೂ ಧರ್ಮ ವಿರುವುದಿಲ್ಲವೋ ಅವರು ಭೂಮಿಗೆ ಭಾರವಾಗಿರುತ್ತಾರೆ. ಅವರು ಮನುಷ್ಯ ರೂಪದಲ್ಲಿರುವ ಪಶುಗಳಂತೆ ಆಗಿದ್ದಾರೆ.

ಹುಡುಗ-ಹುಡುಗಿಯರಿಗೆ ವಿದ್ಯೆಯನ್ನು ಕಲಿಸಿ ಅವರನ್ನು ಗುಣವಂತರ ನ್ನಾಗಿ ಮಾಡುವುದು ತಂದೆ ತಾಯಿಗಳ ಕರ್ತವ್ಯ. ಒಬ್ಬ ಶ್ರೇಷ್ಠನಾದ ಮಗ ಹುಟ್ಟಿದರೂ ಸಾಕು, ಅವನು ತನ್ನ ತಂದೆ ತಾಯಿಗಳನ್ನು ಉದ್ಧರಿಸುತ್ತಾನೆ. ವಿದ್ವಾಂಸನೂ, ಗುಣವಂತನೂ ಆದ ಒಬ್ಬನೇ ಪುತ್ರನಿದ್ದರೆ ಸಾಕು. ಗುಣ ಹೀನರಾದ ಎಷ್ಟು ಮಕ್ಕಳಿದ್ದರೂ ಏನೂ ಪ್ರಯೋಜನವಿಲ್ಲ.

ಚಾಣಕ್ಯ ನೀತಿಯಲ್ಲಿ ಹೀಗೆ ಹೇಳಿದೆ –

ಏಕೇನಾಪಿ ಸುಪುತ್ರೇಣ ವಿದ್ಯಾಯುಕ್ತೇನ ಸಾಧುನಾ ।
ಆಹ್ಲಾದಿತಂ ಕುಲಂ ಸರ್ವಂ ಯಥಾ ಚಂದ್ರೇಣ ಶರ್ವರೀ ॥
(೫/೧೬)

'ಚಂದ್ರನಿಂದ ರಾತ್ರಿಯು ಬೆಳಗಿದಂತೆ, ಸಾಧು ಸ್ವಭಾವದ, ವಿದ್ವಾಂಸ ನಾದ ಒಬ್ಬನೇ ಪುತ್ರನಿದ್ದರೂ ಅವನಿಂದ ವಂಶವು ಆನಂದಿತ ವಾಗುತ್ತದೆ'.

ಏಕೋಪಿ ಗುಣವಾನ್ ಪುತ್ರೋ ನಿರ್ಗುಣೈಶ್ಚ ಶತೈರ್ವರಃ ।
ಏಕಶ್ಚಂದ್ರಸ್ತಮೋ ಹನ್ತಿ ನ ಚ ತಾರಾಃ ಸಹಸ್ರಶಃ ॥
(೪/೭)

'ನೂರಾರು ಗುಣಹೀನ ಪುತ್ರರಿಗಿಂತ ಒಬ್ಬನೇ ಒಬ್ಬ ಗುಣವಂತನಾದ ಪುತ್ರನೇ ಶ್ರೇಷ್ಠನು. ಚಂದ್ರನೊಬ್ಬನೇ ರಾತ್ರಿಯ ಅಂಧಕಾರವನ್ನು ತೊಲಗಿಸು

ತ್ತಾನೆ. ಆದರೆ ಸಾವಿರಾರು ತಾರೆಗಳಿದ್ದರೂ ರಾತ್ರಿಯ ಅಂಧಕಾರ ದೂರವಾಗುವು ದಿಲ್ಲ'.

ಮೂರ್ಖಶ್ಚಿರಾಯುರ್ಜಾತೋಽಪಿ ತಸ್ಮಾಜ್ಜಾತಮೃತೋ ವರಃ ।
ಮೃತಃ ಸ ಚಾಲ್ಪದುಃಖಾಯ ಯಾವಜ್ಜೀವಂ ಜಡೋ ದಹೇತ್ ॥
(೪/೭/೮)

'ಬಹು ಕಾಲ ಬಾಳುವ ಮೂರ್ಖ ಪುತ್ರನಿಗಿಂತ ಹುಟ್ಟಿದ ಕೂಡಲೇ ಮೃತ್ಯುವಶನಾಗುವ ಪುತ್ರನೇ ಶ್ರೇಷ್ಠನು. ಏಕೆಂದರೆ ಹುಟ್ಟಿದ ಕೂಡಲೇ ಸಾಯುವವನು ಸ್ವಲ್ಪ ದುಃಖಕ್ಕೆ ಕಾರಣನಾದರೆ ಮೂರ್ಖ ಪುತ್ರನು ಜೀವನಪರ್ಯಂತ ದುಃಖಕ್ಕೆ ಕಾರಣನಾಗುತ್ತಾನೆ'.

ಕುಗ್ರಾಮವಾಸಾಃ ಕುಲಹೀನಸೇವಾ
ಕುಭೋಜನಂ ಕ್ರೋಧಮುಖೀ ಚ ಭಾರ್ಯಾ ।
ಪುತ್ರಶ್ಚ ಮೂರ್ಖೋ ವಿಧವಾ ಚ ಕನ್ಯಾ
ವಿನಾಗ್ನಿನಾ ಷಟ್ ಪ್ರದಹಂತಿ ಕಾಯಮ್ ॥
(೪/೮)

'ಕುಗ್ರಾಮ ವಾಸ, ಕುಲಹೀನನಸೇವೆ, ಕುಭೋಜನ, ಕೋಪಗೊಳ್ಳುವ ಪತ್ನೀ, ಮೂರ್ಖ ಪುತ್ರ ಮತ್ತು ವಿಧವೆಯಾಗಿರುವ ಪುತ್ರಿ ಈ ಆರು ಬೆಂಕಿಯಿಲ್ಲದೆ ದೇಹವನ್ನು ಸುಡುತ್ತಿರುತ್ತವೆ.

13. ಸದ್ಗುಣಗಳ ಶಿಕ್ಷಣ

ಎಲ್ಲ ತಂದೆ ತಾಯಿಗಳೂ ತಮ್ಮ ಬಾಲಕ-ಬಾಕಿಯರಿಗೆ ವಾಣಿಯಿಂದ ಹಾಗೂ ಆಚರಣೆಗಳಿಂದ ಅವರು ಸತ್ಯವಾದಿಗಳೂ ಸದಾಚಾರಿಗಳೂ, ಸದ್ಗುಣ ಸಂಪನ್ನರೂ ಮತ್ತು ಹಿರಿಯರ ಸೇವೆ ಮಾಡುವವರೂ, ಧರ್ಮ ಭೀರುಗಳೂ, ಈಶ್ವರ ಭಕ್ತರೂ, ಲೋಕ ಮತ್ತು ಶಾಸ್ತ್ರಮರ್ಯಾದೆಗೆ ಅನುಸಾರವಾಗಿ ನಡೆಯುವವರೂ, ಒಳ್ಳೆಯ ಸ್ವಭಾವವುಳ್ಳವರೂ ಮತ್ತು ಪರಿಶ್ರಮಿಗಳೂ

ಆಗುವಂತೆ ಶಿಕ್ಷಣ ಕೊಡಬೇಕು. ಅದರಿಂದ ಅವರು ತಂದೆತಾಯಿ ಮುಂತಾದ ಹಿರಿಯರ, ಕುಟುಂಬದ ಮತ್ತು ದೇಶದ ಶ್ರೇಯಸ್ಸನ್ನು ಮಾಡುವವರಾಗುತ್ತಾರೆ.

ಕೆಲವು ತಂದೆ ತಾಯಿಗಳು ತಮ್ಮ ಮಕ್ಕಳನ್ನು ಅತಿ ಮುದ್ದು ಮಾಡಿ ವಿದ್ಯೆಯನ್ನು ಕಲಿಸುವುದಿಲ್ಲ. ಅತಿಯಾದ ಮಮತೆಯಿಂದ ತಪ್ಪು ಮಾಡಿದರೂ ದಂಡಿಸದೆ ಮುದ್ದು ಮಾಡುತ್ತಾರೆ. ಆದರೆ ವಾಸ್ತವವಾಗಿ ಅತಿಯಾದ ಮುದ್ದು-ದಮೆಯಿಂದ ಅವರು ಹಾನಿಗೊಳಗಾಗುತ್ತಾರೆ. ಒಂದು ನೀತಿ ವಚನ ಹೀಗಿದೆ–

ಲಾಲನಾದ್ ಬಹವೋ ದೋಷಾಸ್ತಾಡನಾದ್ ಬಹವೊ ಗುಣಃ ।
ತಸ್ಮಾತ್ ಪುತ್ರಂ ಚ ಶಿಷ್ಯಂ ಚ ತಾಡಯೇನ್ನ ತು ಲಾಲಯೇತ್ ॥

(ಚಾಣಕ್ಯ ನೀತಿ ೨/೧೨)

'ಅತಿಯಾದ ಮುದ್ದಿನಿಂದ ಮಕ್ಕಳಲ್ಲಿ ಬಹಳ ದೋಷಗಳುಂಟಾಗುತ್ತವೆ. ದಂಡಿಸುವುದರಿಂದ ಒಳ್ಳೆಯ ಗುಣಗಳು ಬರುತ್ತವೆ. ಆದ್ದರಿಂದ ಪುತ್ರ ಹಾಗೂ ಶಿಷ್ಯನನ್ನು ದಂಡಿಸಬೇಕೇ ಹೊರತು ಲಾಲಿಸಬಾರದು'.

ಲಾಲಯೇತ್ ಪಂಚವರ್ಷಾಣಿ ದಶವರ್ಷಾಣಿ ತಾಡಯೇತ್ ।
ಪ್ರಾಪ್ತೇ ತು ಷೋಡಶೇ ವರ್ಷೇ ಪುತ್ರೇ ಮಿತ್ರತ್ವಮಾಚರೇತ್ ॥

(೩/೧೮)

'ಐದು ವರ್ಷಗಳವರೆಗೆ ಪುತ್ರನನ್ನು ಲಾಲಿಸಬೇಕು. ಹತ್ತು ವರ್ಷಗಳವರೆಗೆ ಶಿಕ್ಷಣ ಕಲಿಸಬೇಕು. ಅಂದರೆ ಅವನು ಉಚ್ಛೃಂಖಲನಾಗದಂತೆ ನಿಯಂತ್ರಣದಲ್ಲಿಡಬೇಕು. ಆದರೆ ಹದಿನಾರು ವರ್ಷಗಳಾದ ಮೇಲೆ ಪುತ್ರನನ್ನು ಮಿತ್ರನಂತೆ ಕಾಣಬೇಕು'. ತಂದೆ, ತಾಯಿಗಳು ತಮ್ಮ ಪುತ್ರರನ್ನು ವಿಶೇಷ ರೀತಿಯಲ್ಲಿ ಬೆಳೆಸುವುದು ಉಚಿತವಾದುದು. ಪುತ್ರನು ಭಗವಂತನ ಭಕ್ತನೂ ಯೋಗಿಯೂ, ಜ್ಞಾನಿಯೂ ಆದರೆ ತಂದೆ ತಾಯಿಗಳ ಉದ್ಧಾರ ಮಾಡುತ್ತಾನೆ. ಸುಮಿತ್ರೆಯು ಲಕ್ಷ್ಮಣನಿಗೆ ಭಕ್ತಿಯ ಉಪದೇಶ ನೀಡಿದಳು. ಮೈನಾವತಿಯು ಗೋಪೀಚಂದನಿಗೆ ಯೋಗದ ಉಪದೇಶವನ್ನು ನೀಡಿದಳು. ಮದಾಲಸೆಯು ತನ್ನ ಪುತ್ರರಿಗೆ ಜ್ಞಾನದ ಉಪದೇಶ ಕೊಟ್ಟು ಅವರನ್ನು ಜ್ಞಾನಿಯನ್ನಾಗಿ ಮಾಡಿದಳು. ಇದರಿಂದ ಆ ಎಲ್ಲ ಮಾತೆಯರೂ ಉತ್ತಮಗತಿಯನ್ನು ಪಡೆದರು.

ಜರ್ಮ ಹಿಂದೀ ಕವಿ ಹೇಳುತ್ತಾನೆ –

ಜನನೀ ಜನ್ಮೆ ತೋ ಭಕ್ತ ಜನ ಕೈ ದಾತಾ ಕೈ ಸೂರ ।
ನಹಿ ತೋ ತೂ ಬಾಂಝ ರಹ ಮತೀ ಗವಾಂವೈ ನೂರ ॥

'ಹೇ ಮಾತೇಯೇ ! ನೀನು ಪುತ್ರರಿಗೆ ಜನ್ಮ ನೀಡವುದಾದರೆ ಧ್ರುವ, ಪ್ರಹ್ಲಾದ, ಅಂಬರೀಷರಂತಹ ಭಕ್ತರಿಗೆ ಜನ್ಮ ಕೊಡು ಅಥವಾ ಶಿಬಿ, ದಧೀಚಿಯಂತಹ ದಾನಶೂರರಿಗೆ ಜನ್ಮಕೊಡು ಅಥವಾ ಶಿವಾಜಿ, ಮಹಾರಾಣಾ ಪ್ರತಾಪರಂತಹ ಶೂರ ವೀರರಿಗೆ ಜನ್ಮವನ್ನು ನೀಡು. ಹಾಗೆ ನಿನ್ನಿಂದಾಗದೇ ಹೋದರೆ ಬಂಜೆಯಾಗಿಯೇ ಇರು. ಮಕ್ಕಳನ್ನು ಹೆತ್ತು ನಿನ್ನ ರೂಪವನ್ನು ಏಕೆ ಕಳೆದುಕೊಳ್ಳುತ್ತಿ !'

ಆದುದರಿಂದ ಬಾಲಕರಿಗೆ ಚಿಕ್ಕಂದಿನಿಂದಲೇ ಈಶ್ವರನಲ್ಲಿ ಭಕ್ತಿ ಪೂಜೆ, ಹಿರಿಯರ ಸೇವೆ, ಆಜ್ಞಾಪಾಲನೆ, ನಮಸ್ಕರಿಸುವುದು ಮುಂತಾದ ಉತ್ತಮ ಸದಾಚಾರದ ಶಿಕ್ಷಣವನ್ನು ಕೊಡಬೇಕು. ಸುಳ್ಳು, ಕಪಟ, ಕಳ್ಳತನ, ಹಿಂಸೆ, ಮುಂತಾದ ಕೆಟ್ಟ ಆಚರಣೆಗಳನ್ನು ತ್ಯಜಿಸಿ ನ್ಯಾಯವಾಗಿ ಧನೋಪಾರ್ಜನೆ ಮಾಡುವುದನ್ನು ಕಲಿಸಬೇಕು. ಈ ರೀತಿ ಉತ್ತಮ ಶಿಕ್ಷಣದ ಅನುಸಾರವಾಗಿ ನಡೆದರೆ ಆಯಸ್ಸು, ವಿದ್ಯೆ, ಯಶಸ್ಸು ಮತ್ತು ಶಕ್ತಿ ಹೆಚ್ಚುತ್ತದೆ. ನಿಷ್ಕಾಮ ಭಾವದಿಂದ ಮಾಡುವ ಕೆಲಸದಿಂದ ಮಂಗಳವುಂಟಾಗುವುದು. ಹಿರಿಯರ ಸೇವೆ ಮತ್ತು ಪ್ರತಿದಿನವೂ ಅವರಿಗೆ ನಮಸ್ಕರಿಸುವುದರಿಂದ ಏನು ಲಾಭವಾಗುತ್ತದೆ? ಎಂಬ ವಿಷಯವಾಗಿ ಮನು ಹೇಳುತ್ತಾರೆ –

ಅಭಿವಾದನ ಶೀಲಸ್ಯ ನಿತ್ಯಂ ವೃದ್ಧೋಪಸೇವಿನಃ ।
ಚತ್ವಾರಿ ತಸ್ಯ ವರ್ಧಂತೇ ಆಯುರ್ವಿದ್ಯಾ ಯಶೋ ಬಲಮ್ ॥
(೨/೧೨೧)

'ಯಾರು ಪ್ರತಿದಿನವೂ ಹಿರಿಯರಿಗೆ ನಮಸ್ಕರಿಸಿ ಅವರ ಸೇವೆ ಮಾಡುವರೋ ಅವರ ಆಯಸ್ಸು, ವಿದ್ಯೆ, ಕೀರ್ತಿ ಮತ್ತು ಶಕ್ತಿ – ಈ ನಾಲ್ಕು ವೃದ್ಧಿಯಾಗುತ್ತವೆ'. ಬಾಲಕರಿಗೆ ಸತ್ಯ, ಪ್ರಿಯ, ಮಧುರ, ಹಿತಕರ, ಪರಿಮಿತ ಮತ್ತು ಅಮೃತಮಯ ವಚನಗಳನ್ನು ಆಡುವಂತಹ ಶಿಕ್ಷಣವನ್ನು ಕೊಡಬೇಕು.

ಸುಳ್ಳು ಕಠೋರ, ಅಪ್ರಿಯ, ಅಹಿತಕರ ವಚನಗಳನ್ನು ಎಂದೂ ಆಡಬಾರದು. ಏಕೆಂದರೆ 'ಮಾತೇ ಮೃತ್ಯು, ಮಾತೇ ಮುಕ್ತಿ.' ಸತ್ಯ ಪ್ರಿಯ ಅಮೃತದಂತಹ ವಚನಗಳಿಂದ ಮಿತ್ರರು ದೊರೆಯುತ್ತಾರೆ. ಇದಕ್ಕೆ ವಿಪರೀತವಾಗಿ ಅಸತ್ಯ, ಅಪ್ರಿಯ ವಾಣಿಯಿಂದ ಮಿತ್ರರೂ ಶತ್ರುಗಳಾಗುತ್ತಾರೆ. ಮನು ಮಹಾರಾಜರು ಹೇಳುತ್ತಾರೆ –

ಸತ್ಯಂ ಬ್ರೂಯಾತ್ ಪ್ರಿಯಂ ಬ್ರೂಯಾನ್ನಬ್ರೂಯಾತ್ ಸತ್ಯಮಪ್ರಿಯಮ್ ।
ಪ್ರಿಯಂ ಚ ನಾನೃತಂ ಬ್ರೂಯಾದೇಷ ಧರ್ಮಃ ಸನಾತನಃ ॥

(೪/೧೩೮)

'ಸತ್ಯವಾದುದನ್ನೇ ಹೇಳು, ಪ್ರಿಯವಾದುದನ್ನು ಹೇಳು. ಆದರೆ ಅಪ್ರಿಯವಾದ ಸತ್ಯವನ್ನು ಮಾತ್ರ ಹೇಳಬೇಡ. ಪ್ರಿಯವಾಗಿದ್ದರೂ ಅಸತ್ಯವನ್ನು ಹೇಳಬೇಡ, ಇದೇ ಸನಾತನ ಧರ್ಮವಾಗಿದೆ.'

ನಾಸ್ತಿ ಸತ್ಯಾತ್ ಪರೋ ಧರ್ಮೋ ನಾನೃತಾತ್ ಪಾತಕಂ ಪರಮ್ ।
ಸ್ಥಿತಿರ್ಹಿ ಸತ್ಯಂ ಧರ್ಮಸ್ಯ ತಸ್ಮಾತ್ ಸತ್ಯಂ ನ ಲೋಪಯೇತ್ ॥

(ಮಹಾ.ಶಾಂತಿ ೧೬೨/೨೪)

'ಸತ್ಯಕ್ಕಿಂತ ಹಿರಿದಾದ ಯಾವ ಧರ್ಮವೂ ಇರುವುದಿಲ್ಲ. ಅಸತ್ಯಕ್ಕಿಂತ ದೊಡ್ಡದಾದ ಬೇರೆ ಯಾವ ಪಾಪವೂ ಇರುವುದಿಲ್ಲ. ಧರ್ಮವು ಸತ್ಯದ ಆಶ್ರಯದಿಂದಲೇ ನಿಂತಿರುತ್ತದೆ. ಆದ್ದರಿಂದ ಸತ್ಯವು ಲೋಪವಾಗದಂತೆ ನೋಡಿಕೊಳ್ಳಬೇಕು.' ಚಾಣಕ್ಯ ನೀತಿಯಲ್ಲಿ ಸತ್ಯದ ಮಹಿಮೆಯನ್ನು ಕುರಿತು ಹೀಗೆ ಹೇಳಿದೆ–

ಸತ್ಯೇನ ಧಾರ್ಯತೇ ಪೃಥ್ವೀ ಸತ್ಯೇನ ತಪತೇ ರವಿಃ ।
ಸತ್ಯೇನ ವಾತಿ ವಾಯುಶ್ಚ ಸರ್ವಂ ಸತ್ಯೇ ಪ್ರತಿಷ್ಠಿತಮ್ ॥

(೫/೧೯)

'ಸತ್ಯದ ಆಧಾರದಿಂದಲೇ ಭೂಮಿಯು ನಿಂತಿದೆ. ಸತ್ಯದಿಂದಲೇ ಸೂರ್ಯನು ಬೆಳಗುತ್ತಿದ್ದಾನೆ. ಸತ್ಯದಿಂದಲೇ ವಾಯು ಚಲಿಸುತ್ತದೆ. ಎಲ್ಲವೂ ಸತ್ಯದಲ್ಲಿಯೇ ಸ್ಥಿರವಾಗಿದೆ'. ಇನ್ನೊಂದೆಡೆ ಹೇಳಿದೆ –

ಸತ್ಯ ಬರಾಬರ ತಪ ನಹೀ ಝೂಠ ಬರಾಬರ ಪಾಪ।
ಜಾಕೆ ಹಿರದೈ ಸಾಂಚ ಹೈ ತಾಕೇ ಹಿರದೈ ಆಪ॥

'ಸತ್ಯಕ್ಕೆ ಸಮನಾದ ತಪಸ್ಸು ಇಲ್ಲ. ಸುಳ್ಳಿಗೆ ಸಮನಾದ ಪಾಪವಿಲ್ಲ. ಯಾರ ಹೃದಯದಲ್ಲಿ ಸತ್ಯವಿರುವುದೋ ಅವರ ಹೃದಯದಲ್ಲಿ ಪರಮಾತ್ಮನಿರುತ್ತಾನೆ'. ಯಾವ ಮನುಷ್ಯನು ಪ್ರಾಮಾಣಿಕವಾದ ಮಾತನ್ನು ಮೃದು ಮಧುರ ಶಬ್ದಗಳಲ್ಲಿ ಹೇಳುತ್ತಾನೋ, ಅದರಿಂದ ಕೇಳುವವರ ಮನಸ್ಸು ಪ್ರಸನ್ನವಾಗುತ್ತದೆ. ಕೇಳುವವನು ಹೇಳುವವನಿಗೆ ಅನುಕೂಲವಾಗಿ ನಡೆದುಕೊಳ್ಳುತ್ತಾನೆ.

ತುಲಸೀ ಮೀಠೇ ಬಚನಸೇ ಸುಖ ಉಪಜತ ಚಹು ಓರ್।
ಬಸೀಕರಣ ಯಹ ಮಂತ್ರ ಹೈ ತಜ ದೇ ವಚನ ಕಠೋರ್॥
ಸಬಸೋ ಹಿಲಮಿಲ ಬೋಲಿಯೇ ಮೀಠೇ ಮೀಠೇ ಬೋಲ್।
ಮೀಠೇ ಬೋಲೀ ಬೋಲಕರ ಬನೋ ಜಗತ ಅನಮೋಲ್॥

ತುಲಸೀದಾಸರು ಹೇಳುತ್ತಾರೆ – 'ಮಧುರ ವಚನಗಳನ್ನಾಡುವುದರಿಂದ ನಾಲ್ಕು ಕಡೆಯೂ ಸುಖ ಸಂತೋಷಗಳುಂಟಾಗುತ್ತವೆ. ಇದು ಎಲ್ಲರನ್ನೂ ವಶೀಕರಣ ಮಾಡಿಕೊಳ್ಳುವ ಮಂತ್ರವಾಗಿದೆ. ಕಠೋರವಚನಗಳನ್ನಾಡುವುದನ್ನು ಬಿಟ್ಟುಬಿಡಿ. ಎಲ್ಲರೊಂದಿಗೂ ಮೃದು ಮಧುರ ವಚನಗಳನ್ನೇ ಆಡಿರಿ. ಹಾಗೆ ಮಧುರ ವಚನಗಳಿಂದ ಎಲ್ಲರನ್ನು ಆತ್ಮೀಯ ಮಿತ್ರರನ್ನಾಗಿಸಿಕೊಳ್ಳಿ.

14. ದ್ವಿಜ ಬಾಲಕರಿಗೆ ಉಪನಯನ ಸಂಸ್ಕಾರದ ಆವಶ್ಯಕತೆ

ತಂದೆ ತಾಯಿಗಳು ತಮ್ಮ ಬಾಲಕರಿಗೆ ಶಾಸ್ತ್ರೋಕ್ತವಾದ ಹದಿನಾರು ಸಂಸ್ಕಾರಗಳಲ್ಲಿ ಎಷ್ಟು ಹೆಚ್ಚು ಸಾಧ್ಯವೋ ಅಷ್ಟನ್ನು ಮಾಡಿಸಬೇಕು. ಅದರಿಂದ ಅವರ ಹೃದಯವು ಉತ್ತಮ ಸಂಸ್ಕಾರವನ್ನು ಹೊಂದುತ್ತದೆ. ತಮ್ಮ ಹುಡುಗರಿಗೆ ಉಪನಯನ ಸಂಸ್ಕಾರವನ್ನು ಯಥಾ ಸಮಯದಲ್ಲಿ ಮಾಡಿಸಬೇಕಾದುದು

ದ್ವಿಜರಿಗೆ ಯೋಗ್ಯವಾದ ಕರ್ತವ್ಯವಾಗಿದೆ. ಪ್ರತಿನಿತ್ಯ ಶೌಚ-ಸ್ನಾನ, ಸಂಧ್ಯಾವಂದನೆ, ಗಾಯಿತ್ರೀ ಜಪ, ಪೂಜೆ, ಪ್ರಾರ್ಥನೆ ಮುಂತಾದ ನಿತ್ಯೋಪಾಸನೆ ಕರ್ಮಗಳನ್ನು ಕ್ರಮವಾಗಿ ಮಾಡುವಂತೆ ಅವರಿಗೆ ದ್ವಿಜತ್ವವನ್ನು ಕೊಡಬೇಕು. ಬ್ರಾಹ್ಮಣರಾಗಿದ್ದರೆ ತಮ್ಮ ಮಗಳ ಮದುವೆಯನ್ನು ಯಜ್ಞೋಪವೀತ ರಹಿತ ವ್ಯಕ್ತಿಯ ಜೊತೆ ಮಾಡಬಾರದು.

ಶ್ರೀಮನು ಹೇಳುತ್ತಾರೆ –

ನೈತೈರಪೂರ್ತೈರ್ವಿಧಿವದಾಪದ್ಯಪಿ ಹಿ ಕರ್ಹಿಚಿತ್ ।
ಬ್ರಾಹ್ಮನ್ ಯೌನಾಂಶ್ಚ ಸಂಬಂಧಾನಾಚರೇದ್ ಬ್ರಾಹ್ಮಣಃ ಸಹ ॥

ದ್ವಿಜರು ಈ ಅಪವಿತ್ರ ವ್ರಾತ್ಯರ ಜೊತೆಗೆ ಆಪತ್ತಿನ ಕಾಲದಲ್ಲಿಯೂ ಕೂಡ ನಿಯಮಾನುಸಾರ ಬ್ರಾಹ್ಮ (ಅಧ್ಯಯನ-ಅಧ್ಯಾಪನ) ಮತ್ತು ಯೌನ (ವಿವಾಹಾದಿ) ಸಂಬಂಧ ಎಂದೂ ಮಾಡಬಾರದು.

ಇಂದಿನ ಕಾಲದಲ್ಲಿ ಅನೇಕ ದ್ವಿಜರಲ್ಲಿ ಉಪನಯನ ಸಂಸ್ಕಾರಗಳು ಆಗುವುದಿಲ್ಲ. ಕೇಳಿದಾಗ ಹೇಳುತ್ತಾರೆ – ಹಿಂದೆ ನಮ್ಮ ಮನೆಯಲ್ಲಿ ಯಾರೋ ಉಪನಯನ ಮಾಡಿಕೊಂಡು ಅವನು ಸ್ವಲ್ಪದಿನಗಳಲ್ಲಿ ಸತ್ತುಹೋದನು. ಅಂದಿನಿಂದ ನಮ್ಮಲ್ಲಿ ಉಪನಯನ ಮಾಡುವುದು ನಿಲ್ಲಿಸಿಬಿಟ್ಟಿದ್ದೇವೆ. ಇದು ಪ್ರಸ್ತುತ ವಿಂಡಿತ ಅಜ್ಞಾನವಾಗಿದೆ ಹಾಗೂ ಮೂರ್ಖತೆಯ ಕೆಟ್ಟ ಸಂಸ್ಕಾರವಾಗಿದೆ. ಜನಿವಾರವು ಯಾರನ್ನಾದರೂ ಕೊಲ್ಲಲು ಹೇಗೆ ಕಾರಣವಾಗುತ್ತದೆ ? ಅಲ್ಲದೆ ಅದು ರಕ್ಷಣೆಯ ಕಾರಣವಾಗಿದೆ. ಜನಿವಾರ ಹಾಕಿಕೊಳ್ಳದವರೂ ಸಾಯುತ್ತಾರೆ. ಒಂದು ವೇಳೆ ಮದುವೆಯಾಗಿ ಮಗನು ಸ್ವಲ್ಪದಿನಗಳಲ್ಲಿ ಸತ್ತುಹೋದರೆ ನಾವು ಬೇರೆ ಮಕ್ಕಳ ಮದುವೆ ಮಾಡುವುದನ್ನು ನಿಲ್ಲಿಸಿಬಿಡುತ್ತೇವೆಯೇ ? ಉಪನಯನದ ಮಾತು ಹೀಗೆ ಆಗಿದೆ. ಆದುದರಿಂದ ಉಪನಯನ ಮಾಡದಿರುವುದು ಅಜ್ಞಾನವಲ್ಲದೆ ಮತ್ತೇನಿದೆ?

ಆದುದರಿಂದ ಅಂತಹ ಸ್ತ್ರೀ-ಪುರುಷರಲ್ಲಿ ಉಪನಯನ ಮಾಡುವುದರಿಂದ ಹುಡುಗ ಸತ್ತು ಹೋಗುತ್ತಾನೆ ಎಂಬ ಭ್ರಮೆಯನ್ನು ಬಿಟ್ಟು ಉಪನಯನದ ಉತ್ತಮ ಸಂಪ್ರದಾಯವನ್ನು ರೂಢಿಸಿಕೊಳ್ಳಬೇಕೆಂದು ಪ್ರಾರ್ಥಿಸುತ್ತೇನೆ.

ಯಜ್ಞೋಪವೀತವಿಲ್ಲದ ದ್ವಿಜರಿಗೆ ವೇದಗಳಲ್ಲಿ, ಸಂಧ್ಯಾವಂದನೆಯಲ್ಲಿ, ಗಾಯತ್ರೀ ಮಂತ್ರದಲ್ಲಿ ಅಧಿಕಾರವಿಲ್ಲ. ಅವರಿಗೆ ವೇದಮಂತ್ರಗಳಿಂದ ತರ್ಪಣಕೊಡುವುದಕ್ಕೆ, ಶ್ರಾದ್ಧಕರ್ಮ ಮಾಡುವುದಕ್ಕೆ, ಪಿಂಡದಾನ ಮಾಡುವುದಕ್ಕೆ ಅಧಿಕಾರವಿಲ್ಲ. ಆದ್ದರಿಂದ ಬಾಲಕರಿಗೆ ವಿವಾಹದ ಮೊದಲೇ ಯಜ್ಞೋಪವೀತದ ಸಂಸ್ಕಾರವನ್ನು ಅವಶ್ಯಕವಾಗಿ ಮಾಡಬೇಕು. ಅವರಿಗೆ ಸಂಧ್ಯಾವಂದನೆ, ಗಾಯತ್ರೀಜಪ ಮುಂತಾದ ನಿತ್ಯ ಕರ್ಮಗಳನ್ನು ಮಾಡಲು ಅಭ್ಯಾಸ ಮಾಡಿಸಬೇಕು. ನಿತ್ಯಕರ್ಮಗಳನ್ನು ಮಾಡುವುದರಿಂದ ಮನುಷ್ಯನಿಗೆ ಆಯುಸ್ಸು, ಕೀರ್ತಿ ಮತ್ತು ಶಕ್ತಿಯು ವೃದ್ಧಿಯಾಗುತ್ತದೆ. ಬುದ್ಧಿಯು ಶುದ್ಧವಾಗುತ್ತದೆ ಹಾಗೂ ಎಲ್ಲ ಪಾಪಗಳಿಂದಲೂ ಮುಕ್ತರಾಗುತ್ತಾರೆ. ಆದ್ದರಿಂದ ಬಾಲಕರಿಗೆ ಪ್ರಾತಃಕಾಲ ಎದ್ದು ಶೌಚ-ಸ್ನಾನಾದಿಗಳನ್ನು ಮುಗಿಸಿ ಸಂಧ್ಯಾವಂದನೆ ಮುಂತಾದ ನಿತ್ಯ ಕರ್ಮಗಳನ್ನು ಮಾಡುವ ಶಿಕ್ಷಣವನ್ನು ಕೊಡಬೇಕು. ಮನುಸ್ಮೃತಿಯಲ್ಲಿ ಹೇಳಿದೆ –

ಉತ್ಥಾಯಾವಶ್ಯಕಂ ಕೃತ್ವಾ ಕೃತಶೌಚಃ ಸಮಾಹಿತಃ ।
ಪೂರ್ವಾಂ ಸಂಧ್ಯಾಂ ಜಪಂಸ್ತಿಷ್ಠೇತ್ಸ್ವಕಾಲೇ ಚಾಪರಾಂ ಚಿರಮ್ ।
ಋಷಯೋ ದೀರ್ಘಸಂಧ್ಯತ್ವಾದ್ ದೀರ್ಘಮಾಯುರವಾಪ್ನುಯುಃ ।
ಪ್ರಜ್ಞಾಂ ಯಶಶ್ಚ ಕೀರ್ತಿಂ ಚ ಬ್ರಹ್ಮಪರ್ಚಸಮೇವ ಚ ॥

(೪/೯೩/೯೪)

'ದ್ವಿಜರು ಹಾಸಿಗೆಯಿಂದ ಎದ್ದು ಅಗತ್ಯವಾದ ಶೌಚ-ಸ್ನಾನವನ್ನು ಮಾಡಿ ಪವಿತ್ರರಾಗಬೇಕು. ಎಚ್ಚರದಿಂದ ಎರಡೂ ಕಾಲದ ಸಂಧ್ಯಾವಂದನೆಯ ವಿಷಯದಲ್ಲಿ ಶಾಸ್ತ್ರಗಳಲ್ಲಿ ಹೇಳಿರುವ ಕಾಲದಲ್ಲಿ ಅಂದರೆ ಸೂರ್ಯೋದಯಕ್ಕೆ ಮೊದಲು ಪ್ರಾತಃಸಂಧ್ಯಾ ವಂದನೆಯನ್ನು ಮಾಡಬೇಕು ಮತ್ತು ಸೂರ್ಯಾಸ್ತದ ಮೊದಲು ಸಾಯಂಸಂಧ್ಯೆಯನ್ನು ಮಾಡಬೇಕು. ಹೆಚ್ಚು ಸಮಯದವರಿಗೆ ಗಾಯತ್ರೀ ಜಪ ಮಾಡುತ್ತಿರಬೇಕು. ಏಕೆಂದರೆ ಋಷಿಗಳು ದೀರ್ಘವಾಗಿ ಸಂಧ್ಯೆ ಮಾಡಿದ್ದರಿಂದ ಹೆಚ್ಚಿನ ಆಯಸ್ಸು, ಬುದ್ಧಿ, ಯಶಸ್ಸು ಮತ್ತು ಕೀರ್ತಿ ಹಾಗೂ ಬ್ರಹ್ಮ ತೇಜಸ್ಸನ್ನು ಪ್ರಾಪ್ತ ಮಾಡಿಕೊಂಡರು.

❑❑

15. ವಿಪತ್ತಿನಲ್ಲಿಯೂ ಧರ್ಮವನ್ನು ಬಿಡಬಾರದು

ಮಾತೆಯರು-ಸಹೋದರಿಯರು ಎಂತಹ ವಿಪತ್ತಿನ ಸಮಯ ಬಂದರೂ ಧರ್ಮದ ಮರ್ಯಾದೆಯನ್ನು ತ್ಯಜಿಸಬಾರದು. ಮಹಾಭಾರತದಲ್ಲಿ ಹೀಗೆ ಹೇಳಿದೆ –

ನ ಜಾತು ಕಾಮಾನ್ನ ಭಯಾನ್ನ ಲೋಭಾದ್
ಧರ್ಮಂ ಜಹ್ಯಾಜ್ಜೀವಿತಸ್ಯಾಪಿ ಹೇತೋಃ ।
ನಿತ್ಯೋ ಧರ್ಮಃ ಸುಖದುಃಖೇ ತ್ವನಿತ್ಯೇ
ಜೀವೋ ನಿತ್ಯೋ ಹೇತುರಸ್ಯ ತ್ವನಿತ್ಯಃ ॥
(ಉದ್ಯೋಗ. ೩೮/೧೨/೧೩)

'ಮನುಷ್ಯನು ಯಾವುದೇ ಸಮಯದಲ್ಲಾಗಲಿ ಕಾಮಕ್ಕಾಗಿ, ಭಯಕ್ಕಾಗಿ, ಲೋಭ ಅಥವಾ ಜೀವನ ರಕ್ಷಣೆಗಾಗಿ ಧರ್ಮವನ್ನು ತ್ಯಜಿಸಬಾರದು. ಏಕೆಂದರೆ ಧರ್ಮನಿತ್ಯವಾದುದು, ಸುಖ-ದುಃಖ ಅನಿತ್ಯವಾದುದು, ಜೀವ ನಿತ್ಯವಾದುದು ಮತ್ತು ಜೀವನದ ಹೇತು ಅನಿತ್ಯವಾದುದೆಂದು ತಿಳಿಯಬೇಕು'. ಜಗಜ್ಜನನಿಯಾದ ಸೀತೆಯು ಅತ್ಯಂತ ಭಾರೀ ಆಪತ್ತು ಬಂದರೂ, ರಾವಣನು ಪ್ರಲೋಭನೆಯನ್ನು ಮತ್ತು ಭಯವನ್ನು ತೋರಿಸಿದರೂ ಅವಳು ತನ್ನ ಧರ್ಮವನ್ನು ತ್ಯಜಿಸಲಿಲ್ಲ, ಬದಲಾಗಿ ಪ್ರಾಣತ್ಯಾಗವನ್ನು ಮಾಡಲು ಯೋಚಿಸಿದಳು. ಅವಳು ಜಗಜ್ಜನನಿಯಾಗಿದ್ದರೂ ಅವಳ ಆಚರಣೆ ತಾತ್ತ್ವಿಕವಾಗಿ ಜನರಿಗೆ ಶಿಕ್ಷಣಕೊಡಬೇಕೆಂಬುದೇ ಆಗಿತ್ತು. ಮರ್ಯಾದಾ ಪುರುಷೋತ್ತಮ ಶ್ರೀರಾಮನ ಮತ್ತು ಸೀತೆಯ ಅವತಾರವು ಜನರಿಗೆ ಶಿಕ್ಷಣ ಕೊಡಲೆಂದೇ ಆಗಿತ್ತು. ಆದ್ದರಿಂದ ನಾವು ಯಥಾಶಕ್ತಿ ಅವರನ್ನು ಅನುಸರಿಸಲು ಪ್ರಯತ್ನ ಮಾಡಬೇಕು. ಸತ್ತ ಮೇಲೆ ಈ ಜಗತ್ತಿನಿಂದ ಧರ್ಮಮಾತ್ರವೇ ನಮ್ಮ ಜೊತೆ ಬರುತ್ತದೆ ಮತ್ತು ಅದೇ ನಮ್ಮನ್ನು ಈ ಭವಸಾಗರದಿಂದ ಪಾರು ಮಾಡುತ್ತದೆ. ಆದ್ದರಿಂದ ನಾವು ನಿಶ್ಚಯವಾಗಿಯೂ ಧರ್ಮದ ಪಾಲನೆ ಮಾಡಬೇಕು.

ಮನು ಹೇಳುತ್ತಾರೆ –

ನಾಮುತ್ರ ಹಿ ಸಹಾಯಾರ್ಥಂ ಪಿತಾ ಮಾತಾ ಚ ತಿಷ್ಠತಿ ।
ನ ಪುತ್ರದಾರಾ ನ ಜ್ಞಾತಿರ್ಧರ್ಮಸ್ತಿಷ್ಠತಿ ಕೇವಲಃ ॥
ಏಕಃ ಪ್ರಜಾಯತೇ ಜಂತುರೇಕ ಏವ ಪ್ರಲೀಯತೇ ।
ಏಕೋಽನುಭುಂಕ್ತೇ ಸುಕೃತಮೇಕ ಏವ ಚ ದುಷ್ಕೃತಮ್ ।
ಮೃತಂ ಶರೀರಮುತ್ಸೃಜ್ಯ ಕಾಷ್ಠಲೋಷ್ಠಸಮಂ ಕ್ಷಿತೌ ।
ವಿಮುಖಾ ಬಾಂಧವಾ ಯಾಂತಿ ಧರ್ಮಸ್ತಮನುಗಚ್ಛತಿ ॥
ತಸ್ಮಾದ್ಧರ್ಮಂ ಸಹಯಾರ್ಥಂ ನಿತ್ಯಂ ಸಂಚಿನುಯಾಚ್ಛನೈಃ ।
ಧರ್ಮೇಣ ಹಿ ಸಹಾಯೇನ ತಮಸ್ತರತಿ ದುಸ್ತರಮ್ ॥

(೪/೨೩೯-೨೪೨)

'ಪರಲೋಕದಲ್ಲಿ ಮನುಷ್ಯನ ಸಹಾಯಕ್ಕಾಗಿ ತಾಯಿಯಾಗಲೀ, ತಂದೆಯಾಗಲೀ, ಪುತ್ರನಾಗಲೀ, ಪತ್ನೀಯಾಗಲೀ, ಜ್ಞಾತಿ ಬಂಧುಗಳಾಗಲೀ ಜೊತೆಯಲ್ಲಿ ಬರುವುದಿಲ್ಲ. ಅಲ್ಲಿಯಾದರೋ ಕೇವಲ ಧರ್ಮವೊಂದೇ ಕೆಲಸಕ್ಕೆ ಬರುತ್ತದೆ. ಜೀವವು ಹುಟ್ಟುವಾಗಲೂ ಒಂಟಿಯೇ, ಸಾಯುವಾಗಲೂ ಒಂಟಿಯೇ. ಒಂಟಿಯಾಗಿಯೇ ಪಾಪಪುಣ್ಯದ ಫಲವನ್ನು ಜೀವವು ಅನುಭವಿಸುತ್ತಾನೆ. ಸಹೋದರರು – ಬಂಧುಗಳು, ಪ್ರಾಣವಿಲ್ಲದ ಶರೀರವನ್ನು ಕಟ್ಟಿಗೆ ಮತ್ತು ಮಣ್ಣಿನ ಹೆಂಟೆಯಂತೆ ಕಂಡು ಸುಟ್ಟು ಅಲ್ಲಿಯೇ ನೆಲದ ಮೇಲೆ ಬಿಟ್ಟು ಪಾಪಸ್ಸು ಬರುತ್ತಾರೆ. ಆ ಸಮಯದಲ್ಲಿ ಕೇವಲ ಧರ್ಮವೊಂದೇ ಆ ಪ್ರಾಣಿಯ ಜೊತೆ ಹೋಗುತ್ತದೆ. ಆದ್ದರಿಂದ ಪರಲೋಕದಲ್ಲಿ ಸಹಾಯಕ್ಕಾಗಿ ಇಹದಲ್ಲಿ ನಿತ್ಯವೂ ಸ್ವಲ್ಪ-ಸ್ವಲ್ಪವಾಗಿ ಧರ್ಮಸಂಚಯ ಮಾಡಬೇಕು. ಏಕೆಂದರೆ ಧರ್ಮದ ಸಹಾಯದಿಂದಲೇ ಮನುಷ್ಯನು ದುಸ್ತರವಾದ ಅಂಧಕಾರ ಮಯವಾದ ನರಕಾದಿ ಲೋಕವನ್ನು ದಾಟುತ್ತಾನೆ. ಚಾಣಕ್ಯ ನೀತಿಯಲ್ಲಿಯೂ ಹೇಳಿದೆ –

ಚಲಾ ಲಕ್ಷ್ಮೀಶ್ಚಲಾಃ ಪ್ರಾಣಾಶ್ಚಲೇ ಜೀವಿತಮಂದಿರೇ ।
ಚಲಾಚಲೇ ಚ ಸಂಸಾರೇ ಧರ್ಮ ಏಕೋ ಹಿ ನಿಶ್ಚಲಃ ।

(೫/೨೦)

ಲಕ್ಷ್ಮೀಯು ಚಂಚಲೆ, ಈ ಪ್ರಾಣವೂ ಹೋಗುವಂತಹುದು. ಈ

ಜೀವನವೂ, ಮನೆಯೂ ನಾಶವಾಗುವಂತಹುದು. ಈ ಚರಾಚರ ಜಗತ್ತಿನಲ್ಲಿ ಧರ್ಮವೊಂದೇ ನಿಶ್ಚಲ (ಅವಿನಾಶಿ) ವಾದುದು'.

ಅನಿತ್ಯಾನಿ ಶರೀರಾಣಿ ವಿಭವೋ ನೈವ ಶಾಶ್ವತಃ।
ನಿತ್ಯಂ ಸನ್ನಿಹಿತೋ ಮೃತ್ಯುಃ ಕರ್ತವ್ಯೋ ಧರ್ಮಸಂಗ್ರಹಃ॥
(೧೨/೧೨)

'ಈ ಶರೀರಗಳು ಅನಿತ್ಯವಾದುವುಗಳು, ನಾಶವಾಗುವಂತವುಗಳಾಗಿವೆ. ಈ ವೈಭವವೂ ಸದಾ ಇರುವಂಥದ್ದಲ್ಲ. ಮೃತ್ಯುವು ಯಾವಾಗಲೂ ಹತ್ತಿರ ನಿಂತೇ ಇರುತ್ತದೆ. ಆದ್ದರಿಂದ ಧರ್ಮವನ್ನು ಸಂಗ್ರಹಿಸಬೇಕು'.

❑❑

16. ಪತಿವ್ರತಾ ಧರ್ಮ

ಇನ್ನು ಪತಿವ್ರತಾ ಸ್ತ್ರೀಯರ ಧರ್ಮವನ್ನು ಹೇಳಲಾಗುತ್ತದೆ. ಮುಖ್ಯವೆ ಸ್ತ್ರೀಯರಿಗೆ ಪತಿ ಸೇವೆಯನ್ನು ಬಿಟ್ಟು ಬೇರೆ ಏನೂ ಇರುವುದಿಲ್ಲ.ಆದ್ದರಿಂದ ಅವರು ಶ್ರದ್ಧಾಪ್ರೇಮದಿಂದ ಸದಾ ಪತಿ ಸೇವೆಯಲ್ಲಿಯೇ ತತ್ಪರರಾಗಿರಬೇಕು. ಶ್ರದ್ಧಾಪ್ರೇಮದಿಂದ ಮಾಡಿದ ಕೆಲಸ ಶೀಘ್ರವಾಗಿ ಫಲದಾಯಕವಾಗಿರುತ್ತದೆ. ನಿಷ್ಕಾಮಭಾವದಿಂದ ಪತಿ ಸೇವೆ ಮಾಡುವ ಸ್ತ್ರೀಯರಿಗೆ ಅಂತಃಕರಣದ ಶುದ್ಧಿಯು ಶೀಘ್ರವಾಗಿ ಆಗುತ್ತದೆ. ಆದ್ದರಿಂದ ಪರಮಾತ್ಮನ ಪ್ರಾಪ್ತಿಯಾಗುತ್ತದೆ. ಆದ್ದರಿಂದ ಸ್ತ್ರೀಯು ತನ್ನ ಪತಿಯ ಸೇವೆಯನ್ನು ನಿಷ್ಕಾಮ ಭಾವದಿಂದ ಮಾಡಬೇಕು. ಸೌಭಾಗ್ಯವತಿ ಸ್ತ್ರೀಗೆ ಪತಿಯೇ ಸರ್ವಸ್ವ. ಯಜ್ಞ, ದಾನ, ತಪಸ್ಸು, ತೀರ್ಥ, ವ್ರತ, ಉಪವಾಸ ದೇವತಾರಾಧನೆ, ಸೇವೆ ಇವೆಲ್ಲ ಸೇರಿದರೂ ಪತಿಸೇವೆಗೆ ಸಮಾನವಾಗಲಾರದವು. ತೀರ್ಥ, ವ್ರತ, ಪೂಜೆ ಮೊದಲಾದು ವೆಲ್ಲವನ್ನೂ ಸ್ತ್ರೀಯು ಪತಿಯ ಜೊತೆಯಲ್ಲಿಯೇ ಮಾಡಬೇಕು. ಅಥವಾ ಪತಿಯು ಆಜ್ಞೆಯನ್ನು ಪಡೆದು ಸ್ವತಃ ಮಾಡಬೇಕು. ಪತಿಯ ಆಜ್ಞೆಯಿಲ್ಲದೆ ಕಥಾ- ಕೀರ್ತನೆಗಳಿಗೆ, ಸಾಧು-ಮಹಾತ್ಮರ ಬಳಿಗೆ ದೇವ ಮಂದಿರಗಳಿಗೆ, ತೀರ್ಥ ಯಾತ್ರೆಗೆ ಹೋಗಬಾರದು. ಎಲ್ಲಿಗೆ ಹೋಗಬೇಕಾದರೂ ಒಂಟಿಯಾಗಿ ಹೋಗದೆ ಯಥಾ ಸಂಭವ ತನ್ನ ಪತಿಯೊಡನೆಯೇ ಹೋಗಬೇಕು. ಪತಿಯನ್ನು ಬಿಟ್ಟು ಸ್ವಚ್ಛಂದತಾ

ಪೂರ್ವಕವಾಗಿ ಯಜ್ಞ, ದಾನ, ತಪಸ್ಸು, ವ್ರತ, ತೀರ್ಥಕ್ಷೇತ್ರಗಳಿಗೆ ಹೋಗುವುದು ಮುಂತಾಗಿ ಮಾಡುವುದನ್ನು ಸ್ತ್ರೀಯರಿಗೆ ನಿಷೇಧಿಸಲಾಗಿದೆ. ಪತಿಸೇವೆಯಿಂದಲೇ ಈ ಎಲ್ಲ ಪ್ರಕಾರದ ಪೂರ್ಣ ಸಫಲತೆ ದೊರೆಯುತ್ತದೆ. ಪದ್ಮ ಪುರಾಣದಲ್ಲಿ ಹೇಳಿದೆ –

ಯುವತೀನಾಂ ಪೃಥಕ್ ತೀರ್ಥಂ ವಿನಾ ಭರ್ತುರ್ದ್ವಿಜೋತ್ತಮ ।
ಸುಖದಂನಾಸ್ತಿ ವೈ ಲೋಕೇ ಸ್ವರ್ಗಮೋಕ್ಷಪ್ರದಾಯಕಮ್ ॥

(ಭೂಮಿ – ೪೧/೧೨)

ಸುಕಲೆಯು ತನ್ನ ಪತಿಗೆ ಹೇಳಿದಳು – 'ದ್ವಿಜೋತ್ತಮ' ಯುವತಿಯರಿಗೆ ಪತಿಯನ್ನು ಬಿಟ್ಟು ಇಹಲೋಕದಲ್ಲಿ ಸುಖವನ್ನು ಕೊಡುವ ಮತ್ತು ಪರ ಲೋಕದಲ್ಲಿ ಸ್ವರ್ಗ ಹಾಗೂ ಮೋಕ್ಷವನ್ನು ಕೊಡುವ ಯಾವ ತೀರ್ಥವೂ ಇರುವುದಿಲ್ಲ. ಮುಂದೆ ಸುಕಲೆಯು ತನ್ನ ಸಖಿಯರಿಗೂ ಹೇಳುತ್ತಾಳೆ. –

ಭರ್ತುಃ ಸಾರ್ಧಂ ಸದಾ ಸಖ್ಯೇ ದೃಷ್ಟೋ ವೇದೇಷು ಸರ್ವದಾ ।
ಸಂಬಂಧಃ ಪುಣ್ಯಸಂಸರ್ಗಾಜ್ಜಾಯತೇ ನಾನ್ಯಕಾರಣಾತ್ ॥
ನಾರೀಣಾಂ ಚ ಸದಾ ತೀರ್ಥಂ ಭರ್ತಾ ಶಾಸ್ತ್ರೇಷು ಪಠ್ಯತೇ ।
ಯಮೇವಾವಾಹಯೇನ್ನಿತ್ಯಂ ವಾಚಾ ಕಾಯೇನ ಕರ್ಮಭಿಃ ॥
ಮನಸಾ ಪೂಜಯೇನ್ನಿತ್ಯಂ ಸತ್ಯಭಾವೇನ ತತ್ಪರಾ ।
ಏತತ್ಪಾರ್ಶ್ವಂ ಮಹಾತೀರ್ಥಂ ದಕ್ಷಿಣಾಂಗಂ ಸದೈವ ಹಿ ॥
ತಮಾತ್ಯಕ್ತ್ವಾ ಯದಾ ನಾರೀ ಗೃಹಸ್ಥಾ ಪರಿವರ್ತತೇ ।
ಯಜತೇ ದಾನಪುಣ್ಯೇಶ್ಚ ತಸ್ಯ ದಾನಸ್ಯ ಯತ್ ಫಲಮ್ ॥
ವಾರಾಣಸ್ಯಾಂ ಚ ಗಂಗಾಯಾಂ ಯತ್ ಫಲಂ ನ ಚ ಪುಷ್ಕರೇ ।
ದ್ವಾರಕಾಯಾಂ ನ ಚಾವನ್ಯಾಂ ಕೇದಾರೇ ಶಶಿಭೂಷಣೇ ।
ಲಭತೇ ನೈವ ಸಾ ನಾರೀ ಯಜಮಾನಾ ಸದಾ ಕಿಲ ॥

(ಪದ್ಮ, ಭೂಮಿ ೪೧/೬೧/೬೬)

'ಗೆಳತಿಯರೇ ! ನಾರಿಯರಿಗೆ ಪತಿಯೊಡನೆ ಸಂಬಂಧವು ಪುಣ್ಯದ ಸಂಸರ್ಗ ಮಾತ್ರದಿಂದಲೇ ಆಗುತ್ತದೆಯೇ ಹೊರತು ಅನ್ಯ ಕಾರಣ ದಿಂದಲ್ಲವೆಂದು

ವೇದಗಳಲ್ಲಿ ಸ್ಪಷ್ಟವಾಗಿ ಹೇಳಿದೆ. ನಾರಿಯರಿಗೆ ಪತಿಯೇ ಸದಾ ತೀರ್ಥವಾಗಿದೆ ಎಂದು ಶಾಸ್ತ್ರಗಳ ವಚನವಿದೆ. ಆದ್ದರಿಂದ ಸ್ತ್ರೀಯರು ಪವಿತ್ರ ಭಾವನೆಯಿಂದ ಪತಿಸೇವೆಯಲ್ಲಿ ಪ್ರವೃತ್ತರಾಗಿ ಪ್ರತಿದಿನವೂ ಮನಸ್ಸು, ವಾಣಿ, ಶರೀರ ಮತ್ತು ಕ್ರಿಯೆಗಳಿಂದ ಪತಿಯ ಆರಾಧನ ಮಾಡಿ ಅದರಲ್ಲಿಯೇ ತತ್ಪರರಾಗಿ ಸದಾ ಪತಿ ಪೂಜೆಯನ್ನು ಮಾಡಬೇಕು. ಸ್ತ್ರೀಯು ಪತಿಯ ದಕ್ಷಿಣ ಅಂಗವಾಗಿದ್ದಾಳೆ ಮತ್ತು ಅವನ ಎಡ ಭಾಗವೇ ಪತ್ನಿಗೆ ಯಾವಾಗಲೂ ಮಹಾನ್ ತೀರ್ಥವಾಗಿದೆ. ಗೃಹಿಣಿಯು ಪತಿಯ ಬಲ ಭಾಗದಲ್ಲಿ ಕುಳಿತು ದಾನ ಪುಣ್ಯಾದಿಗಳನ್ನು ಮಾಡಿದರೆ ಅದರಲ್ಲಿ ಸಿಗುವ ಫಲವು ಕಾಶಿಯ ಗಂಗೆ, ಪುಷ್ಕರ ತೀರ್ಥ, ದ್ವಾರಕಾಪುರಿ, ಉಜ್ಜೈನಿ, ಕೇದಾರ ಮುಂತಾದ ಪ್ರಸಿದ್ಧ ಮಹಾದೇವ ಈಶ್ವರನ ಪುಣ್ಯತೀರ್ಥಗಳಲ್ಲಿ ಸ್ನಾನ ಮತ್ತು ಆರಾಧನೆ ಮಾಡುವುದರಿಂದ ಸಿಗುವ ಫಲಕ್ಕಿಂತ ಕಮ್ಮಿಯಿದಲ್ಲ.

ಸುಸುಖಂ ಪುತ್ರಸೌಭಾಗ್ಯಂ ಸ್ನಾನಂ ದಾನಂ ಚ ಭೂಷಣಮ್ ।
ವಸ್ತ್ರಾಲಂಕಾರಸೌಭಾಗ್ಯಂ ರೂಪಂ ತೇಜಃ ಫಲಂ ಸದಾ ॥
ಯಶಃ ಕೀರ್ತಿಮವಾಪ್ನೋತಿ ಗುಣಂ ಚ ವರವರ್ಣಿನಿ ।
ಭರ್ತುಃ ಪ್ರಸಾದಾಚ್ಚ ಸರ್ವಂ ಲಭತೇ ನಾತ್ರ ಸಂಶಯಃ ॥

(ಪದ್ಮ. ಭೂಮಿ. ೪೧/೬೭/೬೮)

'ಪತಿವ್ರತಾ ಸ್ತ್ರೀಯು ಉತ್ತಮ ಸುಖ, ಪುತ್ರ ಸೌಭಾಗ್ಯ, ಸ್ನಾನ ಮತ್ತು ಶ್ರೇಷ್ಠದಾನ, ವಸ್ತ್ರ-ಆಭೂಷಣ, ಸೌಭಾಗ್ಯ, ರೂಪ, ತೇಜಸ್ಸು, ಫಲ, ಯಶಸ್ಸು, ಕೀರ್ತಿ ಹಾಗೂ ಉತ್ತಮ ಗುಣಗಳನ್ನು ಪಡೆಯುತ್ತಾಳೆ. ಹೇ ವರವರ್ಣಿನಿ ! ಪತಿಯ ಪ್ರಸನ್ನತೆಯಿಂದಲೇ ಅವಳಿಗೆ ಎಲ್ಲವೂ ದೊರೆಯುತ್ತದೆ. ಇದರಲ್ಲಿ ಕೊಂಚವೂ ಸಂಶಯವಿಲ್ಲ'.

ತುಷ್ಟೇ ಭರ್ತರಿ ತಸ್ಯಾಸ್ತು ತುಷ್ಟಾಃ ಸ್ಯುಃ ಸರ್ವದೇವತಾಃ ।
ತುಷ್ಟೇ ಭರ್ತರಿ ತುಷ್ಯಂತಿ ಋಷಯೋ ದೇವಮಾನವಾಃ ॥
ಭರ್ತಾ ನಾಥೋ ಗುರುರ್ಭರ್ತಾ ದೇವತಾ ದೈವತೈಃ ಸಹ ।
ಭರ್ತಾ ತೀರ್ಥಂ ಚ ಪುಣ್ಯಂ ಚ ನಾರೀಣಾಂ ನೃಪನಂದನ ॥

(ಪದ್ಮ. ಭೂಮಿ. ೪೧/೭೪/೭೫)

'ಪತಿಯು ಸಂತುಷ್ಟನಾಗಿದ್ದರೆ ಸಮಸ್ತ ದೇವತೆಗಳು ಆ ಸ್ತ್ರೀಯ ಮೇಲೆ ಸಂತುಷ್ಟರಾಗುತ್ತಾರೆ. ಪತಿಯು ಸಂತುಷ್ಟನಾಗಿದ್ದರೆ ಋಷಿಮುನಿಗಳು, ದೇವತೆಗಳೂ ಮನುಷ್ಯರೂ ಸಹ ಪ್ರಸನ್ನರಾಗಿರುತ್ತಾರೆ. ರಾಜನ್ ! ಪತಿಯೇ ಸ್ತ್ರೀಗೆ ಸ್ವಾಮಿ, ಪತಿಯೇ ಗುರು, ಪತಿಯೇ ದೇವತೆಗಳ ಸಹಿತ ಅವಳ ಇಷ್ಟ ದೇವರು ಹಾಗೂ ಪತಿಯೇ ತೀರ್ಥ ಹಾಗೂ ಪುಣ್ಯವೆಂದು ತಿಳಿಯಬೇಕು'. ಬೃಹದ್ಧರ್ಮ ಪುರಾಣದಲ್ಲಿಯೂ ಹೇಳಿದೆ –

ಸಧವಾನಾಂ ಹಿ ನಾರೀಣಾಂ ನೋಪವಾಸಾದಿಕಂ ವ್ರತಮ್ ।
ಪತ್ಯಾಜ್ಞಯಾ ಚರೇದ್ ಯತ್ತು ತತ್ತು ತಾಸಾಂ ವ್ರತಂ ಪರಮ್ ॥

(ಉತ್ತರ ಖಂಡ. ೮/೭)

'ಮುತ್ತೈದೆಯರಿಗೆ ಉಪವಾಸ ಮುಂತಾದ ಯಾವ ವ್ರತಗಳ ವಿಧಿಯನ್ನೂ ವಿಧಿಸಿಲ್ಲ. ಪತಿಯ ಆಜ್ಞಾನುಸಾರವಾಗಿ ಅವರು ಯಾವ ಆಚರಣೆ ಮಾಡಿದರೂ ಅದೇ ಅವರಿಗೆ ಶ್ರೇಷ್ಠವ್ರತವಾಗುತ್ತದೆ'. ಆದ್ದರಿಂದ ಮನುವು ಇದೇ ವ್ಯವಸ್ಥೆಯನ್ನು ಮಾಡಿದ್ದಾರೆ –

ಅನ್ಯೋನ್ಯಸ್ಯಾವ್ಯಭಿಚಾರೋ ಭವೇದಾಮರಣಾಂತಿಕಃ ।
ಏಷ ಧರ್ಮಃ ಸಮಾಸೇನ ಜ್ಞೇಯಃ ಸ್ತ್ರೀಪುಂಸಯೋಃ ಪರಃ ॥

(೯/೧೦೧)

'ಸಂಕ್ಷೇಪವಾಗಿ ಹೇಳುವುದಾದರೆ ಪತಿ-ಪತ್ನಿಯರು ಜೀವನಪರ್ಯಂತ ಪರಸ್ಪರ ಅಗಲಿರಬಾರದೆನ್ನುವುದನ್ನು ಅವರ ಪರಮ ಧರ್ಮವೆಂದು ತಿಳಿಯಬೇಕು'. ಈ ವಿಚಾರದಲ್ಲಿ ಜಗಜ್ಜನನೀ ಸೀತಾದೇವಿಯು ಆದರ್ಶವಾಗಿದ್ದಾಳೆ. ಪತಿವ್ರತಾ ಶಿರೋಮಣಿ ಸೀತೆಯು ಪತಿಸೇವೆ ಮಾಡುವುದಕ್ಕೆ, ಅವನ ಜೊತೆಯಲ್ಲಿಯೇ ಇರುವುದಕ್ಕೆ ಎಷ್ಟೊಂದು ಆಗ್ರಹಪಡಿಸಿದಳೆಂಬುದು ಅವಳ ಮಾತುಗಳಿಂದಲೂ ಆಚರಣೆಯಿಂದಲೂ ಸ್ಪಷ್ಟವಾಗುತ್ತದೆ. ವನಗಮನದ ಸಮಯದಲ್ಲಿ ಶ್ರೀರಾಮಚಂದ್ರನು ವನದ ಭಯಂಕರ ಕಷ್ಟಗಳನ್ನು ವರ್ಣಿಸಿ ಸೀತೆಗೆ ಅಯೋಧ್ಯೆಯಲ್ಲಿಯೇ ಇರಲು ಎಷ್ಟು ಹೇಳಿದರೂ ಅವಳು ಒಪ್ಪದೆ ಬಹಳ ವಿನಯದಿಂದಲೂ ಪ್ರೇಮದಿಂದಲೂ ಜೊತೆಯಲ್ಲಿಯೇ ತಾನೂ ಬರುವುದಾಗಿ ಆಗ್ರಹ ಮಾಡಿದಳು. ಸಮಸ್ತ ಸುಖಭೋಗಗಳನ್ನು ತೃಣದಂತೆ

ತ್ಯಾಗ ಗೈದು ಅವಳು ಶ್ರೀರಾಮಚಂದ್ರನೊಡನೆ ವನವಾಸಕ್ಕೆ ಹೊರಟು ಹೋದಳು. ಶ್ರೀರಾಮಚಂದ್ರನಿಗೆ ಸೀತೆಯು ಹೇಳಿದ ಮಾತುಗಳು ಶ್ರೀರಾಮ ಚರಿತಮಾನಸದಲ್ಲಿ ಗಮನದಲ್ಲಿಡಲು ಯೋಗ್ಯವಾಗಿವೆ. ಅದರಿಂದ ಸ್ತ್ರೀಯರಿಗೆ ಅತ್ಯುತ್ತಮ ಶಿಕ್ಷಣ ದೊರೆಯುತ್ತದೆ.

ಸೀತೆಯು ಹೇಳುತ್ತಾಳೆ –

ಪ್ರಾಣನಾಥ ಕರುಣಾಯತನ ಸುಂದರ ಸುಖದ ಸುಜಾನ।
ತುಮ್ಹಬಿನು ರಘು ಕುಲ ಕುಮುದ ಬಿಧು ಸುರಪುರ ನರಕ ಸಮಾನ ॥

'ಪ್ರಾಣನಾಥ ! ಕರುಣಾಸಾಗರ, ಸುಂದರ, ಸುಖದಾತ, ಸಜ್ಜನ, ರಘುಕುಲ ರೂಪಿ ನೈದಿಲೆಯನ್ನು ಅರಳಿಸುವ ಚಂದ್ರ, ತಮ್ಮನ್ನುಬಿಟ್ಟು ಸ್ವರ್ಗವೂ ನನಗೆ ನರಕಕ್ಕೆ ಸಮಾನವಾಗಿದೆ.

ತನು ಧನು ಧಾಮು ಧರನಿ ಪುರ ರಾಜೂ।
ಪತಿ ಬಿಹೀನ ಸಬು ಸೋಕ ಸಮಾಜೂ ॥
ಭೋಗ ರೋಗ ಸಮ ಭೂಷನ ಭಾರೂ।
ಜಮ ಜಾತನಾ ಸರಿಸ ಸಂಸಾರೂ ॥
ಪ್ರಾನನಾಥ ತುಮ್ಹ ಬಿನು ಜಗ ಮಾಹೀ।
ಮೋ ಕಹು ಸುಖಿದ ಕತಹು ಕಛು ನಾಹೀ ॥
ಜಿಯ ಬಿನು ದೇಹ ನದೀ ಬಿನು ಬಾರೀ।
ತೈಸಿಅ ನಾಥ ಪುರುಷ ಬಿನು ನಾರೀ ॥
ನಾಥ ಸಕಲ ಸುಖ ಸಾಥ ತುಮ್ಹಾರೇ।
ಸರದ ಬಿಮಲ ಬಿಧು ಬದನು ನಿಹಾರೇ ॥

ಪತಿ ವಿಹೀನ ಸ್ತ್ರೀಗೆ ಶರೀರ, ಧನ, ಗೃಹ, ಭೂಮಿ, ನಗರ ಮತ್ತು ರಾಜ್ಯ ಇವೆಲ್ಲವೂ ಶೋಕಕ್ಕೆ ಸಮಾನವಾಗುತ್ತದೆ. ಭೋಗವು ರೋಗಕ್ಕೆ ಸಮಾನವಾಗುತ್ತದೆ. ಆಭರಣಗಳು ಭಾರವಾಗುತ್ತವೆ. ಪ್ರಪಂಚವು ಯಮ ಯಾತನೆಯಾಗುತ್ತದೆ ಅಂದರೆ ನರಕ ಸದೃಶವಾಗುತ್ತದೆ. ಪ್ರಾಣನಾಥ! ತಾವಿಲ್ಲದೆ ನನಗೆ ಜಗತ್ತಿನಲ್ಲಿ ಯಾವುದೂ ಸುಖವೆನ್ನಿಸುವುದಿಲ್ಲ. ಹೇಗೆ ಪ್ರಾಣವಿಲ್ಲದ

ವಾಚಾ, ಮನಸಾ ಪತಿಯ ಚರಣಗಳಲ್ಲಿ ಪ್ರೇಮವಿಡುವುದೊಂದೇ ಸ್ತ್ರೀಗೆ ಧರ್ಮ, ವ್ರತ, ನಿಯಮವಾಗಿರುತ್ತದೆ.

ಉತ್ತಮ ಕೇ ಅಸ ಬಸ ಮನ ಮಾಹಿ ।
ಸಪನೆಹು ಆನ ಪುರುಷ ಜಗ ನಾಹಿ ॥
ಮಧ್ಯಮ ಪರಪತಿ ದೇಖಿ ಕೈಸೆ ।
ಭ್ರಾತಾ ಪಿತಾ ಪುತ್ರ ನಿಜ ಜೈಸೆ ॥

ಉತ್ತಮ ಶ್ರೇಣಿಯ ಪತಿವ್ರತೆಯ ಮನದಲ್ಲಿ ತನ್ನ ಪತಿಯೊಬ್ಬನನ್ನು ಬಿಟ್ಟು ಬೇರೊಬ್ಬ ಪುರುಷನು ಸ್ವಪ್ನದಲ್ಲೂ ಸಹ ಬರಬಾರದೆಂಬ ಭಾವನೆ ಇರುತ್ತದೆ. ಮಧ್ಯಮ ವರ್ಗದ ಪತಿವ್ರತಾ ಸ್ತ್ರೀಯು ಪರಪುರುಷನನ್ನು ತನ್ನ ಸಹೋದರ, ತಂದೆ ಅಥವಾ ಮಗನಂತೆ ಕಾಣುತ್ತಾಳೆ. ಅಂದರೆ ಸಮ ವಯಸ್ಕನಾಗಿದ್ದರೆ ಸಹೋದರನಂತೆಯೂ, ದೊಡ್ಡವರಾಗಿದ್ದರೆ ತಂದೆಯಂತೆಯೂ, ಚಿಕ್ಕವರಾಗಿದ್ದರೆ ಮಗನಂತೆಯೂ ನೋಡುತ್ತಾಳೆ.

ಪತಿ ಬಂಚಕ ಪರಪತಿ ರತಿ ಕರಈ ।
ರೌರವ ನರಕ ಕಲ್ಪ ಸತ ಪರಈ ॥
ಛನ ಸುಖ ಲಾಗಿ ಜನಮ ಸತ ಕೋಟೀ ।
ದುಖಿ ನ ಸಮುಝು ತೇಹಿ ಸಮ ಕೋ ಖೋಟೀ ॥
ಬಿನು ಶ್ರಮ ನಾರಿ ಪರಮ ಗತಿ ಲಹಈ ।
ಪತಿಬ್ರತ ಧರ್ಮ ಛಾಡಿ ಛಲ ಗಹಈ ।
ಪತಿ ಪ್ರತಿಕೂಲ ಜನಮ ಜಹ ಜಾಈ ।
ಬಿಧವಾ ಹೋಇ ಪಾಇ ತರುನಾಈ ॥

ಪತಿಯನ್ನು ವಂಚಿಸಿ ಪರ ಪುರುಷರೊಡನೆ ರಮಿಸುವವಳೂ ನೂರು ಕಲ್ಪಗಳತನಕ ರೌರವ ನರಕದಲ್ಲಿ ಬೀಳುತ್ತಾಳೆ. ಕ್ಷಣಿಕ ಸುಖಕ್ಕಾಗಿ ಅಸಂಖ್ಯ ಜನ್ಮಗಳನ್ನೆತ್ತಿ ಅನುಭವಿಸಬೇಕಾದ ದುಃಖಗಳ ಹೊರೆಯನ್ನು ತಿಳಿದು ಕೊಳ್ಳುವುದಿಲ್ಲ. ಅವಳಂತಹ ದುಷ್ಟ ಸ್ತ್ರೀ ಇನ್ನೊಬ್ಬಳಿರುವುದಿಲ್ಲ. ಯಾರು ಛಲ-ಕಪಟಗಳನ್ನು ಬಿಟ್ಟು ಪಾತಿವ್ರತ್ಯ ಧರ್ಮವನ್ನು ಅನುಸರಿಸುವಳೋ ಅವಳು ಪರಿಶ್ರಮವಿಲ್ಲದೆ ಪರಮ ಗತಿಯನ್ನು ಹೊಂದುತ್ತಾಳೆ. ಆದರೆ ಯಾರು ಪತಿಗೆ

ಪ್ರತಿಕೂಲಳಾಗಿ ವರ್ತಿಸುವಳೋ ಅವಳು ಎಲ್ಲಿ ಜನ್ಮ ತಳೆದರೂ ಯೌವನ ದಲ್ಲಿಯೇ ವಿಧವೆಯಾಗುತ್ತಾಳೆ.

ಸುನು ಸೀತಾ ತವ ನಾಮ ಸುಮಿರಿ ನಾರಿ ಪತಿವ್ರತ ಕರಹಿ ।
ತೋಹಿ ಪ್ರಾನಪ್ರಿಯ ರಾಮ ಕಹಿಉ ಕಥಾ ಸಂಸಾರ ಹಿತ ॥

ಸೀತಾ ! ಕೇಳು, ನಿನ್ನ ಹೆಸರನ್ನು ಹೇಳುತ್ತಲೇ ಸ್ತ್ರೀಯರು ಪತಿವ್ರತಾ ಧರ್ಮವನ್ನು ಪಾಲಿಸುತ್ತಾರೆ. ಶ್ರೀರಾಮನು ನಿನಗೆ ಪ್ರಾಣಪ್ರಿಯನೇ ಆಗಿರುತ್ತಾನೆ. ನಾನು ಈ ಪಾತಿವ್ರತ್ಯ ಧರ್ಮದ ಕಥೆಯನ್ನು ಜಗತ್ತಿನ ಹಿತಕ್ಕಾಗಿಯೇ ಹೇಳಿದ್ದೇನೆ. ಅನಸೂಯೆಯ ಈ ಮಾತುಗಳು ಉಚಿತವಾಗಿಯೇ ಇವೆ. ಏಕೆಂದರೆ ಸೀತೆಯು ಮೊದಲಿನಿಂದಲೂ ಹೀಗೆಯೇ ಇದ್ದಳು. ಶ್ರೀ ವಾಲ್ಮೀಕಿಯ ರಾಮಾಯಣದಲ್ಲಿ ಸೀತೆಯನ್ನು ಕುರಿತು ಹೇಳಿದ ಅನುಸೂಯೆಯ ಮಾತುಗಳು ಹೀಗಿವೆ. –

ತ್ಯಕ್ತ್ವಾ ಜ್ಞಾತಿಜನಂ ಸೀತೇ ಮಾನವೃದ್ಧಿಂ ಚ ಮಾನಿನಿ ।
ಅವರುದ್ಧಂ ವನೇ ರಾಮಂ ದಿಷ್ಟ್ಯಾ ತ್ವಮನುಗಚ್ಛಸಿ ॥
ನಗರಸ್ಥೋ ವನಸ್ಥೋ ವಾ ಶುಭೋ ವಾ ಯದಿ ವಾಶುಭಃ ॥
ಯಾಸಾಂ ಸ್ತ್ರೀಣಾಂ ಪ್ರಿಯೋ ಭರ್ತಾ ತಾಸಾಂ ಲೋಕಾ ಮಹೋದಯಾಃ ॥
ದುಃಶೀಲಃ ಕಾಮವೃತ್ತೋ ವಾ ಧನೈರ್ವಾ ಪರಿವರ್ಜಿತಃ ।
ಸ್ತ್ರೀಣಾಮಾರ್ಯ ಸ್ವಭಾವಾನಾಂ ಪರಮಂ ದೈವತಂ ಪತಿಃ ॥
ನಾತೋ ವಿಶಿಷ್ಟಂ ಪಶ್ಯಾಮಿ ಬಾಂಧವಂ ವಿಮೃಶಂತ್ಯಹಮ್ ।
ಸರ್ವತ್ರ ಯೋಗ್ಯಂ ವೈದೇಹೀ ತಪಃ ಕೃತಮಿವಾವ್ಯಯಮ್ ॥
(ಅಯೋಧ್ಯಾ ೧೧೭/೨೨/೨೫)

'ಮಾನನೀಯಳಾದ ಸೀತೆ! ಬಂಧು-ಬಾಂಧವರನ್ನು ತೊರೆದು, ಅವರಿಂದ ಸಿಗುವಂತಹ ಮಾನ ಪ್ರತಿಷ್ಠೆಗಳನ್ನೂ ಸಹ ತ್ಯಜಿಸಿ, ವನವಾಸಕ್ಕೆ ಕಳಿಸಿದ ಶ್ರೀರಾಮನನ್ನು ಕರ್ತವ್ಯವೆಂದು ತಿಳಿದು ನೀನು ಅನುಸರಿಸುತ್ತಿರುವುದು ನಿಜವಾಗಲೂ ಸೌಭಾಗ್ಯದ ವಿಚಾರವಾಗಿದೆ. ತನ್ನ ಸ್ವಾಮಿಯು ನಗರದಲ್ಲಿಯೇ ಇರಲಿ, ಕಾಡಿನಲ್ಲಿಯೇ ಇರಲಿ, ಒಳ್ಳೆಯವನಾಗಿರಲಿ ವಿಧವಾ ಕೆಟ್ಟವನಾಗಿರಲಿ ಯಾವ ಸ್ತ್ರೀಯರಿಗೆ ಅವರು ಪ್ರಿಯರಾಗಿರುವರೋ, ಅಂತವರಿಗೆ ಮಹಾನ್ ಅಭ್ಯುದಯವಾಲೀ ಲೋಕವು ಪ್ರಾಪ್ತವಾಗುತ್ತದೆ. ಪತಿಯು ಕೆಟ್ಟ ಸ್ವಭಾವದವನೂ

ಮನಸ್ಸಿಗೆ ಬಂದಂತೆ ನಡೆಯುವವನೂ ಅಥವಾ ಧನಹೀನನಾಗಿದ್ದರೂ ಅವನು ಉತ್ತಮ ಸ್ವಭಾವದ ಸ್ತ್ರೀಯರಿಗೆ ಶ್ರೇಷ್ಠ ದೇವತಾ ರೂಪಿಯಾಗಿರುತ್ತಾನೆ. ವೈದೇಹಿ ! ನಾನು ತುಂಬಾ ವಿಚಾರ ಮಾಡಿದ ಮೇಲೆಯೂ ಪತಿಗಿಂತ ಹೆಚ್ಚು ಹಿತಕಾರಿಯಾದ ಬಂಧುವನ್ನು – ನೋಡುವುದಿಲ್ಲ. ತಪಸ್ಸಿನ ಅವಿನಾಶಿ ಫಲದಂತೆ ಅವನು ಇಹಪರಗಳೆರಡ ರಲ್ಲಿಯೂ ಸುಖ ತಂದುಕೊಡಲು ಸಮರ್ಥನಾಗಿರುತ್ತಾನೆ.

ತ್ವದ್ವಿಧಾಸ್ತು ಗುಣೈರ್ಯುಕ್ತಾ ದೃಷ್ಟಲೋಕಪರಾವರಾಃ ।
ಸ್ತ್ರೀಯಃ ಸ್ವರ್ಗೇ ಚರಿಷ್ಯಂತಿ ಯಥಾ ಪುಣ್ಯಕೃತಸ್ತಥಾ ॥
(ವಾ.ರಾ. ಅಯೋಧ್ಯಾ. ೧೧೭/೨೮)

'ನಿನ್ನಂತೆ ಲೋಕ-ಪರಲೋಕಗಳನ್ನು ತಿಳಿದಿರುವ ಉತ್ತಮ ಗುಣಗಳಿಂದ ಕೂಡಿದ ಸಾಧ್ವಿ ಸ್ತ್ರೀಯರು ಪುಣ್ಯ ಕರ್ಮ ಮಾಡುವ ಮನುಷ್ಯರಂತೆ ಸ್ವರ್ಗದಲ್ಲಿ ವಿಹರಿಸುವರು'.

ತದೇವಮೇತಂ ತ್ವಮನುವ್ರತಾ ಸತೀ
ಪತಿಪ್ರಧಾನಾ ಸಮಯಾನುವರ್ತಿನೀ ।
ಭವ ಸ್ವಭರ್ತುಃ ಸಹಧರ್ಮಚಾರಿಣೀ
ಯಶಶ್ಚ ಧರ್ಮಂ ಚ ತತಃ ಸಮಾಪ್ಸ್ಯಸಿ ॥
(ವಾ.ರಾ. ಅಯೋಧ್ಯಾ. ೧೧೭/೨೯)

'ಆದ್ದರಿಂದ ನೀನು ಇದೇ ರೀತಿಯಾಗಿ ನಿನ್ನ ಪತಿದೇವ ಶ್ರೀರಾಮಚಂದ್ರನ ಸೇವೆಯಲ್ಲಿ ಮಗ್ನಳಾಗಿರು. ಸತೀಧರ್ಮವನ್ನು ಪಾಲಿಸು. ಪತಿಯನ್ನೇ ಪ್ರಧಾನ ದೇವತೆಯೆಂದು ತಿಳಿ. ಎಲ್ಲ ಸಮಯಗಳಲ್ಲೂ ಅವನನ್ನು ಅನುಸರಿಸುತ್ತಾ ಅವನ ಸಹಧರ್ಮಿಣಿಯಾಗಿರು. ಇದರಿಂದ ನಿನಗೆ ಧರ್ಮ ಮತ್ತು ಯಶಸ್ಸು ಎರಡರ ಪ್ರಾಪ್ತಿಯಾಗುತ್ತದೆ. ಅನಸೂಯೆಯಿಂದ ಪಾತಿವ್ರತ್ಯದ ಮಹಿಮೆಯನ್ನು ಕೇಳಿ ಸೀತೆಯು ಹೇಳಿದಳು –

ಆಗಚ್ಛಂತ್ಯಾಶ್ಚ ವಿಜನಂ ವನಮೇವಂ ಭಯಾಪಹಮ್ ।
ಸಮಾಹಿತಂ ಹಿ ಮೇ ಶ್ವಶ್ರ್ವಾ ಹೃದಯೇ ಯತ್ ಸ್ಥಿರಂ ಮಮ ॥
(ವಾ.ರಾ. ಅಯೋಧ್ಯಾ. ೧೧೮/೭)

"ನಾನು ಪತಿಯ ಜೊತೆ ಭಯಂಕರ ನಿರ್ಜನ ವನಕ್ಕೆ ಬರುವಾಗ ನಮ್ಮ ಅತ್ತೆ ಕೌಸಲ್ಯಾ ದೇವಿಯವರು ನನಗೆ ಕರ್ತವ್ಯದ ಯಾವ ಉಪದೇಶ ನೀಡಿದ್ದರೋ, ಅದು ನನ್ನ ಹೃದಯದಲ್ಲಿ ಹಾಗೆಯೇ ಅಂಕಿತವಾಗಿದೆ."

ಪಾಣಿಪ್ರದಾನಕಾಲೇ ಚ ಯತ್ ಪುರಾ ತ್ವಗ್ನಿಸಂನಿಧೌ।
ಅನುಶಿಷ್ಟಂ ಜನನ್ಯಾ ಮೇ ವಾಕ್ಯಂ ತದಪಿ ಮೇ ಧೃತಮ್ ॥

(ವಾ.ರಾ.ಅಯೋಧ್ಯಾ.೧೧೮/೮)

'ಹಿಂದೆ ವಿವಾಹದ ಸಮಯದಲ್ಲಿ ಅಗ್ನಿಯ ಹತ್ತಿರ ನನ್ನ ತಾಯಿಯು ನನಗೆ ಕೊಟ್ಟ ಶಿಕ್ಷಣವೂ ನೆನೆಪಿದೆ.'

ನ ವಿಸ್ಮೃತಂ ತು ಮೇ ಸರ್ವಂ ವಾಕ್ಯೈಃ ಸ್ವೈರ್ಧರ್ಮಚಾರಿಣಿ।
ಪತಿಶುಶ್ರೂಷಣಾನ್ನಾರ್ಯಾಸ್ತಪೋ ನಾನ್ಯದ್ ವಿಧೀಯತೇ ॥

(ವಾ.ರಾ.ಅಯೋಧ್ಯಾ.೧೧೮/೧೦)

'ಹೇ ಧರ್ಮಚಾರಿಣಿ! ಇದಲ್ಲದೆ ಬೇರೆ ನನ್ನ ಸ್ವಜನರು ನನಗೆ ಏನೇನು ಉಪದೇಶ ನೀಡಿದ್ದರೋ ಅದನ್ನು ಸಹ ನಾನು ಮರೆತಿಲ್ಲ. ಸ್ತ್ರೀಯರಿಗೆ ಪತಿಸೇವೆಯನ್ನು ಬಿಟ್ಟು ಬೇರೆ ತಪಸ್ಸಿಲ್ಲ.'

ಸಾವಿತ್ರೀ ಪತಿಶುಶ್ರೂಷಾಂ ಕೃತ್ವಾ ಸ್ವರ್ಗೇ ಮಹೀಯತೇ।
ತಥಾವೃತ್ತಿಶ್ಚ ಯಾತಾ ತ್ವಂ ಪತಿಶುಶ್ರೂಷಯಾ ದಿವಮ್ ॥

(ವಾ.ರಾ.ಅಯೋಧ್ಯಾ.೧೧೮/೧೦)

'ಸತ್ಯವಾನನ ಪತ್ನೀ ಸಾವಿತ್ರಿಯು ಪತಿಸೇವೆ ಮಾಡಿದ್ದರಿಂದಲೇ ಸ್ವರ್ಗದಲ್ಲಿ ಪೂಜಿತಳಾಗಿದ್ದಾಳೆ. ನೀನೂ ಸಹ ಪತಿಸೇವೆಯಿಂದಲೇ ಪಾತಿವ್ರತ್ಯವನ್ನು ಆಚರಿಸಿ ಅಲೌಕಿಕತೆಯನ್ನು ಪಡೆದಿರುವಿರಿ'.

ವರಿಷ್ಠಾ ಸರ್ವನಾರೀಣಾಮೇಷಾ ಚ ದಿವಿ ದೇವತಾ।
ರೋಹಿಣೀ ನ ವಿನಾ ಚಂದ್ರಂ ಮುಹೂರ್ತಮಪಿ ದೃಶ್ಯತೇ ॥

(ವಾ.ರಾ.ಅಯೋಧ್ಯಾ.೧೧೮/೧೧)

'ಎಲ್ಲ ಸ್ತ್ರೀಯರಲ್ಲಿಯೂ ಶ್ರೇಷ್ಠಳಾದ ಸ್ವರ್ಗದ ದೇವಿ ರೋಹಿಣಿಯು

ಪತಿ ಸೇವೆಯ ಪ್ರಭಾವದಿಂದಲೇ ಚಂದ್ರನಿಂದ ಒಂದು ಕ್ಷಣವೂ ಅಗಲಿರುವುದಿಲ್ಲ.'

ಏವಂವಿಧಾಶ್ಚ ಪ್ರವರಾಃ ಸ್ತ್ರಿಯೋ ಭರ್ತೃದೃಢವ್ರತಾಃ ।
ದೇವಲೋಕೇ ಮಹೀಯನ್ತೇ ಪುಣ್ಯೇನ ಸ್ವೇನ ಕರ್ಮಣಾ ॥

(ವಾ.ರಾ.ಅಯೋಧ್ಯಾ.೧೧೮/೨೨)

'ಈ ರೀತಿಯಾಗಿ ದೃಢತಾ ಪೂರ್ವಕವಾಗಿ ಪತಿವ್ರತಾ ಧರ್ಮಪಾಲನೆ ಮಾಡುವ ಬಹಳಷ್ಟು ಸಾಧ್ವಿ ಸ್ತ್ರೀಯರು ತಮ್ಮ ಪುಣ್ಯಕರ್ಮದ ಬಲದಿಂದ ದೇವಲೋಕದಲ್ಲಿ ಆದರಕ್ಕೆ ಪಾತ್ರರಾಗಿದ್ದಾರೆ.

ಸತಿ ಅನಸೂಯೆಯು ಬಹಳ ಶ್ರೇಷ್ಠಮಟ್ಟದ ಪತಿವ್ರತೆಯಾಗಿದ್ದಳು. ಅವಳ ಪಾತಿವ್ರತ್ಯದ ಪ್ರಭಾವದಿಂದ ಬ್ರಹ್ಮ, ವಿಷ್ಣು ಮಹೇಶ್ವರರು ಅವಳಲ್ಲಿ ದತ್ತಾತ್ರೇಯ ರೂಪದಿಂದ ಶ್ರೀವಿಷ್ಣು, ಚಂದ್ರನ ರೂಪದಿಂದ ಬ್ರಹ್ಮನು ಮತ್ತು ದುರ್ವಾಸನ ರೂಪದಲ್ಲಿ ಶಂಕರನು ಅವತರಿಸಿದ್ದರು. ಹಾಗೆಯೇ ಮರ್ಯಾದಾ ಪುರುಷೋತ್ತಮ ಶ್ರೀರಾಮನ ಅರ್ಧಾಂಗಿನಿಯಾದ ಜಗಜ್ಜನನಿ ಪತಿವ್ರತೆ ಸೀತಾದೇವಿಯ ನಾಮೋಚ್ಚಾರಣೆಯಿಂದಲೇ ಸ್ತ್ರೀ ಪತಿವ್ರತೆಯಾಗುತ್ತಾಳೆ. ಸೀತೆಯ ಚರಿತ್ರೆಯಿಂದ ಸ್ತ್ರೀಯರು ಶಿಕ್ಷಣವನ್ನು ಪಡೆಯಬೇಕು.

ಇದೇ ರೀತಿ ಸತೀ ಪಾರ್ವತಿಯ ಚರಿತ್ರೆಯೂ ಜಗತ್ತಿನಲ್ಲಿ ಪ್ರಸಿದ್ಧವಾಗಿದೆ. ಪಾತಿವ್ರತ್ಯ ಧರ್ಮದ ಸಿದ್ಧಿಗಾಗಿ ಕನ್ನೆಯರೂ, ಸ್ತ್ರೀಯರೂ ಚೈತ್ರ ಮಾಸದಲ್ಲಿ ಶ್ರೀಗೌರೀ ಪೂಜೆಯನ್ನು ಮಾಡುತ್ತಾರೆ. ಪಾರ್ವತಿಯ ಚರಿತ್ರೆಯು ರಾಮಾಯಣ, ಇತಿಹಾಸ ಹಾಗೂ ಪುರಾಣಗಳಲ್ಲಿ ವರ್ಣಿತವಾಗಿದೆ. ಜನ್ಮ ದಿಂದಲೇ ಅವಳಿಗೆ ತನ್ನ ಸ್ವಾಮೀ ಶಂಕರನ ಮೇಲೆ ಅಚಲ ನಿಷ್ಠೆಯಿತ್ತು. ಅದು ಪತಿವ್ರತೆಯರಿಗೆ ಪರಮ ಆದರ್ಶವಾಗಿದೆ.

ಶ್ರೀಮದ್ಭಾಗವತದಲ್ಲಿ ನಾರದರು ಯುಧಿಷ್ಠಿರನಿಗೆ ಪತಿವ್ರತಾ ಸ್ತ್ರೀಯರ ಧರ್ಮವನ್ನು ಈ ರೀತಿಯಾಗಿ ಹೇಳಿದ್ದಾರೆ –

ಸ್ತ್ರೀಣಾಂ ಚ ಪತಿದೇವಾನಾಂ ತಚ್ಛುಶ್ರೂಷಾನುಕೂಲತಾ ।
ತದ್ಬನ್ಧುಷ್ವನುವೃತ್ತಿಶ್ಚ ನಿತ್ಯಂ ತದ್ವ್ರತಧಾರಣಮ್ ॥

(೭/೧೧/೨೫)

'ಪತಿಯ ಸೇವೆ ಮಾಡುವುದು, ಅವನಿಗೆ ಅನುಕೂಲಳಾಗಿರುವುದು, ಪತಿಯ ಸಹೋದರರನ್ನು, ಬಂಧುಗಳನ್ನು ಪ್ರಸನ್ನಗೊಳಿಸುವುದು ಮತ್ತು ಯಾವಾಗಲೂ ಪತಿಯ ನಿಯಮಗಳನ್ನು ರಕ್ಷಿಸುವುದು- ಇವು ಪತಿಯೇ ಪರಮೇಶ್ವರನೆಂದು ತಿಳಿಯುವ ಪತಿವ್ರತಾ ಸ್ತ್ರೀಯರ ಧರ್ಮವಾಗಿರುವುದು'.

ಸಮ್ಮಾರ್ಜನೋಪಲೇಪಾಭ್ಯಾಂ ಗೃಹಮಂಡಲವರ್ತನೈಃ।
ಸ್ವಯಂ ಚ ಮಂಡಿತಾ ನಿತ್ಯಂ ಪರಿಮೃಷ್ಟಪರಿಚ್ಛದಾ ॥

(೭/೧೧/೨೬)

'ಕಸಗುಡಿಸುವುದು, ಸಾರಿಸುವುದು, ರಂಗೋಲಿ ಇಡುವುದು, ಮನೆಯನ್ನು ಶೋಭಾಯಮಾನವಾಗಿಡುವುದು, ಮನೋಹರವಾದ ವಸ್ತ್ರಾಭೂಷಣಗಳಿಂದ ದೇಹವನ್ನು ಅಲಂಕರಿಸಿಕೊಳ್ಳುವುದು, ಎಲ್ಲ ಸಾಮಗ್ರಿಗಳನ್ನು ಸರಿಯಾಗಿ ಜೋಡಿಸಿ ಮನೆಯನ್ನು ಚೊಕ್ಕಟವಾಗಿಟ್ಟುಕೊಳ್ಳುವುದು ಸಾಧ್ವಿ ಸ್ತ್ರೀಯರ ಕೆಲಸವಾಗಿದೆ.'

ಕಾಮೈರಮೃತಕಲ್ಪೈಃ ಸಾಧ್ವೀ ಪ್ರತ್ರಯೇಣ ದಮೇನ ಚ।
ವಾಕ್ಯೈಃ ಸತ್ಯೈಃ ಪ್ರಿಯೈಃ ಪ್ರೇಮ್ಣಾ ಕಾಲೇ ಕಾಲೇ ಭಜೇತ್ ಪತಿಮ್॥

(೭/೧೧/೨೭)

'ತನ್ನ ಪತಿಯ ಸಣ್ಣ -ಪುಟ್ಟ ಇಚ್ಛೆಗಳನ್ನು ಸಮಯಕ್ಕೆ ತಕ್ಕಂತೆ ಪೂರ್ಣಗೊಳಿಸಬೇಕು. ವಿನಯ, ಇಂದ್ರಿಯ ಸಂಯಮ, ಸತ್ಯ ಹಾಗೂ ಪ್ರಿಯ ವಚನಗಳಿಂದ ಪ್ರೇಮ ಪೂರ್ವಕ ಪತಿಸೇವೆ ಮಾಡಬೇಕು.'

ಯಾ ಪತಿಂ ಹರಿಭಾವೇನ ಭಜೇತ್ಕ್ಷ್ಮೀರಿವ ತತ್ಪರಾ।
ಹರ್ಯಾತ್ಮನಾ ಹರೇರ್ಲೋಕೇ ಪತ್ಯಾ ಶ್ರೀರಿವ ಮೋದತೇ ॥

(೭/೧೧/೩೯)

'ಯಾರು ಲಕ್ಷ್ಮಿಯಂತೆ ಪತಿಪರಾಯಣೆಯಾಗಿ ತನ್ನ ಪತಿಯನ್ನು ಸಾಕ್ಷಾತ್ ಭಗವಂತನ ಸ್ವರೂಪವೆಂದು ತಿಳಿದು ಸೇವೆ ಮಾಡುವಳೋ, ಅವಳ ಪತಿಯು ವೈಕುಂಠ ಲೋಕದಲ್ಲಿ ಭಗವತ್ಸಾರೂಪ್ಯವನ್ನು ಪಡೆಯುತ್ತಾನೆ. ಅಕೆಯೂ ಪತಿಯ ಜೊತೆ ಲಕ್ಷ್ಮಿಯಂತೆ ಆನಂದಿತಳಾಗುತ್ತಾಳೆ.

❑❑

17. ದ್ರೌಪದಿ - ಸತ್ಯಭಾಮಾ - ಸಂವಾದ

ಈ ವಿಷಯದಲ್ಲಿ ಪತಿ ಸೇವೆಯ ಪ್ರಭಾವದಿಂದ ಲಕ್ಷ್ಮಿಯ ಸ್ಥಾನವನ್ನು ಪಡೆದ ದ್ರೌಪದಿಯ ಉದಾಹರಣೆ ದೊರೆಯುತ್ತದೆ. ಅರ್ಜುನನೂ ಸಹ ಭಗವಂತನ ಪರಂಧಾಮಕ್ಕೆ ಹೋಗಿದ್ದನೆಂಬೂದೂ ತಿಳಿದು ಬರುತ್ತದೆ. ಈ ಮಾತು ಮಹಾಭಾರತದ ಸ್ವರ್ಗಾರೋಹಣ ಪರ್ವದಲ್ಲಿ ಬರುತ್ತದೆ. ದ್ರೌಪದಿಯು ಉತ್ತಮ ಮಟ್ಟದ ಪತಿವ್ರತೆಯಾಗಿದ್ದಳು. ಅವಳ ಪತಿಸೇವೆಯ ವಿವರಣೆಯನ್ನು ಇಲ್ಲಿ ಸಂಕ್ಷೇಪವಾಗಿ ಕೊಡಲಾಗಿದೆ. ಭಗವಾನ್ ಶ್ರೀಕೃಷ್ಣನ ಮಹಾರಾಣಿ ಸತ್ಯಭಾಮೆಯೂ ಅವಳಿಂದ ಶಿಕ್ಷಣ ಪಡೆದಿದ್ದಾಳೆ.

ಒಂದು ಬಾರಿ, ಪಾಂಡವರು ವನವಾಸದಲ್ಲಿದ್ದಾಗ ಶ್ರೀಕೃಷ್ಣನು ಅವರನ್ನು ಭೇಟಿಯಾಗಲೂ ಬಂದಿದ್ದನು. ಸತ್ಯಭಾಮೆಯೂ ಅವನ ಜೊತೆಯಲ್ಲಿದ್ದಳು. ಸತ್ಯಭಾಮೆಯೂ ದ್ರೌಪದಿಯಲ್ಲಿ 'ಪಾಂಡವರು ಯಾವಾಗಲೂ ನಿನ್ನ ವಶದಲ್ಲಿಯೇ ಇರುವುದರ ರಹಸ್ಯವನ್ನು ನನಗೆ ಹೇಳು. ಪಾಂಚಾಲಿ ! ಶ್ಯಾಮ ಸುಂದರನನ್ನು ನನ್ನ ಅಧೀನದಲ್ಲಿಟ್ಟುಕೊಳ್ಳಲು ಯಾವುದಾದರೂ ವ್ರತ, ತಪಸ್ಸು, ಮಂತ್ರ, ಔಷಧಿ, ವಿದ್ಯೆ, ಜಪ, ಹೋಮ ಅಥವಾ ಗಿಡಮೂಲಿಕೆಗಳಿದ್ದರೆ ಹೇಳು' ಎಂದು ಕೇಳಿದಳು.

ಆಗ ಪತಿ ಪರಾಯಣೆಯಾದ ದ್ರೌಪದಿಯು ಅವಳಿಗೆ ಹೇಳಿದಳು – 'ಸತ್ಯಭಾಮಾ ! ನೀನಂತೂ ನನ್ನಲ್ಲಿ ದುರಾಚಾರಿಣಿ. ಸ್ತ್ರೀಯರು ಮಾಡುವಂತಹ ಕೆಲಸದ ಬಗೆಗೆ ಕೇಳುತ್ತಿರುವೆ. ಆ ದೂಷಿತ ಆಚರಣೆಯುಳ್ಳ ಸ್ತ್ರೀಯರ ಮಾರ್ಗದ ಕುರಿತು ನಾನು ಏನು ಹೇಳಲಿ ? ಅವರ ವಿಷಯದಲ್ಲಿ ಪ್ರಶ್ನಿಸುವುದಾಗಲೀ, ಅವರನ್ನು ಕುರಿತು ಯೋಚಿಸುವುದಾಗಲೀ ನಿನಗೆ ಉಚಿತವಲ್ಲ. ಏಕೆಂದರೆ ನೀನು ಬುದ್ಧಿವಂತೆ ಹಾಗೂ ಶ್ರೀಕೃಷ್ಣನ ಪಟ್ಟಮಹಿಷಿಯಾಗಿರುವೆ. ತನ್ನ ಗೃಹಣಿಯು ತನ್ನನ್ನು ವಶದಲ್ಲಿಟ್ಟುಕೊಳ್ಳಲು ಮಂತ್ರ-ತಂತ್ರ ಪ್ರಯೋಗ ಮಾಡುತ್ತಿದ್ದಾಳೆನ್ನುವುದು ಪತಿಗೆ ಗೊತ್ತಾದರೆ, ಅವನು ಮನೆಯೊಳಗೆ ನುಗ್ಗಿರುವ ಹಾವಿನಿಂದ ದೂರವಿರುವಂತೆ ಹೆಂಡತಿಯಿಂದ ದೂರವಿರುತ್ತಾನೆ. ಅದರಿಂದ ನಾನಾ ಅನರ್ಥಗಳುಂಟಾಗುತ್ತವೆ. ಧೂರ್ತರು ಇದನ್ನು ದುರುಪಯೋಗಪಡಿಸಿಕೊಂಡು

ಯಂತ್ರ - ಮಂತ್ರ ನೆಪದಿಂದ ಭಯಂಕರ ರೋಗಗಳುಂಟಾಗುವ ವಸ್ತುಗಳನ್ನು ಕೊಡುತ್ತಾರೆ. ಪತಿಯ ಶತ್ರುಗಳು ಆ ಸಮಯವನ್ನೇ ಉಪಯೋಗಿಸಿಕೊಂಡು ವಿಷಪ್ರಯೋಗವನ್ನೂ ಮಾಡ ಬಹುದು. ಅವರು ಎಂತಹ ಚೂರ್ಣವನ್ನು ಕೊಡುತ್ತಾರೆಂದರೆ ಅದು ನಾಲಿಗೆಗಾಗಲಿ, ಚರ್ಮಕ್ಕಾಗಲೀ ಸ್ವಲ್ಪ ಸ್ಪರ್ಶವಾದರೆ ಸಾಕು ಪತಿಯು ನಿಸ್ಸಂದೇಹವಾಗಿ ಆಕ್ಷಣದಲ್ಲಿಯೇ ಮೃತನಾಗುವನು. ಇಂತಹ ಸ್ತ್ರೀಯರು ತಮ್ಮ ಪತಿಯನ್ನು ನಾನಾ ರೀತಿಯ ರೋಗಗಳಿಗೆ ಗುರಿ ಮಾಡುತ್ತಾರೆ. ಅವರು ತಮ್ಮ ಕುಬುದ್ಧಿಯಿಂದ ಜಲೋದರ, ಕುಷ್ಠ ವೃದ್ಧಾಪ್ಯ, ನಪುಂಸಕತೆ, ಜಡತ್ವ ಮತ್ತು ಕಿವುಡು ಮುಂತಾದ ರೋಗಗಳಿಗೆ ಗುರಿಯಾಗುತ್ತಾರೆ. ಈ ರೀತಿಯಾಗಿ ಧೂರ್ತ-ಪಾಪಿಗಳ ಮಾತಿಗೆ ಮರುಳಾಗುವ ದುಷ್ಟ ನಾರಿಯರು ತಮ್ಮ ಪತಿಗಳಿಗೆ ತೊಂದರೆಯುಂಟು ಮಾಡುತ್ತಾರೆ. ಈ ರೀತಿ ಸ್ತ್ರೀಯರು ಎಂದೂ ತಮ್ಮ ಪತಿಗೆ ಯಾವ ರೀತಿಯ ಅಪ್ರಿಯವನ್ನೂ ಮಾಡಬಾರದು.

'ಯಶಸ್ವಿನೀ ಸತ್ಯಭಾಮಾ ! ಮಹಾತ್ಮಾ ಪಾಂಡವರ ಜೊತೆಗೆ ನಾನು ಆಚರಿಸುವ ಆಚರಣೆಯನ್ನು ಸತ್ಯವಾಗಿ ನಿನಗೆ ತಿಳಿಸುತ್ತೇನೆ, ಕೇಳು. ನಾನು ಅಹಂಕಾರ ಮತ್ತು ಕಾಮ-ಕ್ರೋಧವನ್ನು ಬಿಟ್ಟು ಬಹಳ ಎಚ್ಚರಿಕೆಯಿಂದ ಎಲ್ಲ ಪಾಂಡವರ ಸೇವೆಯನ್ನು ಅವರ ಇತರ ಸ್ತ್ರೀಯರ ಸಹಿತ ಮಾಡುತ್ತೇನೆ. ನಾನು ಅಸೂಯೆಯಿಂದ ದೂರವಿರುತ್ತೇನೆ. ಮನಸ್ಸನ್ನು ವಶದಲ್ಲಿಟ್ಟುಕೊಂಡು ಕೇವಲ ಸೇವೆಯ ಅಭಿಲಾಷೆಯಿಂದಲೇ ನನ್ನ ಪತಿಗಳ ಇಚ್ಛೆಯಂತೆ ನಡೆಯುತ್ತೇನೆ. ಇವೆಲ್ಲವನ್ನು ಮಾಡಿದರೂ ನಾನು ಅಹಂಕಾರಕ್ಕೆ ವಶಳಾಗುವುದಿಲ್ಲ. ನಾನು ಎಂದೂ ಕಠೋರ ವಚನಗಳನ್ನಾಡುವುದಿಲ್ಲ, ಅಸಭ್ಯಳಾಗಿ ವರ್ತಿಸುವುದಿಲ್ಲ, ಪೊಳ್ಳು ಮಾತುಗಳಿಗೆ ಗಮನಕೊಡುವುದಿಲ್ಲ, ದುರಾಚರಣೆಗಳಿಂದ ದೂರವಿರುತ್ತೇನೆ. ಪಾಂಡವರ ಅಭಿಪ್ರಾಯದಂತೆ ನಡೆಯುತ್ತೇನೆ. ದೇವತೆಗಳು, ಮನುಷ್ಯರು, ಗಂಧರ್ವರು, ಯುವಕರು, ರಸಿಕರು, ಧನವಂತರು ಅಥವಾ ರೂಪವಂತರು - ಯಾವ ಪುರುಷರೇ ಆಗಲಿ, ನನ್ನ ಮನಸ್ಸು ಪಾಂಡವರನ್ನು ಬಿಟ್ಟು ಅವರ ಕಡೆಗೆ ಹೋಗುವುದಿಲ್ಲ. ನನ್ನ ಪತಿಗಳು ಭೋಜನ ಮಾಡಿದ ಮೇಲೆ ನಾನು ಭೋಜನ ಮಾಡುತ್ತೇನೆ. ಅವರು ಸ್ನಾನ ಮಾಡಿದ ಮೇಲೆ ನಾನು ಸ್ನಾನ ಮಾಡುತ್ತೇನೆ. ಅವರು ಕುಳಿತುಕೊಂಡ ಮೇಲೆ ನಾನು

ಕುಳಿತುಕೊಳ್ಳುತ್ತೇನೆ. ನನ್ನ ಪತಿಗಳು ಹೊರಗಿನಿಂದ ಮನೆಗೆ ಬಂದಾಗ ನಾನು ಎದ್ದು ನಿಂತು ಅವರಿಗೆ ಕೈಕಾಲು ತೊಳೆದುಕೊಳ್ಳಲು ನೀರು ಕೊಟ್ಟು ಕುಳಿತುಕೊಳ್ಳಲು ಆಸನಗಳನ್ನು ಕೊಡುತ್ತೇನೆ. ನಾನು ಮನೆಯ ಪಾತ್ರೆಗಳನ್ನು ತೊಳೆದು ಶುದ್ಧ ಮಾಡಿಡುತ್ತೇನೆ. ರುಚಿಯಾದ ಅಡುಗೆಯನ್ನು ಸಿದ್ಧ ಮಾಡುತ್ತೇನೆ. ಸಮಯಕ್ಕೆ ಸರಿಯಾಗಿ ಭೋಜನ ಮಾಡಿಸುತ್ತೇನೆ. ಮನೆಯಲ್ಲಿ ಗುಪ್ತರೂಪದಲ್ಲಿ ದವಸ ಧಾನ್ಯಗಳನ್ನು ಸಂಚಯಮಾಡುತ್ತೇನೆ. ಮನೆಯನ್ನು ಗುಡಿಸಿ-ಸಾರಿಸಿ ಚೊಕ್ಕಟವಾಗಿಡುತ್ತೇನೆ. ನಾನು ಯಾರನ್ನೂ ತಿರಸ್ಕರಿಸಿ ಮಾತನಾಡುವುದಿಲ್ಲ. ಕುತ್ಸಿತ ಸ್ತ್ರೀಯರನ್ನು ಹತ್ತಿರ ಸೇರಿಸುವುದಿಲ್ಲ. ಯಾವಾಗಲೂ ಪತಿಗಳಿಗೆ ಅನುಕೂಲಳಾಗಿದ್ದು ಆಲಸ್ಯದಿಂದ ದೂರವಿರುತ್ತೇನೆ. ಯಾವಾಗಲೂ ಸತ್ಯ ಭಾಷಣದಲ್ಲೂ, ಪತಿಸೇವೆಯಲ್ಲಿಯೂ ತತ್ಪರಳಾಗಿರುತ್ತೇನೆ. ಪತಿದೇವರುಗಳಿಲ್ಲದೆ ಒಬ್ಬಂಟಿಗಳಾಗಿರಲು ನಾನು ವಿಂಡಿತ ಇಷ್ಟಪಡುವುದಿಲ್ಲ. ಯಾವುದಾದರೂ ಕೌಟುಂಬಿಕ ಕಾರ್ಯಾರ್ಥವಾಗಿ ಪತಿಗಳು ಹೊರಗೆ ಹೋಗಿರುವಾಗ ನಾನು ಹೂವು-ಸುಗಂಧ ದ್ರವ್ಯಗಳನ್ನುಪಯೋಗಿಸದೆ ನಿಯಮ-ವ್ರತಗಳ ಪಾಲನೆಯಲ್ಲಿ ಕಾಲಕಳೆಯುತ್ತೇನೆ. ನನ್ನ ಪತಿಗಳು ಯಾವ ಆಹಾರ-ಪಾನೀಯಗಳನ್ನು ಸೇವಿಸುವುದಿಲ್ಲವೋ ಅವುಗಳನ್ನು ನಾನೂ ಸೇವಿಸುವುದಿಲ್ಲ. ಶಾಸ್ತ್ರಗಳಲ್ಲಿ ಸ್ತ್ರೀಯರಿಗೆ ಏನೇನು ಹೇಳಿದೆಯೋ ಆವೆಲ್ಲವನ್ನು ನಾನು ಪಾಲಿಸುತ್ತೇನೆ. ಪತಿಗಳು ಮನೆಯಲ್ಲಿರುವಾಗ ಶರೀರವನ್ನು ಯಥಾ ಪ್ರಾಪ್ತ ವಸ್ತ್ರಾಲಂಕಾರಗಳಿಂದ ಸಿಂಗರಿಸಿಕೊಳ್ಳುತ್ತೇನೆ. ಯಾವಾಗಲೂ ಎಚ್ಚರದಿಂದ ಪತಿದೇವರುಗಳಿಗೆ ಪ್ರಿಯವಾದ ಕೆಲಸ ಮಾಡುವುದರಲ್ಲಿ ತತ್ಪರಳಾಗಿರುತ್ತೇನೆ.

ಅತ್ತೆಯವರು ಕುಟುಂಬಕ್ಕೆ ಸಂಬಂಧಪಟ್ಟಂತೆ ಯಾವ ಯಾವ ಧರ್ಮಗಳನ್ನು ಹೇಳಿದ್ದಾರೋ ಅವೆಲ್ಲವನ್ನು ನಾನು ಪಾಲಿಸುತ್ತೇನೆ. ಭಿಕ್ಷೆ ಹಾಕುವುದು, ಪೂಜೆ, ಶ್ರಾದ್ಧ ಹಬ್ಬ ಹರಿದಿನಗಳಲ್ಲಿ ಪಕ್ವಾನ್ನ ಸಿದ್ಧಗೊಳಿಸುವುದು, ಅತಿಥಿಗಳನ್ನು ಸತ್ಕರಿಸುವುದು ಹಾಗೂ ನನಗೆ ನಿಗದಿಯಾಗಿರುವ ಎಲ್ಲ ಕರ್ತವ್ಯಗಳನ್ನು ಎಚ್ಚರಿಕೆಯಿಂದ ಹಗಲೂ-ರಾತ್ರಿ ಆಚರಿಸುತ್ತೇನೆ. ನಾನು ವಿನಯವನ್ನು, ನಿಯಮಗಳನ್ನು ಎಂದೂ ಉಲ್ಲಂಘಿಸುವುದಿಲ್ಲ. ನನ್ನ ಪತಿಗಳು ಮೃದು ಚಿತ್ತರೂ, ಸರಳ ಸ್ವಭಾವದವರು, ಸತ್ಯ ನಿಷ್ಠರೂ, ಸತ್ಯ ಧರ್ಮ ಪಾಲನೆ ಮಾಡುವವರೂ

ಆಗಿದ್ದಾರೆ. ನನ್ನ ದೃಷ್ಟಿಯಲ್ಲಿ ಸ್ತ್ರೀಯರು ಪತಿಯ ಅಧೀನದಲ್ಲಿರುವುದೇ ಸನಾತನ ಧರ್ಮವಾಗಿದೆ. ಅವರೇ ಇಷ್ಟದೇವರೂ, ಆಶ್ರಯವೂ ಆಗಿದ್ದಾರೆ. ನಾನು ನನ್ನ ಪತಿಗಳಿಗಿಂತ ದೊಡ್ಡವಳೆಂದು ಎಂದೂ ಭಾವಿಸುವುದಿಲ್ಲ. ಅವರು ಮಾಡುವುದಕ್ಕಿಂತ ಉತ್ತಮ ಭೋಜನ ಮಾಡುವುದಿಲ್ಲ. ಅತ್ತೆಯವರ ಜೊತೆ ಎಂದೂ ವಾಗ್ವಾದ ಮಾಡುವುದಿಲ್ಲ. ಯಾವಾಗಲೂ ಸಂಯಮದಿಂದಿರುತ್ತೇನೆ. ಹಿರಿಯರ-ವೃದ್ಧರ ಸೇವೆಯಲ್ಲಿ ಮಗ್ನಳಾಗಿರುತ್ತೇನೆ. ಇದರಿಂದಲೇ ಪತಿಗಳು ನನಗೆ ಅನುಕೂಲರಾಗಿರುತ್ತಾರೆ. ವೀರ ಮಾತೆ ಸತ್ಯವಾದಿನಿ ಕುಂತೀ ದೇವಿಯನ್ನು ಭೋಜನ, ವಸ್ತ್ರ ಜಲ ಮುಂತಾದವುಗಳಿಂದ ಸೇವಿಸುತ್ತೇನೆ. ಭೋಜನ ಮುಂತಾದವುಗಳಲ್ಲಿ ನಾನು ನನಗಾಗಿ ಯಾವಾಗಲೂ ಅವರಿಗಿಂತ ವಿಶೇಷವಾದುದನ್ನು ಇಟ್ಟುಕೊಳ್ಳುವುದಿಲ್ಲ. ಇಂದ್ರಪ್ರಸ್ಥದಲ್ಲಿದ್ದು ಯುಧಿಷ್ಠರ ಮಹಾರಾಜರು ಪೃಥ್ವಿಪಾಲನೆ ಮಾಡು ತ್ತಿರುವಾಗ ಅರಮನೆಯಲ್ಲಿ ಪ್ರತಿನಿತ್ಯವೂ ಎಂಟು ಸಾವಿರ ಬ್ರಾಹ್ಮಣರು ಚಿನ್ನದ ತಟ್ಟೆಯಲ್ಲಿ ಭೋಜನ ಮಾಡುತ್ತಿದ್ದರು ಮತ್ತು ಅವರಿಗೆ ಹತ್ತು ಸಾವಿರ ದಾಸಿಯರಿದ್ದರು. ನನಗೆ ಅವರೆಲ್ಲರ ಹೆಸರು, ರೂಪ, ಭೋಜನ, ವಸ್ತ್ರ ಎಲ್ಲ ವಿಷಯಗಳೂ ತಿಳಿದಿತ್ತು. ಅವರಲ್ಲಿ ಯಾರು ಯಾವ ಕೆಲಸ ಮಾಡಿದ್ದಾರೆ, ಯಾವ ಕೆಲಸ ಮಾಡಿಲ್ಲವೆಂಬುದೂ ನನಗೆ ಗೊತ್ತಾಗುತ್ತಿತ್ತು. ಮತಿವಂತ ಕುಂತೀ ನಂದನರ ಹತ್ತು ಸಾವಿರ ದಾಸಿಯರು ದಿನ-ರಾತ್ರಿ ಕೈಯಲ್ಲಿ ಪಾತ್ರೆಯನ್ನು ಹಿಡಿದು ಅತಿಥಿಗಳಿಗೆ ಭೋಜನ ಮಾಡಿಸುತ್ತಿದ್ದರು. ಆ ಸಮಯದಲ್ಲಿ ಯುಧಿಷ್ಠಿರ ಮಹಾರಾಜರ ಜೊತೆ ಒಂದು ಲಕ್ಷ ಕುದುರೆಗಳು, ಒಂದು ಲಕ್ಷ ಆನೆಗಳೂ ಹೋಗುತ್ತಿದ್ದವು. ಅವುಗಳ ರಕ್ಷಣೆ ಮತ್ತು ವ್ಯವಸ್ಥೆಯನ್ನೂ ನಾನೇ ಇಡುತ್ತಿದ್ದೆ. ಅವುಗಳ ಆವಶ್ಯಕತೆಗಳನ್ನೂ ನಾನೇ ನೋಡಿಕೊಳ್ಳುತ್ತಿದ್ದೆ. ಅಂತಃಪುರದ ಗೋಪಳರು ಮತ್ತು ಕುರುಬರಿಂದ ಹಿಡಿದು ಎಲ್ಲ ಸೇವಕರ ಕೆಲಸ-ಕರ್ತವ್ಯಗಳ ಮೇಲ್ವಿಚಾರಣೆಯನ್ನು ನಾನೇ ನೋಡಿಕೊಳ್ಳುತ್ತಿದ್ದೆ.

ಯಶಸ್ವಿನಿ ಸತ್ಯಭಾಮಾ ! ಮಹಾರಾಜರ ಎಲ್ಲ ಆದಾಯ, ಖರ್ಚು ಮತ್ತು ಉಳಿತಾಯದ ಎಲ್ಲ ವಿವರಣೆಯನ್ನು ನಾನೊಬ್ಬಳೇ ನೋಡಿಕೊಳ್ಳುತ್ತಿದ್ದೆ. ಪಾಂಡವರು ಕುಟುಂಬದ ಎಲ್ಲ ಭಾರವನ್ನೂ ನನ್ನ ಮೇಲೆ ಹಾಕಿ ತಾವು

ಪೂಜೆ-ಪಾರಾಯಣೆಯಲ್ಲಿ ಮಗ್ನರಾಗಿರುತ್ತಿದ್ದರು. ಅತಿಥಿಗಳ ಸ್ವಾಗತ-ಸತ್ಕಾರ ಮಾಡುತ್ತಿದ್ದರು. ನಾನು ಎಲ್ಲ ರೀತಿಯ ಸುಖಗಳನ್ನೂ ಬಿಟ್ಟು ಅವರನ್ನು ನೋಡಿಕೊಳ್ಳುತ್ತಿದ್ದೆ. ವರುಣನ ಭಂಡಾರದಂತೆ ಇದ್ದ ನನ್ನ ಧರ್ಮಾತ್ಮರಾದ ಪತಿಗಳ ಗುಪ್ತ ಅಕ್ಷಯ ಭಂಡಾರದ ವಿಚಾರವೂ ನನಗೊಬ್ಬಳಿಗೆ ಮಾತ್ರ ಗೊತ್ತಿತ್ತು. ನಾನು ಹಸಿವು ಬಾಯಾರಿಕೆಗಳನ್ನು ಸಹಿಸಿ ಹಗಲು ರಾತ್ರಿ ಪಾಂಡವರ ಸೇವೆಯಲ್ಲಿ ಲೀನಳಾಗಿರುತ್ತಿದ್ದೆ. ನಾನು ಎಲ್ಲರಿಗಿಂತ ಮೊದಲೇ ಬಳುತ್ತಿದ್ದೆ. ಎಲ್ಲರಿಗಿಂತ ಕಡೆಗೆ ಮಲಗುತ್ತಿದ್ದೆ'.

ದ್ರೌಪದಿಯ ಈ ಧರ್ಮಯುಕ್ತ ಮಾತುಗಳನ್ನು ಕೇಳಿ ಸತ್ಯಭಾಮೆಯು ಆದರ-ಮೆಚ್ಚುಗೆಯಿಂದ ಅವಳನ್ನು ನೋಡಿ ಹೇಳಿದಳು – 'ಪಾಂಚಾಲಿ ! ನಿನ್ನಲ್ಲಿ ನನ್ನ ಪ್ರಾರ್ಥನೆಯೆಂದರೆ, ನಾನು ಹೇಳಿದ – ಕೇಳಿದ ಮಾತುಗಳಿಗೆ ನನ್ನನ್ನು ಕ್ಷಮಿಸು. ಗೆಳತಿಯರು ಹಾಸ್ಯಕ್ಕಾಗಿ ತಿಳಿದೂ ತಿಳಿದೂ ಈ ರೀತಿ ಮಾತನಾಡುತ್ತಾರೆ.'

ದ್ರೌಪದಿ ಹೇಳಿದಳು – ಸಖ್ಯಾ! 'ಪತಿಯ ಚಿತ್ತವನ್ನು ತಮ್ಮ ಅನುಕೂಲಕ್ಕೆ ತಕ್ಕಂತೆ ಮಾಡಿಕೊಳ್ಳಲು ಈ ನಿರ್ದೋಷ ಮಾರ್ಗವನ್ನು ಹೇಳುತ್ತೇನೆ. ನೀನು ಈ ಮಾರ್ಗವನ್ನು ಅನುಸರಿಸಿದರೆ ನಿನ್ನ ಸ್ವಾಮಿಯು ನಿನ್ನ ಕಡೆಗೆ ಖಂಡಿತ ಆಕರ್ಷಿತನಾಗುತ್ತಾನೆ.'

ನೈತಾದೃಶಂ ದೈವತಮಸ್ತಿ ಸತ್ಯೇ
ಸರ್ವೇಷು ಲೋಕೇಷು ಸದೇವಕೇಷು ।
ಯಥಾ ಪತಿಸ್ತಸ್ಯ ತು ಸರ್ವಕಾಮಾ
ಲಭ್ಯಾಃ ಪ್ರಸಾದಾತ್ ಕುಪಿತಶ್ಚ ಹನ್ಯಾತ್ ॥

(ಮಹಾ.ವನ. ೨೩೪/೨)

ಸತ್ಯಭಾಮಾ ! ಸ್ತ್ರೀಯರಿಗೆ ಇಹ ಪರದಲ್ಲಿ ಪತಿಗೆ ಸಮಾನವಾದ ಬೇರೆ ದೇವರಿಲ್ಲ. ಅವನು ಪ್ರಸನ್ನನಾದರೆ ಪತ್ನಿಯು ಎಲ್ಲ ಸುಖಗಳನ್ನೂ ಪಡೆಯುತ್ತಾಳೆ. ಅವನು ಮುನಿದರೆ ಪತ್ನಿಯ ಎಲ್ಲ ಸುಖಗಳೂ ಮಣ್ಣುಗೂಡುತ್ತವೆ.

'ಹೇ ಸಾಧ್ವೀ! ಸಾಂಸಾರಿಕ ಭೋಗರೂಪ ಸುಖದಿಂದ ನಿಜವಾದ

ಸುಖ, ತೃಪ್ತಿ ಎಂದಿಗೂ ದೊರೆಯುವುದಿಲ್ಲ. ಸುಖ ಪ್ರಾಪ್ತಿಯ ಸಾಧನವೆಂದರೆ ಸ್ವಾಯಯುಕ್ತ ದುಃಖವನ್ನು ಸಹಿಸುವುದೇ ಆಗಿರುತ್ತದೆ. ಆದ್ದರಿಂದ ನೀನು ಸುಹೃದಯತೆ, ಪ್ರೇಮ, ಪರಿಚರ್ಯೆ, ಕಾರ್ಯಕುಶಲತೆ ಮತ್ತು ನಾನಾ ರೀತಿಯ ಪುಷ್ಪ-ಚಂನಾದಿಗಳಿಂದ ಶ್ರೀಕೃಷ್ಣನ ಸೇವೆಯನ್ನು ಮಾಡು. ಅವನು ತಾನು ಇವಳಿಗೆ ಪ್ರೀತಿಪಾತ್ರನಾಗಿದ್ದೇನೆ ಎಂದು ಭಾವಿಸುವಂತಹ ಕೆಲಸವನ್ನೇ ಮಾಡು. ಶ್ರೀಕೃಷ್ಣನು ಹೊರಗಿನಿಂದ ಒಳಕ್ಕೆ ಬರುವ ಶಬ್ದವು ಬಾಗಿಲಿನ ಹತ್ತಿರ ನಿನ್ನ ಕಿವಿಗೆ ಬಿದ್ದಕೂಡಲೆ ನೀನು ಅಂಗಳದಲ್ಲಿ ಅವನ ಸ್ವಾಗತಕ್ಕೆ ಸಿದ್ಧಳಾಗಿ ನಿಂತುಕೋ. ಒಳಗೆ ಬಂದಾಗ ಕೈಕಾಲು ತೊಳೆದುಕೊಳ್ಳಲು ನೀರನ್ನು ಕೊಟ್ಟು ಸತ್ಕರಿಸು.'

ಸಂಪ್ರೇಷಿತಾಯಾಮಥ ಚೈವ ದಾಸ್ಯಾ -
ಮುತ್ಥಾಯ ಸರ್ವಂ ಸ್ವಯಮೇವ ಕಾರ್ಯಮ್ ।
ಜಾನಾತು ಕೃಷ್ಣಸ್ತವ ಭಾವಮೇತಂ
ಸರ್ವಾತ್ಮನಾ ಮಾಂ ಭಜತೀತಿ ಸತ್ಯೇ ॥
(ಮಹಾ. ವನ. 233/2)

'ಹೇ ಸತ್ಯಭಾಮಾ ! ನಿನ್ನ ಪತಿಯು ಯಾವುದಾದರೂ ಕೆಲಸವನ್ನು ಮಾಡಲು ದಾಸಿಗೆ ಆಜ್ಞಾಪಿಸಿದರೆ, ನೀನು ಕೂಡಲೇ ದಾಸಿಯನ್ನು ಕಡೆದು ಆ ಎಲ್ಲ ಕೆಲಸವನ್ನೂ ನೀನೇ ಮಾಡು. ಸತ್ಯಭಾಮೆಯು ಎಲ್ಲ ರೀತಿಯಿಂದಲೂ ನನ್ನನ್ನೇ ಇಷ್ಟಪಡುತ್ತಾಳೆಂಬುದು ಶ್ರೀಕೃಷ್ಣನಿಗೆ ಚೆನ್ನಾಗಿ ಮನವರಿಕೆಯಾಗಬೇಕು.'

ನಿನ್ನ ಪತಿಯು ಗುಪ್ತವಾಗಿಡಲು ಆವಶ್ಯಕವಿಲ್ಲದ ಮಾತನ್ನು ನಿನಗೆ ಹೇಳಿದರೂ ಅದನ್ನು ಇನ್ನೊಬ್ಬರಿಗೆ ನೀನು ಹೇಳಬೇಡ. ಪತಿಗೆ ಪ್ರಿಯ, ಸ್ನೇಹಿ, ಹಿತೈಷಿಗಳಾಗಿರುವವರಿಗೂ ಮೃಷ್ಟಾನ್ನ ಭೋಜನ ಮಾಡಿಸು. ಅವನಿಗೆ ಶತ್ರುಗಳಾಗಿರುವವರಿಂದ, ಉಪೇಕ್ಷಣೀಯರಾಗಿರುವವರಿಂದ ಮತ್ತು ಅಶುಭ ಕೋರುವವರಿಂದ ಯಾವಾಗಲೂ ದೂರವಿರು. ಪ್ರದ್ಯುಮ್ನ ಮತ್ತು ಸಾಂಬ ಇವರು ನಿನ್ನ ಪುತ್ರರಾಗಿದ್ದರೂ ಏಕಾಂತದಲ್ಲಿ ಅವರೊಡನೆ ಕುಳಿತುಕೊಳ್ಳಬೇಡ.'

ಮಹಾಕುಲೀನಾಭಿರಪಾಪಿಕಾಭಿಃ ಸ್ತ್ರೀಭಿಃ ಪತೀಭಿಸ್ತವ ಸಖ್ಯಮಸ್ತು ।
ಚಂಡಾಶ್ಚ ಶೌಂಡಾಶ್ಚ ಮಹಾಶನಾಶ್ಚ ಚೌರಾಶ್ಚ ದುಷ್ಟಾಶ್ಚಪಲಾಶ್ಚ ವರ್ಜ್ಯಾಃ ॥
(ಮನು. 39.9/200)

'ಅತ್ಯಂತ ಕುಲೀನಳೂ, ದೋಷರಹಿತಳೂ, ಸತೀ ಸಾಧ್ವಿಯೂ ಆದ ಸ್ತ್ರೀಯರ ಸಂಗಡ ನೀನು ಸ್ನೇಹ – ವಿಶ್ವಾಸಗಳನ್ನಿಡು. ಕ್ರೂರಿಗಳೂ, ಜಗಳ ಗಂಟಿಯರೂ, ಹೊಟ್ಟೆಬಾಕರೂ, ಕಳ್ಳತನ ಮಾಡುವ ಸ್ವಭಾವದವರೂ, ದುಷ್ಟೆಯರೂ ಮತ್ತು ಚಂಚಲ ಸ್ವಭಾವದವರೂ ಆದ ಸ್ತ್ರೀಯರಿಂದ ಯಾವಾಗಲೂ ದೂರವಿರು.'

'ಈ ಪ್ರಕಾರವಾಗಿ ನೀನು ನಿನ್ನ ಪತಿದೇವನ ಸೇವೆಯನ್ನು ಎಲ್ಲ ರೀತಿಯಿಂದಲೂ ಮಾಡು. ಇದರಿಂದ ನಿನ್ನ ಯಶಸ್ಸು ಮತ್ತು ಸೌಭಾಗ್ಯದ ವೃದ್ಧಿಯಾಗುತ್ತದೆ.'

ಸತ್ಯಭಾಮೆ ಮತ್ತು ದ್ರೌಪದಿಯ ಈ ಸಂವಾದವು ಮಹಾಭಾರತದ ವನಪರ್ವದ ೨೩೩ ಮತ್ತು ೨೩೪ನೇ ಅಧ್ಯಾಯಗಳಲ್ಲಿ ವಿಸ್ತಾರವಾಗಿ ವರ್ಣಿತವಾಗಿದೆ. ಅದನ್ನು ಇಲ್ಲಿ ಸಂಗ್ರಹಿಸಿ ಕೊಡಲಾಗಿದೆ. ಪೂರ್ಣವಾಗಿ ತಿಳಿದುಕೊಳ್ಳಬೇಕಾದರೆ ಮೇಲೆ ಹೇಳಿದ ಗ್ರಂಥವನ್ನು ನೋಡಬೇಕು.

ಆದ್ದರಿಂದ ಪತಿವ್ರತಾ ಸ್ತ್ರೀಯು ತನ್ನ ಪತಿಯ ಇಚ್ಛೆಗೆ ಅನುಸಾರವಾಗಿ ಅಲಂಕರಿಸಿಕೊಂಡು ತನ್ನ ಸೇವೆಯಿಂದ ಅವನನ್ನು ತೃಪ್ತಿಪಡಿಸಬೇಕು. ಪತಿಯ ಸುಖಕ್ಕಾಗಿ ತನ್ನ ಶರೀರಕ್ಕೆ ಅರಿಸಿನ ಮತ್ತು ಕುಂಕುಮವನ್ನು ಹಚ್ಚಿಕೊಳ್ಳಬೇಕು. ತಲೆ ಬಾಚಿಕೊಳ್ಳಬೇಕು. ಸಿಂಧೂವಿಟ್ಟುಕೊಳ್ಳಬೇಕು. ಕಣ್ಣಿಗೆ ಕಾಡಿಗೆ ಹಚ್ಚಿಕೊಳ್ಳಬೇಕು. ಬಾಯಿಯಲ್ಲಿ ತಾಂಬೂಲವಿರಬೇಕು. ಹಾಗೂ ಕೈ, ಕಿವಿ, ಕೊರಳು, ಮಸ್ತಕ ಮುಂತಾದ ಅಂಗಗಳನ್ನು ಯಥಾ ಯೋಗ್ಯ ಆಭರಣಗಳಿಂದ ಸಿಂಗರಿಸಿಕೊಳ್ಳಬೇಕು. ಪತಿವ್ರತಾ ಸ್ತ್ರೀಯು ಯಾವಾಗಲೂ ಪ್ರಿಯ, ಮಧುರ, ವಿನಯ ಮತ್ತು ಪ್ರೇಮ ಯುಕ್ತ ವಚನಗಳನ್ನು ಆಡಬೇಕು. ಯಾವುದರಲ್ಲಿ ಪತಿಯ ರುಚಿ ಇರುವುದೋ ಅದೇ ಕೆಲಸವನ್ನು ಅವನ ಆಜ್ಞೆ ಸಂಕೇತದಂತೆ ಪುರ್ವಕವಾಗಿ ಉತ್ಸಾಹದಿಂದ ಮಾಡಬೇಕು. ತನ್ನ ಮನಸ್ಸಿಗೆ ಅನುಕೂಲವಾಗಿದ್ದು ಪತಿಯ ಮನಸ್ಸಿಗೆ ಪ್ರತಿಕೂಲವಾಗಿದ್ದರೆ ಆ ಕೆಲಸವನ್ನು ಖಂಡಿತ ಮಾಡಬಾರದು. ಪತಿಯ ಮನಸ್ಸಿಗೆ ಅನುಕೂಲವಾಗಿದ್ದು, ತನ್ನ ಮನಸ್ಸಿಗೆ ಪ್ರತಿಕೂಲವಾಗಿದ್ದರೂ ಅದನ್ನು ಆಸ್ಥೆಯಿಂದ ಮಾಡಬೇಕು. ಪತಿಯ ಪ್ರಸನ್ನತೆಯೆ ತನ್ನ ಪ್ರಸನ್ನತೆಯೆಂದು, ಪತಿಯ ಉದಾಸೀನತೆಯೇ ತನ್ನ ಉದಾಸೀನತೆಯೆಂದೂ

ತಿಳಿಯಬೇಕು. ಸಂಪತ್ತಿನಲ್ಲೂ, ವಿಪತ್ತಿನಲ್ಲೂ, ಸುಖ ದಲ್ಲೂ, ದುಃಖದಲ್ಲೂ ಯಾವಾಗಲೂ ಪತಿಯ ಮನಸ್ಸನ್ನೇ ಅನುಸರಿಸಿ ನಡೆಯ ಬೇಕು. ಮನುಸ್ಮೃತಿಯಲ್ಲಿ ಹೇಳಿದೆ –

ಸದಾ ಪ್ರಹೃಷ್ಟಯಾ ಭಾವ್ಯಂ ಗೃಹಕಾರ್ಯೇಷು ದಕ್ಷಯಾ।
ಸುಸಂಸ್ಕೃತೋಪಸ್ಕರಯಾ ವ್ಯಯೇ ಚಾಮುಕ್ತಹಸ್ತಯಾ ॥

(೫/೧೫೦)

'ಸ್ತ್ರೀಯು ಯಾವಾಗಲೂ ಪ್ರಸನ್ನ ಚಿತ್ತಳೂ, ಗೃಹ ಕಾರ್ಯದಲ್ಲಿ ಕುಶಲಳೂ, ಮನೆಯ ಎಲ್ಲ ಸಾಮಗ್ರಿಗಳನ್ನು ಸ್ವಚ್ಛವಾಗಿಡುವವಳೂ, ಮತ್ತು ಕೈಹಿಡಿದು ಖರ್ಚು ಮಾಡುವವಳೂ ಆಗಿರಬೇಕು'.

ಯಸ್ಯೈ ದದ್ಯಾತ್ ಪಿತಾ ತ್ವೇನಾಂ ಭ್ರಾತಾ ವಾನುಮತೇ ಪಿತುಃ।
ತಂ ಶುಶ್ರೂಷೇತ ಜೀವಂತಂ ಸಂಸ್ಥಿತಂ ಚ ನ ಲಂಘಯೇತ್ ॥

(೫/೧೫೪)

'ತಂದೆ ಅಥವಾ ತಂದೆಯ ಅನುಮತಿಯಿಂದ ಸಹೋದರನು ಸ್ತ್ರೀಯನ್ನು ಯಾರಿಗೆ ಮದುವೆ ಮಾಡಿಕೊಡುತ್ತಾನೋ ಆ ಪತಿಯ ಸೇವಾ–ಶುಶ್ರೂಷೆಯನ್ನು ಆಜೀವನ ಪರ್ಯಂತ ಮಾಡಬೇಕು ಹಾಗೂ ಅವನು ಮರಣ ಹೊಂದಿದರೂ ಸಹ ಅವನ ಆಜ್ಞೆಯನ್ನೂ, ಸಂಕೇತವನ್ನೂ ಸ್ತ್ರೀಯು ಉಲ್ಲಂಘಿಸಬಾರದು.'

ವಿಶೀಲಃ ಕಾಮವೃತ್ತೋ ವಾ ಗುಣೈರ್ವಾ ಪರಿವರ್ಜಿತಃ।
ಉಪಚರ್ಯಃ ಸ್ತ್ರಿಯಾ ಸಾಧ್ವ್ಯಾ ಸತತಂ ದೇವವತ್ ಪತಿಃ ॥

(೫/೧೫೫)

'ಶೀಲ ಹೀನ, ಸ್ವೇಚ್ಛಾಚಾರಿ ಅಥವಾ ಗುಣಹೀನನಾಗಿದ್ದರೂ ಪತಿಯು ಸಾಧ್ವಿ ಸ್ತ್ರೀಗೆ ಯಾವಾಗಲೂ ದೇವರಂತೆ ಪೂಜನೀಯನಾಗಿದ್ದಾನೆ'.

ನಾಸ್ತಿ ಸ್ತ್ರೀಣಾಂ ಪೃಥಗ್ಯಜ್ಞೋ ನ ವ್ರತಂ ನಾಪ್ಯುಪೋಷಣಮ್ ।
ಪತಿಂ ಶುಶ್ರೂಷತೇ ಯೇನ ತೇನ ಸ್ವರ್ಗೇ ಮಹೀಯತೇ ॥

(೫/೧೫೬)

'ಸ್ತ್ರೀಯರಿಗೆ ಪತಿಸೇವೆಯಿಂದ ಬೇರೆಯಾದ ಯಾವುದೇ ಯಜ್ಞ, ವ್ರತ ಮತ್ತು ಉಪವಾಸ ಮಾಡುವ ವಿಧಾನಗಳೂ ಇರುವುದಿಲ್ಲ. ಪಾತಿವ್ರತ್ಯದ ಆಶ್ರಯದಿಂದ ಅವಳು ಪತಿಯ ಶುಶ್ರೂಷೆಯನ್ನು ಮಾಡಿದರೆ ಅದರಿಂದ ಅವಳು ಸ್ವರ್ಗ ಲೋಕದಲ್ಲಿ ಪೂಜ್ಯಳಾಗುತ್ತಾಳೆ.'

ಪಾಣಿಗ್ರಾಹಸ್ಯ ಸಾಧ್ವೀ ಸ್ತ್ರೀ ಜೀವತೋ ವಾ ಮೃತಸ್ಯ ವಾ ।
ಪತಿಲೋಕಮಭೀಪ್ಸಂತೀ ನಾಚರೇತ್ ಕಿಂಚಿದಪ್ರಿಯಮ್ ॥

(ಜ/೧೫೬)

'ಪರಮ ಕಲ್ಯಾಣಮಯ ಪತಿಲೋಕವನ್ನು ಇಚ್ಛಿಸುವವಳು. ಪಾಣಿಗ್ರಹಣ ಮಾಡುವ ಪತಿಯು ಜೀವಿಸಿರಲಿ ಅಥವಾ ಮೃತ್ಯು ವಶನಾಗಿರಲಿ, ಅವನಿಗೆ ಅಪ್ರಿಯವಾಗುವಂತಹ ಆಚರಣೆ ಮಾಡಬಾರದು.'

ಶ್ರೀಬ್ರಹ್ಮವೈವರ್ತ ಪುರಾಣದ ಗಣೇಶ ಖಂಡದಲ್ಲಿ ಪತಿವ್ರತೆಯ ಲಕ್ಷಣವನ್ನು ಹೀಗೆ ಹೇಳಿದೆ –

ಕುತ್ಸಿತಂ ಪತಿತಂ ಮೂಢಂ ದರಿದ್ರಂ ರೋಗಿಣಂ ಜಡಮ್ ।
ಕುಲಜಾ ವಿಷ್ಣುತುಲ್ಯಂ ಚ ಕಾಂತಂ ಪಶ್ಯತಿ ಸಂತತಮ್ ॥

(೪೪/೧೩.)

'ಕುಲೀನಳಾದ ಪತಿವ್ರತಾ ನಾರಿಯು ತನ್ನ ಪತಿಯು ಪಾಪಿ, ಪತಿತ, ಹುಚ್ಚ, ದರಿದ್ರ, ರೋಗಿ ಅಥವಾ ಮೂರ್ಖನಾಗಿದ್ದರೂ ಸಹ ಯಾವಾಗಲೂ ಅವನನ್ನು ವಿಷ್ಣುವಿನಂತೆ ಕಾಣುತ್ತಾಳೆ.' ದಕ್ಷಸ್ಮೃತಿಯಲ್ಲಿಯೂ ಹೀಗೆ ಹೇಳಿದೆ –

ಅನುಕೂಲಾ ತ್ವನಾಗುಪ್ತಾ ದಕ್ಷಾ ಸಾಧ್ವೀ ಪತಿವ್ರತಾ ।
ಏಭಿರೇವ ಗುಣೈರ್ಯುಕ್ತಾ ಸ್ತ್ರೀ ಶ್ರೀರೇವ ನ ಸಂಶಯಃ ॥

(೪/೧೨)

''ಪತಿವ್ರತೆಯೂ, ಸಾಧ್ವಿಯೂ, ಕಠೋರ ವಚನವನ್ನು ಆಡದಿರುವವಳೂ, ಪತಿಗೆ ಅನುಕೂಲಳೂ ಮತ್ತು ಚತುರಳೂ ಆದ ಸ್ತ್ರೀಯು ನಿಸ್ಸಂದೇಹವಾಗಿ ಲಕ್ಷ್ಮೀಯೇ ಆಗಿರುತ್ತಾಳೆ.'

ಪ್ರಹೃಷ್ಟಮನಸಾ ನಿತ್ಯಂ ಸ್ಥಾನಮಾನವಿಚಕ್ಷಣಾ ।
ಭರ್ತುಃ ಪ್ರೀತಿಕರೀ ಯಾ ತು ಭಾರ್ಯಾ ಸಾ ತ್ವಿಹರಾ ಜರಾ ॥

(೪/೦೩.)

'ಪತಿಯ ಸ್ಥಿತಿ ಮತ್ತು ಮರ್ಯಾದೆಯ ಕಡೆ ಗಮನವಿಡುವವಳೂ, ನಿತ್ಯ ಪ್ರಸನ್ನಚಿತ್ತಳೂ ಮತ್ತು ಪತಿಗೆ ಪ್ರಿಯವಾದುದನ್ನು ಮಾಡುವವಳೂ ಆದ ಸ್ತ್ರೀಯು ಭಾರ್ಯೆ ಎಂದು ಕರೆಸಿಕೊಳ್ಳಲು ಯೋಗ್ಯಳಾಗಿರುತ್ತಾಳೆ. ಇದಕ್ಕೆ ವಿಪರೀತವಾಗಿ ನಡೆದುಕೊಳ್ಳುವವಳು ಜರಾ ರಾಕ್ಷಸಿಗೆ ಸಮಾನಳು'

ಇಂತಹ ಪತಿವ್ರತಾ ನಾರಿಯ ಮಹಿಮೆಯ ಕುರಿತು ಮನು ಮಹಾ ರಾಜರು ಹೀಗೆ ಹೇಳುತ್ತಾರೆ –

ಪತಿಂ ಯಾ ನಾಭಿಚರತಿ ಮನೋವಾಗ್ದೇಹಸಂಯತಾ ।
ಸಾ ಭರ್ತೃಲೋಕಮಾಪ್ನೋತಿ ಸದ್ಭಿಃ ಸಾಧ್ವೀತಿ ಚೋಚ್ಯತೇ ॥

(೫/೧೬೫)

'ಯಾರು ಕಾಯಾ, ವಾಚಾ, ಮನಸಾ ಸಂಯಮದಿಂದಿದ್ದು ಪತಿಗೆ ವಿರುದ್ಧವಾಗಿ ಆಚರಣೆ ಮಾಡುವುದಿಲ್ಲವೋ ಅವಳು ಭಗವತ್ಸರೂಪ ಪತಿಲೋಕವನ್ನು ಪಡೆಯುತ್ತಾಳೆ. ಅವಳನ್ನು ಸತ್ಪುರುಷರು 'ಸಾಧ್ವೀ' ಎಂದು ಹೇಳುತ್ತಾರೆ.

ಅನೇನ ನಾರೀವೃತ್ತೇನ ಮನೋವಾಗ್ದೇಹಸಂಯತಾ ।
ಇಹಗ್ರಾಂ ಕೀರ್ತಿಮಾಪ್ನೋತಿ ಪತಿಲೋಕಂ ಪರತ್ರ ಚ ॥

(೫/೧೬೬)

'ಕಾಯಾ, ವಾಚಾ, ಮನಸಾ ಸಂಯಮದಲ್ಲಿರುವವಳು ಇಹಲೋಕದಲ್ಲಿ ಉತ್ತಮ ಕೀರ್ತಿಯನ್ನೂ, ಪರಲೋಕದಲ್ಲಿ ಪತಿಧಾಮವನ್ನೂ ಪಡೆಯುತ್ತಾಳೆ.'

ಆದ್ದರಿಂದ ಪತಿಯು ರೋಗಿಯಾಗಿರಲಿ ಅಥವಾ ಧರ್ಮಾತ್ಮನಾಗಿರಲಿ, ಮೂರ್ಖನಾಗಿರಲಿ ಅಥವಾ ವಿದ್ವಾಂಸನಾಗಿರಲಿ, ಪತಿಯ ಆಜ್ಞೆಯನ್ನು ಎಂದೂ ಉಲ್ಲಂಘಿಸಬಾರದು. ಸದಾ ಅವನಿಗೆ ಪ್ರಿಯವಾದುದನ್ನೇ ಮಾಡಬೇಕು. ಯಾವ

ಪತ್ನಿಯು ಪತಿಯ ಮನಸ್ಸಿಗೆ ಅನುಕೂಲಳಾಗಿ ನಡೆದು, ಅವನ ಇಚ್ಛಾನುಸಾರವಾಗಿ ಅವನಿಗೆ ತಾಂಬೂಲ ಮಡಿಸಿಕೊಡುವಳೋ, ಬೀಸಣಿಗೆಯಿಂದ ಗಾಳಿ ಬೀಸುವಳೋ, ಕಾಲನ್ನು ಒತ್ತುವಳೋ, ಪ್ರೇಮಪೂರ್ಣ ವಚನಗಳನ್ನಾಡುವಳೋ ಹಾಗೂ ಅವನ ಆಜ್ಞಾಪಾಲನೆಯನ್ನು ಮಾಡಿ ಅವನನ್ನು ಪ್ರಸನ್ನಗೊಳಿಸುವಳೋ ಅವಳು ಮೂರು ಲೋಕಗಳನ್ನು ಗೆಲ್ಲುತ್ತಾಳೆ.

❑❑

18. ಪತಿವ್ರತೆ ಶಾಂಡಿಲೀ

ಈ ವಿಚಾರದಲ್ಲಿ ಪತಿವ್ರತೆ ಶಾಂಡಿಲೀ ಆದರ್ಶವಾಗಿದ್ದಾಳೆ. ಅವಳು ತನ್ನ ಕುಷ್ಠರೋಗ ಪೀಡಿತ ಪತಿಯನ್ನು ದೈವವೆಂದೇ ತಿಳಿದು ಸೇವೆ ಮಾಡಿದಳು –

ಪ್ರತಿಷ್ಠಾನಪುರದಲ್ಲಿ ಕೌಶಿಕ ಎಂಬ ಹೆಸರಿನ ಒಬ್ಬ ಬ್ರಾಹ್ಮಣನಿದ್ದನು. ಅವನು ಪೂರ್ವಜನ್ಮ ಕೃತ ಪಾಪಗಳ ಕಾರಣದಿಂದ ಕುಷ್ಠರೋಗದಿಂದ ನರಳುತ್ತಿದ್ದನು. ಇಂತಹ ಅಸಹ್ಯ ರೋಗಗ್ರಸ್ತನಾಗಿದ್ದರೂ ಅವನ ಪತ್ನಿಯು ಅವನನ್ನು ದೇವರಂತೆ ಪೂಜಿಸುತ್ತಿದ್ದಳು. ಅವಳು ತನ್ನ ಪತಿಯ ಪಾದಗಳಿಗೆ ತೈಲವನ್ನು ಹಚ್ಚಿ ಸ್ನಾನ ಮಾಡಿಸುತ್ತಿದ್ದಳು. ಬಟ್ಟೆ ತೊಡಿಸುವುದು, ಊಟ ಮಾಡಿಸುವುದು, ಅವನ ಉಗುಳು, ಕಫ, ಮಲಮೂತ್ರ ಮತ್ತು ರಕ್ತ- ಕೀವುಗಳನ್ನು ಸ್ವತಃ ತೊಳೆದು ಸ್ವಚ್ಛ ಮಾಡುತ್ತಿದ್ದಳು. ಅವಳು ಅವನನ್ನು ಮೃದು ಮಧುರ ವಚನಗಳಿಂದ ಸಂತೋಷಗೊಳಿಸುತ್ತಿದ್ದಳು. ಈ ರೀತಿಯಾಗಿ ಅವಳು ಅವನನ್ನು ಎಷ್ಟು ಒಲೈಸಿದರೂ ಅವನು ಕ್ರೋಧೀ ಸ್ವಭಾವದ ಮನುಷ್ಯನಾದುದರಿಂದ ಸಾಮಾನ್ಯವಾಗಿ ಅವಳನ್ನು ಬೈಯುತ್ತಲೇ ಇದ್ದನು. ಇಷ್ಟಾದರೂ ಅವಳು ಅವನ ಕಾಲಿಗೆ ಬಿದ್ದು ಅವನನ್ನು ದೇವತಾ ಸ್ವರೂಪನೆಂದು ತಿಳಿಯುತ್ತಿದ್ದಳು. ಅವನ ಶರೀರವು ಜಿಗುಪ್ಸೆ ಹುಟ್ಟಿಸುವಂಥಾದ್ದಾಗಿದ್ದರೂ ಆ ಸಾಧ್ವಿಯು ಅವನನ್ನು ಎಲ್ಲರಿಗಿಂತ ಶ್ರೇಷ್ಠನೆಂದು ತಿಳಿದಿದ್ದಳು. ಆ ಕೌಶಿಕ ಬ್ರಾಹ್ಮಣನ ದೇಹವು ಕುಷ್ಠರೋಗದಿಂದ ಜರ್ಜರಿತವಾಗಿ ನಡೆಯಲು ಅವನಿಂದಾಗುತ್ತಿರಲಿಲ್ಲ. ಆದರೂ ಅವನು ಒಂದು ದಿನ ತನ್ನ ಪತ್ನಿಗೆ ಹೇಳಿದನು – 'ಧರ್ಮಜ್ಞೆ! ಆ ದಿನ ನಾನು ಮನೆಯಲ್ಲಿ ಕುಳಿತು ರಸ್ತೆಯಲ್ಲಿ ಹೋಗುತ್ತಿದ್ದ ವೇಶ್ಯೆಯನ್ನು ನೋಡಿದೆ. ಅವಳ

ಮನೆಗೆ ಈ ದಿನ ನನ್ನನ್ನು ಕರೆದುಕೊಂಡು ಹೋಗಿ ಅವಳ ಭೇಟಿ ಮಾಡಿಸು. ಅವಳು ನನ್ನ ಹೃದಯದಲ್ಲಿ ನೆಲೆಸಿದ್ದಾಳೆ.'

ತನ್ನ ಕಾಮಾತುರ ಪತಿಯ ವಚನವನ್ನು ಕೇಳಿ ಆ ಪತಿವ್ರತೆಯು ಅವನನ್ನು ತನ್ನ ಹೆಗಲ ಮೇಲೆ ಹೊತ್ತು ವೇಶ್ಯೆಯ ಮನೆಗೆ ಹೊರಟಳು. ಅವಳು ರಾಜಮಾರ್ಗದಲ್ಲಿ ಹೋಗುತ್ತಿರುವಾಗ ರಾತ್ರಿಯ ಘೋರ ಅಂಧಕಾರದಲ್ಲಿ ಕಣ್ಣು ಕಾಣಿಸದೆ ಕೌಶಿಕನ ಕಾಲುಗಳು ಮಾರ್ಗದಲ್ಲಿ ಶೂಲಕ್ಕೇರಿಸಲ್ಪಟ್ಟಿದ್ದ ವ್ಯಕ್ತಿಗೆ ತಗಲಿ ಅವನಿಗೆ ನೋವಾಯಿತು. ಕಳ್ಳನಲ್ಲದಿದ್ದರೂ ಕಳ್ಳನೆಂದು ಆರೋಪಿಸಿ ಮಾಂಡವ್ಯ ಋಷಿಯನ್ನು ಶೂಲಕ್ಕೇರಿಸಿದ್ದರು. ಕೌಶಿಕನ ಕಾಲು ತಗಲಿದ್ದರಿಂದ ಅವನಿಗೆ ಸಹಿಸಲಸಾಧ್ಯವಾದ ನೋವುಂಟಾಯಿತು. ಅವನು ಕುಪಿತನಾಗಿ – 'ಯಾರು ಕಾಲಿನಿಂದ ಶೂಲವನ್ನು ಅಲುಗಿಸಿ ನನಗೆ ಸಹಿಸಲಾಗದ ನೋವುಂಟು ಮಾಡಿದನೋ ಆ ಪಾಪಿ ನರಾಧಮನು ಸೂರ್ಯೋದಯವಾಗುತ್ತಲೇ ನಾಶ ಹೊಂದಲಿ'. ಎಂದು ಅತಿ ದಾರುಣವಾದ ಶಾಪವನ್ನು ಕೊಟ್ಟನು. ಈ ಭಯಂಕರ ಶಾಪವನ್ನು ಕೇಳಿ ಪತಿವ್ರತೆಯು ವ್ಯಥಿತಳಾಗಿ – 'ಸೂರ್ಯೋದಯವಾಗದೆ ಇರಲಿ' ಎಂದು ಹೇಳಿದಳು. ಆಗ ಸೂರ್ಯೋದಯವಾಗದೆ ಒಂದೇ ಸಮನೆ ಕತ್ತಲೆಯೇ ಆವರಿಸಿತು.

ಇದರಿಂದ ದೇವತೆಗಳಿಗೆ ಬಹಳ ಭಯವಾಯಿತು. ಅವರು ತಮ್ಮ ತಮ್ಮಲ್ಲಿಯೇ ಹೀಗೆ ಮಾತಾಡಿಕೊಂಡರು – 'ಸೂರ್ಯೋದಯವಾಗದೇ ಇದ್ದರೆ ಸ್ವಾಧ್ಯಾಯ, ವಷಟ್ಕಾರ (ಯಜ್ಞದಲ್ಲಿ ದೇವತೆಗಳಿಗೆ ಹವಿಸ್ಸನ್ನು ಕೊಡುವಾಗ ಹೇಳುವ ಒಂದು ಮಂತ್ರ) ಸ್ವಧಾ (ಶ್ರಾದ್ಧ) ಮತ್ತು ಸ್ವಾಹಾ (ಹೋಮ) ವಿಲ್ಲದೆ ಈ ಎಲ್ಲ ಜಗತ್ತು ನಷ್ಟವಾಗುತ್ತದೆ. ದಿನ ರಾತ್ರಿಯ ವ್ಯವಸ್ಥೆಯಿಲ್ಲದೆ ಮಾಸ, ಋತು, ಅಯನ, ವರ್ಷ ಮತ್ತು ಸಮಯದ ಜ್ಞಾನವೂ ಸಹ ಗೊತ್ತಾಗುವುದಿಲ್ಲ. ಸೂರ್ಯೋದಯವಿಲ್ಲದೆ ಸ್ನಾನ ದಾನ ಮುಂತಾದ ಕ್ರಿಯೆಗಳು ನಿಂತುಹೋಗುತ್ತವೆ. ಅದರಿಂದ ನಮಗೆ ತೃಪ್ತಿ ದೊರೆಯುವುದಿಲ್ಲ. ಮನುಷ್ಯರು ಯಜ್ಞದ ಯಥೋಚಿತ ಭಾಗವನ್ನು ನಮಗೆ ಕೊಟ್ಟು ನಮ್ಮನ್ನು ತೃಪ್ತಿಪಡಿಸಿದಾಗ ನಾವು ಧನ-ಧಾನ್ಯದ ಬೆಳೆಗೆ ಮಳೆ ಸುರಿಸಿ ಅವರನ್ನು ಅನುಗ್ರಹಿಸುತ್ತೇವೆ. ಈ ರೀತಿ ನಾವು ಮಳೆಯನ್ನು ಸುರಿಸಿ ಮನುಷ್ಯರನ್ನು ಮತ್ತು

ಅವರು ಹವಿಸ್ಸನ್ನು ಕೊಟ್ಟು ನಮ್ಮನ್ನು ತೃಪ್ತಿಪಡಿಸುತ್ತಾರೆ. ಯಾವ ದುರಾತ್ಮರು ಲೋಭವಶರಾಗಿ ನಮ್ಮ ಯಜ್ಞಭಾಗವನ್ನು ನಮಗೆ ಕೊಡದೆ ತಾವೇ ಸೇವಿಸುತ್ತಾರೋ ಅಂತಹ ಅಪಕಾರಿ ಪಾಪಿಗಳನ್ನು ನಾಶಮಾಡಲು ನಾವು ನೀರು, ಅಗ್ನಿ, ವಾಯು, ಪೃಥ್ವಿ, ಮುಂತಾದುವನ್ನು ದೂಷಿತವನ್ನಾಗಿ ಮಾಡುತ್ತೇವೆ. ಆ ದೂಷಿತ ವಸ್ತುಗಳನ್ನು ಉಪಭೋಗ ಮಾಡುವುದರಿಂದ ಆ ಕುಕರ್ಮಿಗಳ ಮರಣಕ್ಕಾಗಿ ಭಯಂಕರ ಮಹಾಮಾರಿ ಮುಂತಾದ ರೋಗಗಳು ಉತ್ಪನ್ನವಾಗುತ್ತವೆ. ಯಾರು ನಮ್ಮನ್ನು ತೃಪ್ತಿಪಡಿಸಿ ಶೇಷಾನ್ನವನ್ನು ತಾವು ಉಪಭೋಗಿಸುವರೋ ಅಂತಹ ಮಹಾನುಭಾವರಿಗೆ ನಾವು ಪುಣ್ಯ ಲೋಕವನ್ನು ನೀಡುತ್ತೇವೆ. ಆದರೆ ಈಗ ಸುರ್ಯೋದಯವಾಗದೆ ಮನುಷ್ಯರಿಂದ ಈ ಪುಣ್ಯ ಕಾರ್ಯಗಳು ನೆರವೇರುವುದಿಲ್ಲ. ಈಗ ಸೂರ್ಯೋದಯವಾಗುವುದು ಹೇಗೆ? ಎಂದು ದೇವತೆಗಳು ಪರಸ್ಪರ ಮಾತನಾಡತೊಡಗಿದರು.

ದೇವತೆಗಳ ವಚನಗಳನ್ನು ಕೇಳಿ ಪ್ರಜಾಪತಿ ಬ್ರಹ್ಮನು – " ಮಹರ್ಷಿ ಅತ್ರಿಗಳ ಪತ್ನೀ ತಪಸ್ವಿನೀ ಅನಸೂಯೆಯ ಹತ್ತಿರ ಹೋಗಿ ಸೂರ್ಯೋದ ಯವಾಗುವಂತೆ ಅವಳನ್ನು ಪ್ರಾರ್ಥಿಸಿರಿ" ಎಂದು ಸಲಹೆಕೊಟ್ಟನು, ದೇವತೆ ಗಳೆಲ್ಲರೂ ಅನಸೂಯೆಯ ಹತ್ತಿರ ಹೋಗಿ ಅವಳನ್ನು ಪ್ರಾರ್ಥಿಸಿದರು. ಅವಳು – "ನಿಮಗೇನು ಬೇಕು, ಹೇಳಿ" ಎಂದು ಕೇಳಿದಳು. ದೇವತೆಗಳು – "ಪೂರ್ವದಂತೆ ಹಗಲಾಗಲಿ" ಎಂದು ಯಾಚಿಸಿದರು. ಅನಸೂಯೆಯು – "ದೇವತೆಗಳೇ! ಪತಿವ್ರತೆಯ ಪ್ರಭಾವವು ಯಾವ ರೀತಿಯೂ ಕಮ್ಮಿಯಾಗಲಾರದು. ಆದ್ದರಿಂದ ನಾನು ಆ ಸಾಧ್ವಿಯನ್ನು ಒಲಿಸಿ ಸೂರ್ಯೋದಯವಾಗುವಂತೆ ಪ್ರಯತ್ನಿಸುತ್ತೇನೆ". ಎಂದಳು.

ಹೀಗೆ ಹೇಳಿ ಅನಸೂಯೆಯು ಶಾಂಡಿಲಿಯ ಹತ್ತಿರಕ್ಕೆ ಹೋಗಿ ಅವಳ ಕುಶಲ ಸಮಾಚಾರವನ್ನು ವಿಚಾರಿಸಿದಳು. ಅನಂತರ – ' ಕಲ್ಯಾಣಿ ! ಪತಿಯ ಸೇವೆಯಿಂದಲೇ ನನಗೆ ಮಹತ್ವದ ಫಲವು ಪ್ರಾಪ್ತಿಯಾಗಿದೆ. ಸಂಪೂರ್ಣ ಅಭಿಲಾಷೆಗಳ, ಫಲಗಳ ಪ್ರಾಪ್ತಿಯ ಜೊತೆ ನನ್ನ ಎಲ್ಲ ವಿಘ್ನಗಳೂ ದೂರವಾಗಿವೆ. ಸಾಧ್ವೀ ! ಮಾನವರು ಈ ಐದು ಋಣಗಳನ್ನು ತೀರಿಸಬೇಕು – ತನ್ನ ವರ್ಣ ಧರ್ಮಕ್ಕೆ ಅನುಸಾರವಾಗಿ ಧನ ಸಂಗ್ರಹಿಸಿ ಅದನ್ನು ಶಾಸ್ತ್ರವಿಧಿಯಂತೆ ಸತ್ಪಾತ್ರರಿಗೆ

ದಾನ ಮಾಡಬೇಕು. ಸತ್ಯ, ಸರಳತೆ, ತಪಸ್ಸು ದಾನ, ದಯಾ ಪರಾಯಣ ರಾಗಿರಬೇಕು. ರಾಗ-ದ್ವೇಷಗಳನ್ನು ತ್ಯಜಿಸಬೇಕು. ಶಾಸ್ತ್ರೋಕ್ತ ಕರ್ಮಗಳನ್ನು ಯಥಾ ಶಕ್ತ ಪ್ರತಿದಿನ ಶ್ರದ್ಧಾಪೂರ್ವಕ ಅನುಷ್ಠಾನ ಮಾಡಬೇಕು. ಹೀಗೆ ಮಾಡುವುದರಿಂದ ಮನುಷ್ಯನು ಉತ್ತಮ ಲೋಕವನ್ನು ಪಡೆಯುತ್ತಾನೆ. ಪತಿವ್ರತೆ! ಈ ರೀತಿ ಮಹಾನ್ ಕ್ಲೇಶಗಳನ್ನು ಎದುರಿಸಿ ವಿಚಲಿತರಾಗದೆ ಇದ್ದರೆ ಪುರುಷರು ಪ್ರಾಜಾಪತ್ಯ ಮುಂತಾದ ಸತ್ವ ಲೋಕಗಳನ್ನು ಹೊಂದುತ್ತಾರೆ. ಅದರೆ ಸ್ತ್ರೀಯರು ಕೇವಲ ಪತಿಸೇವೆ ಮಾಡುವುದರಿಂದ ಮಾತ್ರದಿಂದಲೇ ಪುರುಷರು ದುಃಖಿಗಳನ್ನು ಅನುಭವಿಸಿ ಪಡೆದ ಪುಣ್ಯದ ಅರ್ಧಭಾಗಕ್ಕೆ ಪಾತ್ರರಾಗುತ್ತಾರೆ. ಸ್ತ್ರೀಯರಿಗೆ ಪತಿ ಸೇವೆಯನ್ನು ಬಿಟ್ಟು ಯಜ್ಞ, ಶ್ರಾದ್ಧ ಅಥವಾ ಉಪವಾಸದ ವಿಧಾನಗಳು ಬೇರೆಯಿಲ್ಲ. ಅವರು ಪತಿಸೇವೆ ಒಂದರಿಂದಲೇ ಆ ಅಭೀಷ್ಟ ಲೋಕಗಳನ್ನು ಪಡೆಯುತ್ತಾರೆ. ಆದ್ದರಿಂದ ಪುಣ್ಯವಂತೆ ! ನೀನು ಯಾವಾಗಲೂ ಪತಿ ಸೇವೆಯಲ್ಲಿಯೇ ಮನಸ್ಸಿಡಬೇಕು ! ಏಕೆಂದರೆ ಪತ್ನಿಗೆ ಪತಿಯೇ ಪರಮಗತಿ"*

ಅನಸೂಯೆಯ ವಚನಗಳನ್ನು ಕೇಳಿ ಪತಿವ್ರತೆ ಶಾಂಡಿಲಿಯು ಬಹಳ ಆದರದಿಂದ ಅವಳನ್ನು ಪೂಜಿಸಿ ಹೇಳಿದಳು – "ಸ್ವಾಭಾವಿಕವಾಗಿ ಎಲ್ಲರ ಕಲ್ಯಾಣವನ್ನು ಬಯಸುವ ದೇವಿ ! ಸ್ವತಃ ತಾವು ಇಲ್ಲಿಗೆ ದಯಮಾಡಿಸಿ ಪತಿಯ ಸೇವೆಯಲ್ಲಿ ನನ್ನ ಶ್ರದ್ಧೆಯನ್ನು ಹೆಚ್ಚಿಸುತ್ತಿರುವಿರಿ. ಆದ್ದರಿಂದ ನಾನು ಧನ್ಯಳಾದೆನು. ತಾವು ನನ್ನ ಮೇಲೆ ಹೆಚ್ಚು ಅನುಗ್ರಹ ತೋರಿಸಿರುವಿರಿ. ಇದರಿಂದ ದೇವತೆಗಳೂ ಸಹ ಇಲ್ಲಿಗೆ ಬಂದು ನನ್ನ ಮೇಲೆ ಕೃಪಾ ದೃಷ್ಟಿಯನ್ನಿಟ್ಟಿದ್ದಾರೆ. ಸ್ತ್ರೀಯರಿಗೆ ಪತಿಯ ಸದೃಶ ಇನ್ನೊಂದು ಗತಿಯಿಲ್ಲವೆನ್ನುವುದು ನನಗೆ ಗೊತ್ತು. ಯಶಸ್ವಿನಿ ! ಪತಿಯ ಪ್ರಸಾದದಿಂದಲೇ ನಾರಿಯು ಇಹ ಪರದಲ್ಲಿ ಪರಮ

---

* ನಾಸ್ತಿ ಸ್ತ್ರೀಣಾಂ ಪೃಥಗ್ಯಜ್ಞೋ ನ ಶ್ರಾದ್ಧಂ ನಾಪ್ಯುಪೋಷಿತಮ್ ।
ಭರ್ತೃಶುಶ್ರೂಷಯೈವೈತಾನ್ ಲೋಕಾನಿಷ್ಟಾನ್ ವ್ರಜನ್ತಿ ಹಿ ॥
ತಸ್ಮಾತ್ ಸಾಧ್ವಿ ಮಹಾಭಾಗೇ ಪತಿಶುಶ್ರೂಷಣಂ ಪ್ರತಿ ।
ತ್ವಯಾ ಮತಿಃ ಸದಾ ಕಾರ್ಯಾ ಯತೋ ಭರ್ತಾ ಪರಾ ಗತಿಃ ॥
(ಮಾರ್ಕಂಡೇಯ ೧೬/೬೧-೬೨)

ಸುಖವನ್ನು ಪಡೆಯುತ್ತಾಳೆ. ಏಕೆಂದರೆ ಪತಿಯು ನಾರಿಗೆ ಪರದೇವತೆಯು. ಮಹಾಭಾಗ್ಯವಂತೆ ! ಈ ದಿನ ತಾವು ನನ್ನ ಮನೆಗೆ ದಯಮಾಡಿಸಿದ್ದೀರಿ. ನನ್ನಿಂದ ಅಥವ ನನ್ನ ಪತಿದೇವರಿಂದ ತಮಗೆ ಏನು ಕೆಲಸವಾಗಬೇಕೆಂಬುದನ್ನು ಕೃಪೆಯಿಟ್ಟು ಹೇಳಿರಿ.'

ಅನುಸೂಯೆಯು ಹೇಳಿದಳು – 'ದೇವೀ ! ನಿನ್ನ ಮಾತುಗಳಿಂದ ಹಗಲು-ರಾತ್ರಿಯ ವ್ಯವಸ್ಥೆ ಲೋಪವಾಗಿರುವುದರಿಂದ ಶುಭ ಕರ್ಮಗಳ ಅನುಷ್ಠಾನ ನಿಂತುಹೋಗಿದೆ. ಅದ್ದರಿಂದ ಇಂದ್ರಾದಿ ದೇವತೆಗಳು ದುಃಖಿತರಾಗಿ ನನ್ನ ಹತ್ತಿರ ಬಂದಿದ್ದಾರೆ. ಅವರು ಹಗಲು-ರಾತ್ರಿಯ ವ್ಯವಸ್ಥೆಯು ಮೊದಲಿನಂತೆಯೇ ಅಖಂಡವಾಗಿ ನಡೆಯಲೆಂದು ಪ್ರಾರ್ಥಿಸುತ್ತಿದ್ದಾರೆ. ನಾನು ಇದಕ್ಕಾಗಿ ನಿನ್ನ ಹತ್ತಿರ ಬಂದಿದ್ದೇನೆ. ನನ್ನ ಮಾತು ಕೇಳು. ದೇವೀ! ಸೂರ್ಯೋದಯವಾಗದೇ ಇರುವುದರಿಂದ ಸಂಪೂರ್ಣವಾಗಿ ಯಜ್ಞ ಮುಂತಾದ ಕರ್ಮಗಳು ನಾಶವಾಗಿ ದೇವತೆಗಳಿಗೆ ಹವಿಸ್ಸು ದೊರೆಯದೆ ಅವರ ಪುಷ್ಟಿಯಾಗುವುದಿಲ್ಲ. ಅದರಿಂದ ವೃಷ್ಟಿಗೆ ತೊಂದರೆಯಾಗಿ ಪ್ರಪಂಚದ ನಾಶವಾಗುತ್ತದೆ. ಆದ್ದರಿಂದ ಸಂಪೂರ್ಣ ಲೋಕಗಳಿಗೆ ದಯತೋರಿಸು, ಅವರಿಂದ ಮೊದಲಿನಂತೆ ಸೂರ್ಯೋದಯವಾಗಲಿ.'

ಶಾಂಡಿಲೀ ಹೇಳಿದಳು – ''ಮಹಾಭಾಗ್ಯವಂತೇ! ಮಾಂಡವ್ಯ ಋಷಿಗಳು ಅತ್ಯಂತ ಕ್ರೋಧಿತರಾಗಿ ನನ್ನ ದೈವರೂಪೀ ಪತಿಗೆ 'ನೀನು ಸೂರ್ಯೋದಯವಾದ ಕೂಡಲೇ ಸಾಯುವೆ' ಎಂದು ಶಾಪ ಕೊಟ್ಟಿದ್ದಾರೆ. ಅನಸೂಯೆ ಹೇಳಿದಳು – ''ನಿನಗೆ ಇಚ್ಛೆಯಿದ್ದರೆ ನಾನು ನಿನ್ನ ಪತಿಗೆ ಹಿಂದಿನಂತೆ ಶರೀರವನ್ನೂ ಸ್ವಾಸ್ಥ್ಯವನ್ನೂ ಕೊಡುತ್ತೇನೆ. ನನಗೆ ಪತಿವ್ರತಾ ಸ್ತ್ರೀಯರ ಮಹಾತ್ಮೆಯ ಬಗೆಗೆ ಅತ್ಯಂತ ಆದರವಿದೆ. ಆದ್ದರಿಂದ ನಿನ್ನ ಮನ ಒಲಿಸುತ್ತಿದ್ದೇನೆ.'

ಶಾಂಡಿಲಿಯು 'ತಥಾಸ್ತು' ಎಂದು ಒಪ್ಪಿಕೊಂಡ ಮೇಲೆ ಅನಸೂಯೆಯು ಅರ್ಘ್ಯವನ್ನು ಕೈಯಲ್ಲಿ ತೆಗೆದುಕೊಂಡು ಸೂರ್ಯನನ್ನು ಆವಾಹಿಸಿದಳು. ಅಷ್ಟು ಹೊತ್ತಿಗೆ ಹತ್ತು ದಿನಗಳ ಪೂರ್ಣ ಅಂಧಕಾರದಿಂದ ಜಗತ್ತು ಮುಚ್ಚಿದ್ದಿತು. ಅನಂತರ ಭಗವಾನ್ ಸೂರ್ಯನು ಉದಯಿಸಿದನು. ಸೂರ್ಯನು ಉದಯ ಹೊಂದಿದ ಕೂಡಲೆ ಶಾಂಡಿಲಿಯ ಪತಿ ಕೌಶಿಕನು ನೆಲಪ ಮೇಲೆ ಬಿದ್ದು

ಪ್ರಾಣ ಹೀನನಾದನು. ಆದರೆ ಅವನ ಪತ್ನಿಯು ಅವನು ನೆಲಕ್ಕೆ ಬೀಳದಂತೆ ಹಿಡಿದುಕೊಂಡಳು.

ಅನಸೂಯೆಯು ಹೇಳಿದಳು – "ನೀನು ವಿಷಾದಿಸಬೇಕಾಗಿಲ್ಲ ಪತಿ ಸೇವೆಯಿಂದ ನನಗೆ ಮೊರೆತ ತಪೋಬಲವನ್ನು ಈಗಲೇ ನೀನು ನೋಡು. ನಾನು ರೂಪ, ಶೀಲ, ಬುದ್ಧಿ ಹಾಗೂ ಮಧುರ ಪಚನ ಮುಂತಾದ ಸದ್ಗುಣ ಯುಕ್ತ ನನ್ನ ಪತಿಗೆ ಸಮಾನವಾಗಿ ಪುರುಷರನ್ನು ಎಂದೂ ನೋಡಿಲ್ಲವಾದರೆ, ಆ ಸತ್ಯದ ಪ್ರಭಾವದಿಂದ ಈ ಬ್ರಾಹ್ಮಣನು ರೋಗದಿಂದ ಮುಕ್ತನಾಗಿ ಮತ್ತೆ ತಾರುಣ್ಯಾವಸ್ಥೆಯನ್ನು ಪಡೆಯಲಿ ಮತ್ತು ತನ್ನ ಪತ್ನಿಯ ಜೊತೆ ನೂರು ವರ್ಷಗಳವರೆಗೆ ಜೀವನ ನಡೆಸಲಿ."

ಅನಸೂಯೆಯು ಇಷ್ಟು ಹೇಳುವಷ್ಟರಲ್ಲಿ ಆ ಬ್ರಾಹ್ಮಣನು ತನ್ನ ಕಾಂತಿಯಿಂದ ಆ ಭವನವನ್ನು ಪ್ರಕಾಶಗೊಳಿಸುತ್ತಾ ಜೀವಂತವಾಗಿ ರೋಗ ಮುಕ್ತನಾಗಿ ತರುಣನಾಗಿ ಎದ್ದು ನಿಂತನು. ಅವನು ವೃದ್ಧಾಪ್ಯ ರಹಿತನಾಗಿ ದೇವತೆಯಂತೆ ಕಾಣುತ್ತಿದ್ದನು. ಅನಂತರ ದೇವದುಂದುಭಿ ಮುಂತಾದ ದೇವ ವಾದ್ಯಗಳ ಧ್ವನಿಯ ಜೊತೆ ಪುಷ್ಪವೃಷ್ಟಿಯೂ ಆಯಿತು. ದೇವತೆಗಳು ಸಂತುಷ್ಟರಾದರು. ಅವರು ಅನಸೂಯಾದೇವಿಗೆ ಹೇಳಿದರು – 'ತಾವು ದೇವತೆಗಳ ಬಹು ದೊಡ್ಡ ಕಾರ್ಯವನ್ನು ಪೂರ್ಣಗೊಳಿಸಿದಿರಿ. ಇದರಿಂದ ದೇವತೆಗಳೆಲ್ಲರೂ ಸಂತುಷ್ಟರಾಗಿ ತಮಗೆ ವರವನ್ನು ಕೊಡಬಯಸಿದ್ದಾರೆ. ತಾವು ಏನು ಬೇಕಾದರೂ ವರವನ್ನು ಕೇಳಿ. ಅನಸೂಯೆಯು ಹೇಳಿದಳು – 'ಬ್ರಹ್ಮಾದಿ ದೇವತೆಗಳು ಪ್ರಸನ್ನರಾಗಿ ನನಗೆ ವರಕೊಡಲು ಇಚ್ಛಿಸಿದರೆ ಬ್ರಹ್ಮ, ವಿಷ್ಣು ಮಹೇಶ್ವರರು ನನ್ನ ಪುತ್ರರ ರೂಪದಲ್ಲಿ ಪ್ರಕಟವಾಗಲಿ, ನನ್ನ ಪತಿದೇವರ ಜೊತೆ ಸಮಸ್ತ ಕ್ಲೇಶಗಳಿಂದ ಮುಕ್ತಿ ಕೊಡುವಂತಹ ಯೋಗವು ನನಗೆ ಪ್ರಾಪ್ತವಾಗಲಿ'. ಇದೇ ನನ್ನ ಇಚ್ಛೆಯಾಗಿದೆ.

ಇದನ್ನು ಕೇಳಿ ತ್ರಿಮೂರ್ತಿಗಳು ಮತ್ತಿತರ ದೇವತೆಗಳು 'ಏವಮಸ್ತು' (ಹಾಗೆಯೇ ಆಗಲಿ) ಎಂದು ಹೇಳಿ, ತಪಸ್ವಿನೀ ಅನಸೂಯೆಯನ್ನು ಸಮ್ಮಾನಿಸಿ ಎಲ್ಲರೂ ತಮ್ಮ ತಮ್ಮ ಧಾಮಕ್ಕೆ ಹೊರಟು ಹೋದರು.

ಆನಂತರ ಬಹಳ ಸಮಯ ಕಳೆದ ಮೇಲೆ ಅನಸೂಯೆಗೆ ಮೂವರು ಮಕ್ಕಳಾದರು. ಬ್ರಹ್ಮನ ಅಂಶದಿಂದ ಚಂದ್ರ, ವಿಷ್ಣುವಿನ ಅಂಶದಿಂದ ದತ್ತಾತ್ರೇಯ ಮತ್ತು ಶಂಕರನ ಅಂಶದಿಂದ ದುರ್ವಾಸ ಇವರುಗಳು ಅವತರಿಸಿದರು.

ಪತಿವ್ರತೆ ಶಾಂಡಿಲಿಯ ಈ ಕಥೆಯು ಮಾರ್ಕಂಡೇಯ ಪುರಾಣದಲ್ಲಿ ಬರುತ್ತದೆ. ಇಲ್ಲಿ ಇದನ್ನು ಸಂಕ್ಷೇಪವಾಗಿ ಕೊಡಲಾಗಿದೆ. ವಿಸ್ತಾರವಾಗಿ ತಿಳಿದುಕೊಳ್ಳಲಿಚ್ಛಿಸುವವರು ಉಕ್ತ ಗ್ರಂಥವನ್ನು ನೋಡಬೇಕು.

❑❑

19. ಭಗವಾನ್ ಶ್ರೀಕೃಷ್ಣನ ಉಪದೇಶ

ಸ್ತ್ರೀಯರು ಪಾತಿವ್ರತ್ಯ ಪಾಲನೆಗೆ ವಿಶೇಷ ಗಮನ ಕೊಡಬೇಕು. ಪತಿವ್ರತಾ ಸ್ತ್ರೀಯರ ಧರ್ಮವನ್ನು ಕುರಿತು ಶ್ರೀಕೃಷ್ಣನು ನಂದನಿಗೆ ಹೇಳಿದ. ಮಹತ್ವಪೂರ್ಣ ಮಾತುಗಳನ್ನು ಬ್ರಹ್ಮವೈವರ್ತ ಪುರಾಣದಲ್ಲಿ ಬರುತ್ತವೆ ಶ್ರೀಕೃಷ್ಣ ಹೇಳುತ್ತಾನೆ –

ಪತಿವ್ರತಾನಾಂ ಯೋ ಧರ್ಮಸ್ತಂ ನಿಬೋಧ ವ್ರಜೇಶ್ವರ।
ನಿತ್ಯಂತು ಭರ್ತಾಯೊತ್ಸುಕ್ಯಾತ್ ತತ್ಪಾದೋದಕಮೀಪ್ಸಿತಮ್ ॥
ಭಕ್ತಿಭಾವೇನ ಸತತಂ ಭೋಕ್ತವ್ಯಂ ತದನುಜ್ಞಯಾ।
(ಶ್ರೀಕೃಷ್ಣಜನ್ಮಖಂಡ ೮೩/೧೧೧-೧೧೨)

'ಹೇ ವ್ರಜೇಶ್ವರ ! ಪತಿವ್ರತಾ ಸ್ತ್ರೀಯರ ಧರ್ಮವನ್ನು ಸನ್ನಿಂದ ಕೇಳು. ಪ್ರತಿದಿನವೂ ಉತ್ಸಾಹದಿಂದ ಪತಿಸೇವೆಯನ್ನು ಮಾಡಬೇಕು. ಅವನ ಆಜ್ಞೆಯಂತೆ ಭಕ್ತಿಪೂರ್ವಕವಾಗಿ ಅವನ ಚರಣಾಮೃತ ಪಾನಮಾಡಬೇಕು. ಇದು ಪತ್ನಿಯರಿಗೆ ಸದಾ ಅಭೀಷ್ಟವಾಗಿದೆ.

ವ್ರತಂ ತಪಸ್ಯಾಂ ದೇವಾರ್ಚಾಂ ಪರಿತ್ಯಜ್ಯ ಪ್ರಯತ್ನತಃ ॥
ಕುರ್ಯಾಚ್ಚರಣಸೇವಾಂ ಚ ಸ್ತವನಂ ಪರಿತೋಷಣಮ್।
ತದಾಜ್ಞಾರಹಿತಂ ಕರ್ಮ ನ ಕುರ್ಯಾದ್ ವೈರತಃ ಸತೀ ॥
(ಶ್ರೀಕೃಷ್ಣ ಜನ್ಮಖಂಡ ೮೩/೧೧೨-೧೧೩.)

'ವ್ರತ, ತಪಸ್ಸು ದೇವರ ಪೂಜೆ ಮುಂತಾದ ಕಾರ್ಯಗಳನ್ನು ಬಿಟ್ಟು

ಮೊದಲು ಪತಿಯ ಚರಣ ಸೇವೆಯನ್ನು ಶ್ರದ್ಧೆಯಿಂದ ಮಾಡಬೇಕು. ಅವನನ್ನು ಸ್ತುತಿಸಿ ಸಂಪುಷ್ಟಗೊಳಿಸಬೇಕು. ಮನೋಮಾಲಿನ್ಯದಿಂದ ಪತಿಯ ಆಜ್ಞೆಯ ವಿರುದ್ಧ ಯಾವ ಕಾರ್ಯವನ್ನೂ ಸಾಧ್ವಿಯು ಮಾಡಬಾರದು'.

ನಾರಾಯಣಾತ್ ಪರಂ ಕಾಂತಂ ಧ್ಯಾಯತೇ ಸತತಂ ಸತೀ।
ಪರಪುಂಸಾಂ ಮುಖಂ ಚೈವ ಸುವೇಷಪುರುಷಂ ಪರಮ್ ॥
ಯಾತ್ರಾಮಹೋತ್ಸವಂ ನೃತ್ಯಂ ನರ್ತನಂ ಗಾಯನಂ ವ್ರಜ।
ಪರಕ್ರೀಡಾಂ ಚ ಸತತಂ ನ ಹಿ ಪಶ್ಯತಿ ಸುವ್ರತಾ ॥

(ಶ್ರೀಕೃಷ್ಣ ಜನ್ಮಖಂಡ ೨೨/೧೧೪-೧೧೫)

'ಸಾಧ್ವೀ ಸ್ತ್ರೀಯು ಪತಿಯನ್ನು ಸಾಕ್ಷಾತ್ ನಾರಾಯಣನಿಗಿಂತಲೂ ಹೆಚ್ಚೆಂದು ತಿಳಿದು ಯಾವಾಗಲೂ ಅವನನ್ನೇ ಧ್ಯಾನಿಸುತ್ತಾಳೆ. ಪರಪುರುಷರ ಮುಖವನ್ನು ನೋಡುವುದಿಲ್ಲ. ಆಭರಣ-ವಸ್ತ್ರಗಳಿಂದ ಸುಸಜ್ಜಿತರಾದ ಪರಪುರುಷರ ಕಡೆಗೆ ಕಣ್ಣೆತ್ತಿಯೂ ಸಹ ನೋಡುವುದಿಲ್ಲ. ಪತಿವ್ರತಾ ಸ್ತ್ರೀಯು ಯಾತ್ರೆ ಮತ್ತು ಅನ್ಯ ದೊಡ್ಡ ದೊಡ್ಡ ಮಹೋತ್ಸವಗಳನ್ನಾಗಲೀ ಹಾಗೂ ನೃತ್ಯ, ಗಾಯನ ಮುಂತಾದ ಕ್ರೀಡಾ - ವಿನೋದಗಳನ್ನಾಗಲೀ, ಬೇರೆಯವರ ಹಾಸ್ಯ-ವಿಲಾಸಗಳನ್ನಾಗಲಿ ಎಂದೂ ಕಣ್ಣೆತ್ತಿಯೂ ಸಹ ನೋಡುವುದಿಲ್ಲ'.

ಯದ್ ಭಕ್ಷ್ಯಂ ಸ್ವಾಮಿನೋ ನಿತ್ಯಂ ತದೇವ ಮಪಿ ಯೋಷಿತಾಮ್ ।
ನ ಹಿ ತ್ಯಜೇತ್ ತು ತತ್ಸಂಗಂ ಕ್ಷಣಮೇವ ಚ ಸುವ್ರತಾ ॥

(ಶ್ರೀಕೃಷ್ಣ ಜನ್ಮಖಂಡ ೨೩/೧೧೬)

'ಪತಿಯು ಸೇವಿಸುವ ಆಹಾರವೇ ಸ್ತ್ರೀಗೆ ಶ್ರೇಷ್ಠವಾದದ್ದು ಪತಿವ್ರತೆಯಾದವಳು ಒಂದು ಕ್ಷಣ ಕೂಡ ತನ್ನ ಪತಿಯನ್ನು ಬಿಟ್ಟಿರಬಾರದು.

ಉತ್ತರೇ ನೋತ್ತರಂ ದದ್ಯಾತ್ ಸ್ವಾಮಿನಶ್ಚ ಪತಿವ್ರತಾ ।
ನ ಕೋಪಂ ಕುರುತೇ ಶುದ್ಧಾ ತಾಡಿತಾ ಚಾಪಿ ಕೋಪಿತಾ ॥

(ಶ್ರೀಕೃಷ್ಣ ಜನ್ಮಖಂಡ ೨೩/೧೧೭)

'ತನ್ನ ಪತಿಗೆ ಎದುರುತ್ತರ ಕೊಡಬಾರದು. ತನ್ನ ಪತಿಯು ದೈಹಿಕವಾಗಿ ದಂಡಿಸಿದರೂ, ಕ್ರೋಧಗೊಂಡರೂ ಪತ್ನೀಯಾದವಳು ಅವನ ಮೇಲೆ ಕೋಪಿಸಿಕೊಳ್ಳಬಾರದು'.

ಕ್ಷುಧಿತಂ ಭೋಜಯೇತ್ ಕಾಂತಂ ದದ್ಯಾತ್ ಪಾನಂ ಚ ಭೋಜನಮ್ ।
ನ ಬೋಧಯೇತ್ ತಂ ನಿದ್ರಾಲುಂ ಪ್ರೇರಯೇನ್ನೈವ ಕರ್ಮಸು ॥

(ಶ್ರೀಕೃಷ್ಣ ಜನ್ಮಖಂಡ ೮೨./೧೧೮)

'ತನ್ನ ಪ್ರಿಯ ಪತಿಯು ಹಸಿದಾಗ ಭೋಜನ ಮಾಡಿಸಬೇಕು. ಅವನಿಗೆ ಆಹಾರ-ಪಾನೀಯಗಳನ್ನು ಆದರಪೂರ್ವಕವಾಗಿ ಅರ್ಪಿಸಬೇಕು. ಅವನು ನಿದ್ದೆ ಮಾಡುವಾಗ ಎಚ್ಚರಗೊಳಿಸಬಾರದು ಹಾಗೂ ಯಾವ ಕೆಲಸ ಮಾಡುವುದಕ್ಕೂ ಪ್ರೇರೇಪಿಸಬಾರದು.

ಪುತ್ರಾಣಾಂ ಚ ಶತಗುಣಂ ಸ್ನೇಹಂ ಕುರ್ಯಾತ್ ಪತಿಂ ಸತೀ ।
ಪತಿರ್ಬಂಧುರ್ಗತಿರ್ಭರ್ತಾ ದೈವತಂ ಕುಲಯೋಷಿತಃ ॥

(ಶ್ರೀಕೃಷ್ಣ ಜನ್ಮಖಂಡ ೮೩/೧೧೯)

'ಪುತ್ರರಿಗಿಂತಲೂ ನೂರರಷ್ಟು ಹೆಚ್ಚಾಗಿ ಪತಿಯನ್ನು ಸ್ತ್ರೀಯರು ಪ್ರೀತಿಸಬೇಕು. ಕುಲವತಿ ಸ್ತ್ರೀಯರಿಗೆ ಪತಿಯೇ ಮಿತ್ರನೂ, ಗತಿಯೂ, ದೇವತೆಯೂ ಆಗಿರುತ್ತಾನೆ'.

ಶುಭಂ ದೃಷ್ಟ್ವಾ ಸುಧಾತುಲ್ಯಂ ಕಾಂತಂ ಪಶ್ಯತಿ ಸುಂದರೀ ।
ಸಸ್ಮಿತಂ ವದನಂ ಕೃತ್ವಾ ಭಕ್ತಿಭಾವೇನ ಯತ್ನತಃ ॥

(ಶ್ರೀಕೃಷ್ಣ ಜನ್ಮಖಂಡ ೮೩/೧೨೦)

'ಎಚ್ಚರವಾಗಿ ಸುಂದರಳಾದ ಸ್ತ್ರೀಯು ಭಕ್ತಿ ಭಾವದಿಂದ ಮುಗುಳುನಗೆ ನಗುತ್ತಾ ಮಂಗಳ ದ್ರವ್ಯಗಳನ್ನು ಅಮೃತ ಸದೃಶವಾಗಿ ಕಂಡು ಪತಿದೇವನ ದರ್ಶನ ಮಾಡುತ್ತಾಳೆ.'

ಭಗವಾನ್ ಶ್ರೀಕೃಷ್ಣನು ಶ್ರೀನಂದರಾಜನಿಗೆ ಸ್ತ್ರೀಯರ ಆದರ್ಶ ಸದಾಚಾರಗಳನ್ನು ಕುರಿತು ಈ ಮಾತುಗಳನ್ನು ಹೇಳುತ್ತಾನೆ –

ಸಾ ಶುದ್ಧಾ ಪ್ರಾತರುತ್ಥಾಯ ನಮಸ್ಕೃತ ಪತಿಂ ಸುರಮ್ ।
ಪ್ರಾಂಗಣೇ ಮಂಗಲಂ ದದ್ಯಾದ್ ಗೋಮಯೇನ ಜಲೇನ ಚ ॥
ಗೃಹಕೃತ್ಯಂ ಚ ಕೃತ್ವಾ ಚ ಸ್ನಾತ್ವಾ ಕೃತ್ವಾ ಗೃಹಂ ಸತೀ ।
ಸುರಂ ವಿಪ್ರಂ ಪತಿಂ ನತ್ವಾ ಪೂಜಯೇದ್ ಗೃಹದೇವತಾಮ್ ॥

ಗೃಹಕೃತ್ಯಂ ಸುನಿರ್ವರ್ತ್ಯ ಭೋಜಯಿತ್ವಾ ಪತಿಂ ಸತೀ ।
ಅತಿಥಿಂ ಪೂಜಯಿತ್ವಾ ಚ ಸ್ವಯಂ ಭುಂಕ್ತೇ ಸುಖಿಂ ಸತೀ ॥

(ಬ್ರಹ್ಮವೈವರ್ತ. ಶ್ರೀಕೃಷ್ಣ ೮೪/೧೫೫-೧೭)

'ಸತೀ ಸ್ತ್ರೀಯು ಪ್ರಾತಃಕಾಲ ಎದ್ದು ಕೈಕಾಲು ಮುಖ ತೊಳೆದು ಪತಿ ಹಾಗೂ ಇಷ್ಟ ದೇವರಿಗೆ ನಮಸ್ಕರಿಸಬೇಕು. ಮನೆಯ ಅಂಗಳವನ್ನು ಸಗಣಿಯಿಂದ ಸಾರಿಸಿ ರಂಗೋಲಿಯಿಂದಲೂ, ಮಂಗಳದ್ರವ್ಯಗಳಿಂದಲೂ ಅಲಂಕರಿಸಬೇಕು. ಅನಂತರ ಗೃಹಕಾರ್ಯಗಳನ್ನು ಮುಗಿಸಿ ಸ್ನಾನವಾದ ಮೇಲೆ ದೇವರಿಗೂ, ಬ್ರಾಹ್ಮಣರಿಗೂ, ಪತಿಗೂ ನಮಸ್ಕರಿಸಿ ಮನೆಯ ದೇವರನ್ನು ಪೂಜಿಸಬೇಕು. ಅನಂತರ ಮನೆಯ ಉಳಿದ ಕೆಲಸಗಳನ್ನು ಲೋಪವಿಲ್ಲದಂತೆ ಮಾಡಿ ಪತಿಗೆ ಊಟಬಡಿಸಿ ಅತಿಥಿಗಳ ಸೇವೆ ಮಾಡಬೇಕು. ಅನಂತರ ತಾನು ಸ್ವತಃ ಸಂತೋಷದಿಂದ ಊಟ ಮಾಡಬೇಕು'.

❑❑

20. ಯಮರಾಜನ ಉಪದೇಶ

ವಾರಾಹ ಪುರಾಣದಲ್ಲಿ ಯಮರಾಜನು ನಾರದರಿಗೆ ಪತಿವ್ರತೆಯ ಪ್ರಭಾವವನ್ನು ತಿಳಿಸುತ್ತಾ ಹೇಳುತ್ತಾನೆ –

ಏಕದೃಷ್ಟಿರೇಕಮನಾ ಭರ್ತುರ್ವಚನಕಾರಿಣೀ ।
ತಸ್ಯಾ ಬಿಭೀಮಹೇ ಸರ್ವೇ ಯೇ ತಥಾನ್ಯೇ ತಪೋಧನ ॥

(ವಾರಾಪು. ೨೦೯/೬)

'ಹೇ ತಪೋಧನ ನಾರದರೇ ! ಏಕ ಮಾತ್ರ ತನ್ನ ಪತಿಯಲ್ಲಿಯೇ ದೃಷ್ಟಿ ಮತ್ತು ಮನಸ್ಸಿಡುವವಳೂ ಹಾಗೂ ಅವನ ಆಜ್ಞೆಯನ್ನು ಪಾಲಿಸುವವಳೂ ಆದ ಪತಿವ್ರತೆಯನ್ನು ಕಂಡು ನಾನು (ಯಮರಾಜ) ಮತ್ತು ಇತರ ದೇವತೆಗಳು ಹೆದರುತ್ತೇವೆ.

ದೇವಾನಾಮಪಿ ಸಾ ಸಾಧ್ವೀ ಪೂಜ್ಯಾ ಪರಮಶೋಭನಾ ।
ಭರ್ತ್ರಾ ಚಾಭಿಹಿತಾ ಯಾಪಿ ನ ಪ್ರತ್ಯಾಖ್ಯಾಯಿನೀ ಭವೇತ್ ॥

(ವಾರಾಪು. ೨೦೯/೭)

'ಪತಿಯಿಂದ ಅಪಮಾನಿತಳಾದರೂ ಅವನಿಗೆ ಪ್ರತ್ಯುತ್ತರವಾಗಿ ಕೊಡದ ಪರಮ ಶೋಭಿತಳಾದ ಪತಿವ್ರತಾ ಸಾಧ್ವೀ ಸ್ತ್ರೀಯು ದೇವತೆಗಳಿಂದಲೂ ಪೂಜಾರ್ಹಳಾಗಿದ್ದಾಳೆ.'

ಏವಂ ಯಾ ತು ಭವೇನ್ನಿತ್ಯಂ ಭರ್ತುಃ ಪ್ರಿಯಹಿತೇ ರತಾ ॥
ಅನುವೇಷ್ಟನಭಾವೇನ ಭರ್ತಾರಮನುಗಚ್ಛತಿ ।
ಸಾ ತು ಮೃತ್ಯುಮುಖಿದ್ವಾರಂ ನಗಚ್ಛೇದ್ ಬ್ರಹ್ಮಸಂಭವ ॥

(ವಾರಾಪ. ೨೦೯/೯-೧೦)

'ಈ ರೀತಿಯಾಗಿ ಯಾರು ಪ್ರತಿನಿತ್ಯ ಪತಿಗೆ ಪ್ರಿಯವಾದ ಮತ್ತು ಹಿತವಾದ ಕಾರ್ಯದಲ್ಲಿ ತೊಡಗಿರುವಳೋ, ಅನುಚರಿಯಾಗಿ ಅವನ ಜೊತೆ ಜೊತೆಯಲ್ಲಿಯೇ ನಡೆಯುವಳೋ, ಹೇ ಬ್ರಹ್ಮಪುತ್ರ ! ಅವಳಿಗೆ ಯಮರಾಜನ ಪುರಿಯ (ನರಕದ) ದರ್ಶನವಾಗುವುದಿಲ್ಲ'.

ಏಷ ಮಾತಾ ಪಿತಾ ಬಂಧುರೇಷ ಮೇ ದೈವತಂ ಪರಮ್ ।
ಏವಂ ಶುಶ್ರೂಷತೇ ಯಾ ತು ಸಾ ಮಾಂ ವಿಜಯತೇ ಸದಾ ॥

(ವಾರಾಹ. ೨೦೯/೧೧)

ಯಾವ ಪತಿವ್ರತಾ ಸ್ತ್ರೀಯು 'ಪತಿದೇವನೇ ನನ್ನ ತಂದೆ, ತಾಯಿ, ಬಂಧು, ಪರಮೇಶ್ವರ ಎಂದು ತಿಳಿದು ಅವನ ಸೇವೆ ಮಾಡುವಳೋ, ಅವಳು ಯಾವಾಗಲೂ ನನ್ನನ್ನು (ಯಮರಾಜ) ಗೆಲ್ಲುತ್ತಾಳೆ'.

ಪತಿವ್ರತಾ ತು ಯಾ ಸಾಧ್ವೀ ತಸ್ಯಾಂ ಚಾಹಂ ಕೃತಾಂಜಲಿಃ ।
ಭರ್ತಾರಮನುಧ್ಯಾಯಂತೀ ಭರ್ತಾರಮನುಗಚ್ಛತೀ ॥
ಭರ್ತಾರಮನುಶೋಚಂತೀ ಮೃತ್ಯುದ್ವಾರಂ ನ ಪಶ್ಯತಿ ॥

(ವಾರಾಹ. ೨೦೯/೧೨-೧೩.)

'ಯಾವ ಪತಿವ್ರತಾ ಸಾಧ್ವಿ ಸ್ತ್ರೀಯು ಯಾವಾಗಲೂ ಪತಿಯ ಧ್ಯಾನ ಮಾಡುವಳೋ, ಪತಿಯ ಹಿಂದೆಯೇ ನಡೆಯುವಳೋ, ಅವನ ಹಿತವನ್ನೇ ಚಿಂತಿಸುವಳೋ, ಅಂತಹ ಸಾಧ್ವಿಯು ಯಮರಾಜನ ದ್ವಾರವನ್ನು ನೋಡುವುದಿಲ್ಲ. ನಾನು ಅವಳ ಮುಂದೆ ಕೈ ಜೋಡಿಸಿ ನಿಂತಿರುತ್ತೇನೆ.

ಸ್ನಾಂತೀ ಚ ತಿಷ್ಠತೀ ವಾಪಿ ಕುರ್ವಂತೀ ವಾ ಪ್ರಸಾಧನಮ್ ।
ನಾನ್ಯಂ ಯಾ ಮನಸಾ ಪಶ್ಯೇನ್ಮೃತ್ಯುದ್ವಾರಂ ನ ಪಶ್ಯತಿ ॥
(ವಾರಾಹ. ೨೦೯/೧೪-೧೫)

'ಸ್ನಾನ ಮಾಡುವಾಗ, ನಿಂತಿರುವಾಗ ಅಥವಾ ಸಿಂಗರಿಸಿಕೊಳ್ಳುವಾಗ ಮನಸ್ಸಿನಲ್ಲೂ ಸಹ ಪತಿಯನ್ನು ಹೊರತು ಅನ್ಯರನ್ನು ನೆನೆಯುವುದಿಲ್ಲವೋ ಅವಳು ಯಮರಾಜನ ದ್ವಾರವನ್ನು ನೋಡುವುದಿಲ್ಲ'.

ಚಕ್ಷುರ್ದೇಹಶ್ಚ ಭಾವಶ್ಚ ಯಾಸ್ಯಾ ನಿತ್ಯಂ ಸುಸಂಯತಮ್ ।
ಶೌಚಾಚಾರಸಮಾಯುಕ್ತಾ ಸಾಪಿ ಮೃತ್ಯುಂ ನ ಪಶ್ಯತಿ ॥
(ವಾರಾಹ. ೨೦೯/೧೫)

'ಯಾರ ನೇತ್ರ, ಶರೀರ ಮತ್ತು ಭಾವಗಳೂ ಯಾವಾಗಲೂ ಮುಚ್ಚಿರುತ್ತವೋ, ಯಾರು ಶೌಚಾಚಾರದಲ್ಲಿ ಸಂಪನ್ನಳಾಗಿರುವಳೋ ಅವಳು ಮೃತ್ಯುವನ್ನು ನೋಡುವುದಿಲ್ಲ'.

ಭರ್ತುರ್ಮುಖಂ ಪ್ರಪಶ್ಯೇದ್ ಯಾ ಭರ್ತುಶ್ಚಿತ್ತಾನುಸಾರಿಣೀ ।
ವರ್ತತೇ ಚ ಹಿತೇ ಭರ್ತುರ್ಮೃತ್ಯುದ್ವಾರಂ ನ ಪಶ್ಯತಿ ॥
(ವಾರಾಹ. ೨೦೯/೧೬ಗ್)

'ಯಾರು ಪತಿಯನ್ನೇ ನೋಡುತ್ತಿರುವಳೋ, ಅವನ ಮನಸ್ಸಿನಂತೆ ನಡೆಯುತ್ತಾಳೋ, ಪತಿಯ ಹಿತೈಷಿಯಾಗಿರುತ್ತಾಳೋ ಅವಳು ಮೃತ್ಯುವಿನ ದ್ವಾರವನ್ನು ನೋಡುವುದಿಲ್ಲ'.

❑❑

21. ಪತಿವ್ರತಾ ಸತಿಯ ಮಹಿಮೆ

ಪತಿವ್ರತಾ ನಾರಿಯು ಪಾತಿವ್ರತ್ಯದ ಪ್ರಭಾವದಿಂದ ಅವಳಿಗೂ, ಅವಳ ಪತಿಗೂ ಮೃತ್ಯುವಿನ ಭಯವಿರುವುದಿಲ್ಲ. ಅವಳ ತೇಜಸ್ಸಿಗೆ ಸಮಸ್ತ ದೇವತೆಗಳೂ ಹೆದರುತ್ತಾರೆ. ಪತಿವ್ರತೆಯ ಶಕ್ತಿಯು ಅತ್ಯಂತ ವಿಲಕ್ಷಣವಾದುದು. ಭಗವಾನ್ ಶ್ರೀಕೃಷ್ಣನು ನಂದರಾಜನಿಗೆ ಹೇಳುತ್ತಾನೆ –

ನಾಸ್ತಿ ತೇಷಾಂ ಕರ್ಮಭೋಗಃ ಸತೀನಾಂ ವ್ರತತೇಜಸಾಮ್ ।
ತಯಾ ಸಾರ್ಧಂ ಚ ನಿಷ್ಕರ್ಮೀ ಮೋದತೇ ಹರಿಮಂದಿರೇ ॥

(ಬ್ರಹ್ಮವೈವರ್ತ. ಶ್ರೀಕೃಷ್ಣ ೮೬./೧೨೨)

'ಪಾತಿವ್ರತ್ಯದ ತೇಜಸ್ಸಿನಿಂದ ವಿಭೂಷಿತರಾದ ಆ ಸ್ತ್ರೀಯರಿಗೆ ಕರ್ಮ ಫಲಗಳನ್ನು ಭೋಗಿಸಲು ಏನೂ ಬಾಕಿ ಉಳಿದಿರುವುದಿಲ್ಲ. ಬದಲಾಗಿ ಅವರ ಪತಿಗಳೂ ಸಹ ಕರ್ಮ ಸಂಸ್ಕಾರಗಳಿಂದ ರಹಿತವಾಗಿ ತಮ್ಮ ಪತ್ನಿಯ ಜೊತೆಯಲ್ಲಿಯೆ ಪರಮಾತ್ಮನ ಪರಂಧಾಮದಲ್ಲಿ ಸುಖಿಪೂರ್ವಕ ವಾಸಿಸುತ್ತಾರೆ'.

ಪೃಥಿವ್ಯಾಂ ಯಾನಿ ತೀರ್ಥಾನಿ ಸತೀ ಪಾದೇಷು ತಾನ್ಯಪಿ ।
ತೇಜಶ್ಚ ಸರ್ವದೇವಾನಾಂ ಮುನೀನಾಂ ಚ ಸತೀಷು ಚ ॥

(ಬ್ರಹ್ಮವೈವರ್ತ. ಶ್ರೀಕೃಷ್ಣ ೮೬./೧೨೩.)

'ಭೂಮಿಯ ಮೇಲೆ ಎಷ್ಟು ತೀರ್ಥಗಳಿವೆಯೋ ಅವೆಲ್ಲವೂ ಸಾಧ್ವೀ ಸ್ತ್ರೀಯರ ಚರಣಗಳಲ್ಲಿ ವಿರಾಜಮಾನವಾಗಿವೆ. ಸಮಸ್ತ ದೇವತೆಗಳ ಮತ್ತು ಮುನಿಗಳ ತೇಜಸ್ಸೂ ಸಹ ಸತೀ ಸ್ತ್ರೀಯರಲ್ಲಿರುತ್ತದೆ.

ತಪಸ್ವಿನಾಂ ತಪಃ ಸರ್ವಂ ವ್ರತಿನಾಂ ಯತ್ ಫಲಂ ವ್ರಜ ।
ದಾನೇ ಫಲಂ ಯದ್ ದಾತೃಣಾಂ ತತ್ ಸರ್ವಂ ತಾಸು ಸಂತತಮ್ ॥

(ಬ್ರಹ್ಮವೈವರ್ತ. ಶ್ರೀಕೃಷ್ಣ ೮೩./೧೨೪)

'ಹೇ ವ್ರಜೇಶ್ವರ ! ತಪಸ್ವಿಗಳ ಸಂಪೂರ್ಣ ತಪಸ್ಸು, ವ್ರತ ಮಾಡುವವರ ಸಮಸ್ತ ಫಲ ಹಾಗೂ ದಾನ ಮಾಡುವವರ ದಾನದ ಫಲ ಇವೆಲ್ಲವೂ ಆ ಪತಿವ್ರತೆಯರಿಗೆ ಸದಾ ಸಿಗುತ್ತವೆ.

ಸ್ವಯಂ ನಾರಾಯಣಃ ಶಂಭುರ್ವಿಧಾತಾ ಜಗತಾಮಪಿ ।
ಸುರಾಃ ಸರ್ವೇ ಚ ಮುನಯೋ ಭೀತಾಸ್ತಾಭ್ಯಶ್ಚ ಸಂತತಮ್ ॥

(ಬ್ರಹ್ಮವೈವರ್ತ. ಶ್ರೀಕೃಷ್ಣ ೮೩./೧೨೫)

'ಸ್ವಯಂ ನಾರಾಯಣ, ಸೃಷ್ಟಿಕರ್ತ ಬ್ರಹ್ಮ ಶಿವ ಹಾಗೂ ಸಮಸ್ತ ದೇವತೆಗಳು ಮತ್ತು ಮುನಿ ಜನರು (ಪತಿವ್ರತೆಯರಿಗೆ ಕೆಡಕನ್ನುಂಟುಮಾಡಲು) ಯಾವಾಗಲೂ ಸಾಧ್ವಿಯರಿಗೆ ಹೆದರುತ್ತಾರೆ'.

ಸತೀನಾಂ ಪಾದರಜಸಾ ಸದ್ಯಃ ಪೂತಾ ವಸುಂಧರಾ ।
ಪತಿವ್ರತಾಂ ನಮಸ್ಕೃತ್ಯ ಮುಚ್ಯತೇ ಪಾತಕಾನ್ನರಃ ॥

(ಬ್ರಹ್ಮವೈವರ್ತ. ಶ್ರೀಕೃಷ್ಣ ೮೩/೧೨೩)

'ಸತಿಯರ ಚರಣ ಧೂಳಿನಿಂದ ಪೃಥ್ವಿಯು ಆಗಲೇ ಪವಿತ್ರವಾಗುತ್ತದೆ. ಪಾಪೀ ಮನುಷ್ಯ ಪತಿವ್ರತೆಯರಿಗೆ ಪ್ರಣಾಮ ಮಾಡಿದ ಕೂಡಲೇ ಪಾಪಗಳಿಂದ ಮುಕ್ತನಾಗುತ್ತಾನೆ.

ಸತೀನಾಂ ಚ ಪತಿಃ ಸಾಧುಃ ಪುತ್ರೋ ನಿಶ್ಶಂಕ ಏವ ಚ ।
ನ ಹಿ ತಸ್ಯ ಭಯಂ ಕಿಂಚಿದ್ ದೇವೇಭ್ಯಶ್ಚ ಯಮಾದಪಿ ॥

(ಬ್ರಹ್ಮವೈವರ್ತ. ಶ್ರೀಕೃಷ್ಣ ೮೩/೧೨೪)

'ಸತೀ ಸ್ತ್ರೀಯರ ಪತಿ ಸಾಧು ಸ್ವಭಾವದವನಾಗಿರುತ್ತಾನೆ ಅವರ ಮಗನೂ ಸಹ ನಿರ್ಭಯನಾಗಿರುತ್ತಾನೆ. ಅವನಿಗೆ ದೇವತೆಗಳಿಂದಾಗಲೀ ಸ್ವಯಂ ಯಮನಿಂದಾಗಲೀ ಯಾವ ಭಯವೂ ಇರುವುದಿಲ್ಲ'.

ಈ ವಿಷಯದಲ್ಲಿ ಪತಿವ್ರತೆ ಸಾವಿತ್ರಿಯ ಕಥೆ ಪ್ರಸಿದ್ಧವಾಗಿದೆ. ಆದ್ದರಿಂದ ಅದನ್ನು ಅನುಸರಿಸಬೇಕು.

❑❑

22. ಪತಿವ್ರತಾ ಸಾವಿತ್ರೀ

ಮದ್ರ ದೇಶದಲ್ಲಿ ಅಶ್ವಪತಿ ಎಂಬ ಹೆಸರಿನ ದೊಡ್ಡ ಧಾರ್ಮಿಕ ಮತ್ತು ಬ್ರಾಹ್ಮಣ ಭಕ್ತ ರಾಜನಿದ್ದನು. ಅವನು ಅತ್ಯಂತ ಉದಾರ ಹೃದಯದವನೂ, ಸತ್ಯ ನಿಷ್ಠನೂ, ಜಿತೇಂದ್ರಿಯನೂ, ದಾನಿಯೂ, ಚತುರನೂ, ಪ್ರಜೆಗಳಿಗೆ ಪ್ರಾಣ ದೇಶವಾಸಿಗಳಿಗೆ ಪ್ರಿಯನೂ, ಸಮಸ್ತ ಪ್ರಾಣಿಗಳ ಹಿತೈಷಿಯೂ ಮತ್ತು ಕ್ಷಮಾಶೀಲನೂ ಆಗಿದ್ದನು. ಅವನು ಸಾವಿತ್ರೀದೇವಿಯ ಉಪಾಸನೆ ಮಾಡಿದ್ದರಿಂದ ಅವಳ ಕೃಪೆಯಿಂದ ಅವನಿಗೆ ಒಬ್ಬ ಕನ್ಯೆಯು ಜನಿಸಿದಳು. ಅವಳ ಹೆಸರನ್ನು ರಾಜನೂ ಪುರೋಹಿತರೂ 'ಸಾವಿತ್ರೀ' ಯೆಂದೇ ಇಟ್ಟರು. ಅವಳು ಪ್ರಾಪ್ತ ವಯಸ್ಕಳಾದಾಗ ಅವಳ ಗುಣಗಳಿಗೆ ಅನುರೂಪನಾದ ವರನು ಸಿಕ್ಕಲಿಲ್ಲ.

ರಾಜಾ ಅಶ್ವಪತಿಯು ಒಂದು ದಿನ ಮಗಳಿಗೆ ಹೇಳಿದನು – 'ಮಗು ! ನೀನು ನಿನಗೆ ಯೋಗ್ಯವಾದ ವರನನ್ನು ಸ್ವತಃ ನೀನೇ ಹುಡುಕಿಕೋ; ಏಕೆಂದರೆ "ಹೆಣ್ಣುಮಕ್ಕಳು ಮದುವೆಗೆ ಯೋಗ್ಯರಾದಾಗ ಕನ್ಯಾದಾನ ಮಾಡದೇ ಹೋದರೆ ಆ ತಂದೆಯು ನಿಂದನೀಯನು, ಋತುಕಾಲದಲ್ಲಿ ಪತ್ನೀ ಸಮಾಗಮ ಮಾಡದೇ ಇರುವ ಪತಿಯು ನಿಂದನೀಯನು, ತಂದೆಯು ತೀರಿ ಹೋಗಿ ತಾಯಿಯು ವಿಧವೆಯಾದರೆ ಅವಳ ಪಾಲನೆ-ಸೇವೆಯನ್ನು ಮಾಡದ ಪುತ್ರನು ನಿಂದನೀಯ"ನೆಂದು ಧರ್ಮಶಾಸ್ತ್ರದಲ್ಲಿ ಹೇಳಿದೆ. ಆದ್ದರಿಂದ ನೀನು ಶೀಘ್ರವಾಗಿ ವರನನ್ನು ಹುಡುಕಿಕೋ', ಪುತ್ರಿಗೆ ಹೀಗೆ ಹೇಳಿ ಅವನು ತನ್ನ ವೃದ್ಧ ಮಂತ್ರಿಗಳಿಗೆ ಸೈನಿಕರ ಜೊತೆ ಸಾವಿತ್ರಿಯ ಜೊತೆ ತೆರಳಲು ಆಜ್ಞಾಪಿಸಿದನು.

ತಪಸ್ವಿನೀ ಸಾವಿತ್ರಿಯು ಸ್ವಲ್ಪ ಸಂಕೋಚದಿಂದಲೇ ತಂದೆಯ ಆಜ್ಞೆಯಂತೆ, ಅವನ ಚರಣಗಳಿಗೆ ನಮಸ್ಕರಿಸಿ, ಚಿನ್ನದ ರಥದಲ್ಲಿ ಕುಳಿತು, ವೃದ್ಧ ಮಂತ್ರಿಗಳ ಜೊತೆಯಲ್ಲಿ ವರಶೋಧನೆಗೆ ಹೊರಟಳು. ಅವಳು ರಾಜರ್ಷಿಗಳಿದ್ದ ರಮಣೀಯ ತಪೋವನಗಳಿಗೆ ಹೋದಳು. ಆ ಮಾನಿನಿಯು ವೃದ್ಧ ಪುರುಷರ ಚರಣಗಳಿಗೆ ವಂದಿಸಿ ಆಶೀರ್ವಾದ ಪಡೆದುಕೊಳ್ಳುತ್ತಾ ವನ-ವನಗಳಲ್ಲಿ ವಿಹರಿಸುತ್ತಿದ್ದಳು.

ಒಂದು ದಿನ ಮಹಾರಾಜಾ ಅಶ್ವಪತಿಯು ತನ್ನ ಸಭೆಯಲ್ಲಿ ಕುಳಿತು ನಾರದರ ಜೊತೆ ಸಂಭಾಷಿಸುತ್ತಿದ್ದನು. ಅದೇ ಸಮಯದಲ್ಲಿ ಸಾವಿತ್ರಿಯು ಮಂತ್ರಿಗಳ ಜೊತೆ ಸಮಸ್ತ ತೀರ್ಥಕ್ಷೇತ್ರಗಳನ್ನು ಸಂದರ್ಶಿಸಿ ತನ್ನ ತಂದೆಯ ಮನೆಗೆ ಬಂದಳು. ತಂದೆಗೂ, ನಾರದರಿಗೂ ನಮಸ್ಕರಿಸಿದಳು. ಅವಳನ್ನು ನೋಡಿ ನಾರದರು ಹೇಳಿದರು – "ರಾಜನ್ ! ಇವಳು ಯುವತಿಯಾಗಿದ್ದಾಳೆ. ಆದರೂ ಇವಳ ವಿವಾಹವನ್ನು ಏಕೆ ಮಾಡುತ್ತಿಲ್ಲ?" ಅಶ್ವಪತಿಯು ಹೇಳಿದನು– "ಇವಳನ್ನು ನಾನು ವರ ಶೋಧಿಸಿಕೊಂಡು ಬರುವುದಕ್ಕೇ ಕಳಿಸಿದ್ದೆ. ಈ ದಿನವೇ ಹಿಂದಿರುಗಿ ಬಂದಿದ್ದಾಳೆ. ಇವಳು ಯಾರನ್ನು ವರಿಸಿದ್ದಾಳೆಂಬುದನ್ನು ಇವಳನ್ನೇ ಕೇಳಿ". ನಿನ್ನ ವೃತ್ತಾಂತವನ್ನು ತಿಳಿಸು ಎಂದು ಹೇಳಿದ ಮಾತಿಗೆ ಸಾವಿತ್ರಿಯು ಹೇಳಿದಳು – "ಶಾಲ್ವ ದೇಶದ ರಾಜರಾದ ದ್ಯುಮತ್ಸೇನರು ರಾಜ್ಯವನ್ನು ಕಳೆದುಕೊಂಡು ವನಕ್ಕೆ ಹೋಗಿ ತಪಸ್ಸು

ಮಾಡುತ್ತಿದ್ದಾರೆ. ಅವರ ಪುತ್ರ ಸತ್ಯವಾನ್ ನನಗೆ ಅನುರೂಪನಾಗಿದ್ದಾರೆ. ನಾನು ಮನಸ್ಸಿನಲ್ಲಿ ಅವರನ್ನೇ ನನ್ನ ಪತಿಯೆಂದು ವರಿಸಿದ್ದೇನೆ'.

ರಾಜನು ನಾರದರನ್ನು ಕೇಳಿದನು – 'ರಾಜಕುಮಾರ ಸತ್ಯವಾನನು ತೇಜಸ್ವಿಯೂ, ಬುದ್ಧಿವಂತನೂ, ಕ್ಷಮಾಶೀಲನೂ ಮತ್ತು ಶೂರವೀರನೂ ಆಗಿದ್ದಾನಲ್ಲವೇ?' ನಾರದರು ಹೇಳಿದರು – ಆ ದ್ಯುಮತ್ಸೇನನ ಪುತ್ರನು ಸೂರ್ಯನಂತೆ ತೇಜಸ್ವಿಯೂ, ಬೃಹಸ್ಪತಿಯಂತೆ ಬುದ್ಧಿವಂತನೂ, ಇಂದ್ರನಂತೆ ವೀರನೂ, ಪೃಥ್ವಿಯಂತೆ ಕ್ಷಮಾಶೀಲನೂ, ರಂತಿದೇವನಂತೆ ದಾನಶೀಲನೂ, ಉಶೀನರನ ಮಗ ಶಿಬಿಯಂತೆ ಶರಣಾಗತ ರಕ್ಷಕ, ಬ್ರಹ್ಮಣ್ಯ ಮತ್ತು ಸತ್ಯವಾದಿಯೂ, ಯಯಾತಿಯಂತೆ ಉದಾರನೂ, ಚಂದ್ರನಂತೆ ಪ್ರಿಯದರ್ಶನನೂ ಮತ್ತು ಅಶ್ವಿನಿ ಕುಮಾರರಂತೆ ಅದ್ವಿತೀಯ ರೂಪವಂತನೂ ಆಗಿದ್ದಾನೆ. ಅವನು ಜಿತೇಂದ್ರಿಯನೂ, ಮೃದು ಸ್ವಭಾವ ದವನೂ, ಶೂರವೀರನೂ, ಇನ್ನೊಬ್ಬರ ಜೊತೆ ಕೂಡಿಕೊಳ್ಳುವ ಸ್ವಭಾವದವನೂ, ಈರ್ಷ್ಯಾ ಹೀನನೂ, ಲಜ್ಜಾಶೀಲನೂ, ತೇಜಸ್ವಿಯೂ ಆಗಿರುತ್ತಾನೆ'. ಅಶ್ವಪತಿಯು ಹೇಳಿದನು – ತಾವು ಅವನಲ್ಲಿರುವ ಎಲ್ಲ ಸಂಪನ್ನ ಗುಣಗಳನ್ನು ಹೇಳಿದಿರಿ. ಏನಾದರೂ ದೋಷವಿದ್ದರೆ ಅದನ್ನು ಹೇಳಿ. ನಾರದರು ಹೇಳಿದರು – "ಅವನಲ್ಲಿ ಒಂದು ದೋಷವಿದೆ. ಅದರಿಂದ ಅವನ ಎಲ್ಲ ಗುಣಗಳೂ ಮಸಕಾಗಿವೆ. ಅದೇನೆಂದರೆ, ಇಂದಿಗೆ ಒಂದು ವರ್ಷ ಕಳೆದ ಮೇಲೆ ಸತ್ಯವಾನನು, ಮೃತ್ಯು ವಶನಾಗುತ್ತಾನೆ".

ರಾಜಾ ಅಶ್ವಪತಿಯು ಮಗಳು ಸಾವಿತ್ರಿಗೆ ಹೇಳಿದನು – "ಮಗು ! ನೀನು ಪುನಃ ಹೋಗಿ ಬೇರೆ ವರನನ್ನು ಹುಡುಕಿಕೋ. ಅದಕ್ಕೆ ಸಾವಿತ್ರಿಯು ಹೇಳಿದಳು – "ಅಪ್ಪ ಸಹೋದರರ ಹಿಸ್ಸೆಯನ್ನು ಹಂಚಿಕೊಳ್ಳುವುದು ಒಂದೇ ಬಾರಿ ನಡೆಯುತ್ತದೆ, ಕನ್ಯಾದಾನವೂ ಸಹ ಒಂದು ಬಾರಿ ಮಾತ್ರ ನಡೆಯುತ್ತದೆ. "ನಾನು ಕೊಟ್ಟೆ" ಎನ್ನುವ ಸಂಕಲ್ಪವೂ ಸಹ ಒಂದು ಬಾರಿ ಮಾತ್ರ ಮಾಡಲಾಗುತ್ತದೆ. ಈ ಮೂರು ಸಹ ಒಂದೊಂದು ಬಾರಿ ಮಾತ್ರ ಆಗುತ್ತವೆ. ಈಗ ನಾನು ಯಾರನ್ನೂ ಮೊದಲ ಬಾರಿ ಮನಸ್ಸಿನಲ್ಲಿ ವರಿಸಿರುವೆನೋ ಅವರು ದೀರ್ಘಾಯುವಾಗಿರಲಿ ಅಥವಾ ಅಲ್ಪಾಯುವಾಗಿರಲಿ ಹಾಗೂ ಗುಣವಂತ ನಾಗಿರಲಿ ಅಥವಾ ಗುಣಹೀನನಾಗಿರಲಿ, ಅವರೇ ನನ್ನ ಪತಿದೇವರು. ಬೇರೆ ಯಾರನ್ನು ನಾನು ವರಿಸುವುದಿಲ್ಲ. ಮೊದಲು ಮನದಲ್ಲಿ ನಿಶ್ಚಯಿಸಿ ಅನಂತರ

ವಾಣಿಯಿಂದ ಹೇಳಿ ಆಮೇಲೆ ಕರ್ಮದಿಂದ ಅದನ್ನು ಮಾಡಬೇಕು. ಆದ್ದರಿಂದ ಇದರಲ್ಲಿ ನನಗೆ ನನ್ನ ಮನಸ್ಸೇ ಪ್ರಮಾಣವಾಗಿದೆ''.*

ನಾರದರು ಹೇಳಿದರು – ''ರಾಜನ್ ! ಸಾವಿತ್ರಿಯ ಬುದ್ಧಿಯು ನಿಶ್ಚಯಾತ್ಮಕವಾಗಿದೆ. ಇವಳನ್ನು ಯಾವ ರೀತಿಯಿಂದಲೂ ಈ ಧರ್ಮದಿಂದ ವಿಚಲಿತಳನ್ನಾಗಿ ಮಾಡಲಾಗುವುದಿಲ್ಲ. ಆದ್ದರಿಂದ ಇವಳನ್ನು ಸತ್ಯವಾನನಿಗೆ ಕೊಟ್ಟು ಮದುವೆ ಮಾಡುವುದೇ ಉಚಿತವೆಂದು ತೋರುತ್ತದೆ'. ಇಷ್ಟು ಹೇಳಿ ನಾರದರು ಹೊರಟುಹೋದರು.

ನಾರದರ ಆಜ್ಞೆಯಂತೆ ಅಶ್ವಪತಿ ರಾಜನು ವೈವಾಹಿಕ ಸಾಮಗ್ರಿಗಳನ್ನು ತೆಗೆದುಕೊಂಡು ಬ್ರಾಹ್ಮಣರು ಹಾಗೂ ಸಾವಿತ್ರಿಯೊಡನೆ ದ್ಯುಮತ್ಸೇನನ ಆಶ್ರಮಕ್ಕೆ ಹೋದನು. ಅಲ್ಲಿ ಅವನು ನೇತ್ರ ಹೀನನಾದ ದ್ಯುಮತ್ಸೇನನು ಸಾಲವೃಕ್ಷದ ಕೆಳಗೆ ಕುಶಾಸನದ ಮೇಲೆ ಕುಳಿತಿರುವುದನ್ನು ನೋಡಿದನು. ಯಥಾ ಯೋಗ್ಯವಾಗಿ ಅವನನ್ನು ಪೂಜಿಸಿ ವಿನೀತ ಶಬ್ದಗಳಿಂದ ತನ್ನ ಪರಿಚಯವನ್ನು ಹೇಳಿಕೊಂಡನು. ರಾಜಾ ದ್ಯುಮತ್ಸೇನನು ಅರ್ಘ್ಯ ಮತ್ತು ಆಸನಾದಿಗಳಿಂದ ಸತ್ಕರಿಸಿ ಕೇಳಿದನು – ''ಹೇಳಿ, ಯಾವ ಕಾರಣದಿಂದ ಇಲ್ಲಿಗೆ ದಯಮಾಡಿಸಿದ್ದೀರಿ?'' ಆಗ ಅಶ್ವಪತಿಯು ಹೇಳಿದನು – ''ರಾಜರ್ಷಿ ! ನನಗೆ ಸಾವಿತ್ರಿಯೆಂಬ ಈ ರೂಪವತಿ ಕನ್ಯೆ ಇದ್ದಾಳೆ. ಇವಳನ್ನು ತಾವು ಧರ್ಮಾನುಸಾರವಾಗಿ ಸೊಸೆಯಾಗಿ ಸ್ವೀಕರಿಸಿರಿ''.

ದ್ಯುಮತ್ಸೇನನು ಹೇಳಿದನು – ''ನಾವು ರಾಜ್ಯ ಭ್ರಷ್ಟರಾಗಿದ್ದೇವೆ. ಇಲ್ಲಿ ವನದಲ್ಲಿದ್ದು ಸಂಯಮದಿಂದ ತಪಸ್ವಿಯರ ಜೀವನವನ್ನು ನಡೆಸುತ್ತಿದ್ದೇವೆ.

---

* ಸಕೃದಂಶೋ ನಿಪತತಿ ಸಕೃತ್ ಕನ್ಯಾ ಪ್ರದೀಯತೇ ।
ಸಕೃದಾಹ ದದಾನೀತಿ ತ್ರೀಣ್ಯೇತಾನಿ ಸಕೃತ್ ಸಕೃತ್ ॥
ದೀರ್ಘಾಯುರಥವಾಲ್ಪಾಯುಃ ಸಗುಣೋ ನಿರ್ಗುಣೋಽಪಿ ವಾ ।
ಸಕೃದ್ ವೃತೋ ಮಯಾ ಭರ್ತಾ ನ ದ್ವಿತೀಯಂ ವೃಣೋಮ್ಯಹಮ್ ॥
ಮನಸಾ ನಿಶ್ಚಯಂ ಕೃತ್ವಾ ತತೋ ವಾಚಾಭಿಧೀಯತೇ ।
ಕ್ರಿಯತೇ ಕರ್ಮಣಾ ಪಶ್ಚಾತ್ ಪ್ರಮಾಣಂ ಮೇ ಮನಸ್ತತಃ ॥
(ಮಹಾ-ವನ. ೨೯೪/೨೬-೨೮)

ತಮ್ಮ ಕನ್ಯೆಯು ಈ ಎಲ್ಲ ಕಷ್ಟಗಳನ್ನೂ ಸಹಿಸಲಾರಳು''. ಅಶ್ವಪತಿಯು ಹೇಳಿದನು – ''ರಾಜನ್ ! ಸುಖ ದುಃಖಗಳು ಹೋಗುತ್ತವೆ-ಬರುತ್ತವೆ. ಈ ವಿಚಾರವನ್ನು ನಾನು ನನ್ನ ಪುತ್ರಿ ಇಬ್ಬರೂ ತಿಳಿದಿರುತ್ತೇವೆ. ನಾವು ಎಲ್ಲ ಪ್ರಕಾರವಾಗಿ ನಿಶ್ಚಯಿಸಿಕೊಂಡೇ ತಮ್ಮ ಹತ್ತಿರ ಬಂದಿರುತ್ತೇನೆ''.

ಅನಂತರ ರಾಜಾ ದ್ಯುಮತ್ಸೇನನು ಅವನ ಮಾತನ್ನು ಸ್ವೀಕರಿಸಿ, ಎಲ್ಲ ಬ್ರಾಹ್ಮಣರನ್ನೂ ಕರೆಸಿದನು. ಇಬ್ಬರು ರಾಜರೂ ವಿಧಿಪೂರ್ವಕ ವಿವಾಹ ಸಂಸ್ಕಾರವನ್ನು ನೆರವೇರಿಸಿದರು. ರಾಜಾ ಅಶ್ವಪತಿಯು ವಧೂ-ವರರಿಗೆ ಆಭೂಷಣ ಮುಂತಾದುವನ್ನು ಕೊಟ್ಟು ಸಂತೋಷದಿಂದ ತನ್ನ ಆಶ್ರಮನೆಗೆ ಹಿಂದಿರುಗಿದನು. ಆ ಸರ್ವಗುಣ ಸಂಪನ್ನ ಭಾರ್ಯೆಯನ್ನು ಪಡೆದು ಸತ್ಯವಾನನು ಸಂತುಷ್ಟನಾದನು. ತನ್ನ ಇಷ್ಟದಂತೆ ಅನುರೂಪನಾದ ಪತಿಯನ್ನು ಪಡೆದು ಸಾವಿತ್ರಿಯೂ ಆನಂದಿತಳಾದಳು.

ತಂದೆಯು ಹೊರಟು ಹೋದ ಮೇಲೆ ಸಾವಿತ್ರಿಯು ತನ್ನ ಎಲ್ಲ ರಾಜಯೋಗ್ಯ ವಸ್ತ್ರಾಭೂಷಣಗಳನ್ನು ತೆಗೆದಿಟ್ಟು ವಲ್ಕಲ ವಸ್ತ್ರವನ್ನು ಧರಿಸಿದಳು. ಅವಳ ಸೇವೆ, ಗುಣ, ವಿನಯ, ಸಂಯಮ ಮತ್ತು ಎಲ್ಲರ ಮನಸ್ಸಿಗೂ ಇಷ್ಟವಾಗುವಂತೆ ಕೆಲಸ ಮಾಡುವುದನ್ನು ಕಂಡು ಆಶ್ರಮದಲ್ಲಿದ್ದವರೆಲ್ಲರೂ ಸಂತುಷ್ಟರಾದರು.

ಅವಳು ಸೇವೆ ಮತ್ತು ವಸ್ತ್ರಾಭೂಷಣಗಳಿಂದ ಅತ್ತೆಯನ್ನೂ, ಹಿತಮಿತ ಮಾತುಗಳಿಂದ ದೇವತೆಗಳಿಗೆ ಸರಿ ಸಮಾನವಾಗಿ ಸತ್ಕರಿಸಿ ಮಾವನನ್ನೂ ಸಂತುಷ್ಟಗೊಳಿಸಿದಳು. ಇದೇ ರೀತಿಯಾಗಿ ಮಧುರ ವಚನಗಳಿಂದಲೂ, ಕಾರ್ಯಕುಶಲತೆಯಿಂದಲೂ, ಶಾಂತಿ ಮತ್ತು ಸೇವೆಯಿಂದಲೂ ಪತಿದೇವನು ಸಂತೋಷ ಹೊಂದುವಂತೆ ಮಾಡಿದಳು. ಹೀಗೆ ಯಾವ ಕೊರತೆಯೂ ಇಲ್ಲದಂತೆ ಎಲ್ಲರ ಸೇವೆಯನ್ನು ಮಾಡುತ್ತಿದ್ದಳು.

ಹೀಗೆ ಬಹಳ ದಿನಗಳು ಕಳೆಯಿತು. ಕೊನೆಗೆ ಸತ್ಯವಾನನ ಮರಣದ ಸಮಯವೂ ಬಂದಿತು. ನಾಲ್ಕು ದಿನಗಳು ಉಳಿದಿರುವಾಗ ಸಾವಿತ್ರಿಯು ಮೂರು ದಿನಗಳ ವ್ರತವನ್ನು ಆಚರಿಸಿದಳು. ನಾಲ್ಕನೇ ದಿನ ಸೂರ್ಯೋದಯ ವಾಗುವುದರೊಳಗೆ ಎಲ್ಲ ಆಹ್ನಿಕ ಕೃತ್ಯಗಳನ್ನು ಮುಗಿಸಿದಳು. ಎಲ್ಲ ಬ್ರಾಹ್ಮಣ

ರಿಗೂ, ಹಿರಿಯರಿಗೂ, ವೃದ್ಧರಿಗೂ, ಅತ್ತೆ ಮಾವನಿಗೂ ನಮಸ್ಕರಿಸಿದಳು. ಸತ್ಯವಾನನು ಹೆಗಲಿನ ಮೇಲೆ ಕೊಡಲಿಯನ್ನಿಟ್ಟುಕೊಂಡು ವನದಿಂದ ಸಮಿತ್ತು ಗಳನ್ನು ತರಲು ಸಿದ್ಧನಾದಾಗ ಸಾವಿತ್ರಿಯು ಹೇಳಿದಳು – 'ಈ ದಿನ ತಮ್ಮ ಜೊತೆ ನಾನೂ ಬರುತ್ತೇನೆ'.

ಸತ್ಯವಾನನು ಹೇಳಿದನು – "ಪ್ರಿಯೆ ! ನೀನು ಉಪವಾಸ ಮಾಡ್ದಿದ್ದರಿಂದ ಹಸಿದಿರುವೆ. ಅದೂ ಅಲ್ಲದೆ ಕಾಡಿನ ರಸ್ತೆ ದುರ್ಗಮವಾಗಿರುತ್ತದೆ'. ಸಾವಿತ್ರಿಯು ಹೇಳಿದಳು – "ಉಪವಾಸದಿಂದ ನಾನು ಆಯಾಸ ಹೊಂದಿಲ್ಲ. ನನ್ನ ಮನಸ್ಸಿನಲ್ಲಿ ಉತ್ಸಾಹ ತುಂಬಿದೆ". ಸತ್ಯವಾನನು ಹೇಳಿದನು – "ಒಳ್ಳೆಯದು, ನಿನಗೆ ಬರಲು ಉತ್ಸಾಹವಿದ್ದರೆ ಬಾ. ಅದರೆ ತಂದೆ-ತಾಯಿಗಳ ಅಪ್ಪಣೆ ಪಡೆದುಕೊಂಡು ಬಾ".

ಆಗ ಸಾವಿತ್ರಿಯು ಅತ್ತೆ-ಮಾವನವರಿಗೆ ನಮಸ್ಕರಿಸಿ ಹೇಳಿದಳು – "ನನ್ನ ಸ್ವಾಮಿ ವನಕ್ಕೆ ಹೋಗುತ್ತಿದ್ದಾರೆ. ತಾವು ಅನುಮತಿ ಕೊಟ್ಟರೆ ಈ ದಿನ ನಾನೂ ಅವರ ಜೊತೆ ಹೋಗುತ್ತೇನೆ". ಈ ಮಾತನ್ನು ಕೇಳಿ ದ್ಯುಮತ್ಸೇನನು ಹೇಳಿದನು – 'ನನ್ನ ಆಶ್ರಮಕ್ಕೆ ಬಂದ ಮೇಲೆ ಎಂದೂ ನೀನು ಯಾವುದನ್ನು ಯಾಚಿಸಿರುವುದು ನನ್ನ ಸ್ಮರಣೆಗೆ ಬರುತ್ತಿಲ್ಲ. ಆದ್ದರಿಂದ ಮಗು ! ನೀನು ಹೋಗಬಹುದು'. ಈ ರೀತಿ ಅತ್ತೆ-ಮಾವನ ಆಜ್ಞೆ ಪಡೆದು ಸಾವಿತ್ರಿಯು ತನ್ನ ಪತಿ ಸತ್ಯವಾನನ ಜೊತೆ ಕಾಡಿಗೆ ಹೊರಟಳು.

ವೀರ ಸತ್ಯವಾನನು ಮೊದಲು ತನ್ನ ಪತ್ನಿಯ ಜೊತೆ ಹಣ್ಣುಗಳನ್ನು ಆರಿಸಿ ಬುಟ್ಟಿಗೆ ತುಂಬಿದನು. ಅನಂತರ ಸೌದೆಯನ್ನು ಕಡಿಯಲು ಪ್ರಾರಂಭಿಸಿದನು. ಶ್ರಮದ ಕಾರಣದಿಂದ ಅವನ ತಲೆಯಲ್ಲಿ ನೋವು ಕಾಣಿಸಿಕೊಂಡಿತು. ಅವನು ಸಾವಿತ್ರಿಯ ಹತ್ತಿರ ಬಂದು ಹೇಳಿದನು – "ನನಗೆ ತಲೆ ನೋಯುತ್ತಿದೆ. ಶರೀರವೆಲ್ಲವೂ ತಾಪದಿಂದ ಉರಿಯುತ್ತಿದೆ. ನನಗೆ ಮಲಗಬೇಕು ಎನ್ನಿಸುತ್ತದೆ". ಇದನ್ನು ಕೇಳಿ ಸಾವಿತ್ರಿಯು ಪತಿಯ ಸಮೀಪ ಬಂದು ಅವನ ತಲೆಯನ್ನು ತೊಡೆಯ ಮೇಲಿಟ್ಟುಕೊಂಡು ನೆಲದ ಮೇಲೆ ಕುಳಿತಳು. ಇಷ್ಟರಲ್ಲಿಯೇ ಅಲ್ಲಿ ಸೂರ್ಯನಂತೆ ತೇಜಸ್ವಿ, ಕಿರೀಟಧಾರಿ, ಕಪ್ಪು ದೇಹವುಳ್ಳ, ಕೆಂಪು ವಸ್ತ್ರ ಧರಿಸಿದ್ದ ಕೈಯಲ್ಲಿ ಪಾಶವನ್ನು ಹಿಡಿದಿದ್ದ ಒಬ್ಬ ಪುರುಷನನ್ನು ಅವಳು ನೋಡಿದಳು. ಸಾವಿತ್ರಿ ಕೇಳಿದಳು – "ತಾವು ಯಾರು? ತಮಗೆ ಏನು ಬೇಕು?"

ಯಮರಾಜನು ಹೇಳಿದನು – "ಸಾವಿತ್ರೀ ! ನಾನು ಯಮರಾಜ. ನಿನ್ನ ಪತಿಯ ಆಯಸ್ಸು ಮುಗಿದು ಹೋಗಿದೆ. ಆದ್ದರಿಂದ ನಾನು ಇವನನ್ನು ಕರೆದುಕೊಂಡು ಹೋಗುತ್ತೇನೆ". ಸಾವಿತ್ರಿಯು ಹೇಳಿದಳು – "ಭಗವಾನ್ ! ಮನುಷ್ಯರನ್ನು ಕರೆದೊಯ್ಯಲು ತಮ್ಮ ದೂತರು ಬರುತ್ತಾರೆ. ಇಲ್ಲಿಗೆ ತಾವೇ ಸ್ವತಃ ಏಕೆ ಬಂದಿದ್ದೀರಿ?" ಯಮನು ಹೇಳಿದನು – "ಸತ್ಯವಾನನು ಧರ್ಮಾತ್ಮ ಮತ್ತು ಗುಣಸಾಗರನಾಗಿದ್ದಾನೆ. ಇವನನ್ನು ನನ್ನ ದೂತರು ಕರೆದೊಯ್ಯುವುದು ಯೋಗ್ಯವಲ್ಲ. ಇದರಿಂದ ನಾನೇ ಬಂದಿದ್ದೇನೆ.'

ಇಷ್ಟು ಹೇಳಿ ಯಮನು ಸತ್ಯವಾನನ ಶರೀರದಿಂದ ಅಂಗುಷ್ಠಪ್ರಮಾಣದಷ್ಟು ಸೂಕ್ಷ್ಮ ಶರೀರಧಾರಿಯಾದ ಜೀವಾತ್ಮನನ್ನು ಕಸಿದುಕೊಂಡು ದಕ್ಷಿಣ ದಿಕ್ಕಿಗೆ ಹೊರಟನು. ಸಾವಿತ್ರಿಯೂ ಅವನ ಹಿಂದೆಯೇ ಹೊರಟಳು. ಅದನ್ನು ನೋಡಿ ಯಮನು ಹೇಳಿದನು – "ಸಾವಿತ್ರೀ ! ನೀನು ಹಿಂದಕ್ಕೆ ಹೋಗು. ಇವನ ಔರ್ಧ್ವ ದೈಹಿಕ ಸಂಸ್ಕಾರವನ್ನು ಮಾಡು. ನೀನು ಪತಿಸೇವೆಯ ಋಣದಿಂದ ಮುಕ್ತಳಾಗಿರುವೆ." ಸಾವಿತ್ರಿ ಹೇಳಿದಳು – "ನನ್ನ ಪತಿದೇವರು ಎಲ್ಲಿಗೆ ಹೋಗುವರೋ ನಾನೂ ಅಲ್ಲಿಗೆ ಹೋಗಬೇಕಾದುದು ನನ್ನ ಧರ್ಮ. ತಪಸ್ಸು, ಗುರುಭಕ್ತಿ, ಪತಿಪ್ರೇಮ, ಪ್ರತಾಚರಣೆ ಮತ್ತು ತಮ್ಮ ಕೃಪೆಯಿಂದ ನನ್ನ ಗತಿಯು ಎಲ್ಲಿಯೂ ನಿಲ್ಲುವುದಿಲ್ಲ."

ಯಮನು ಹೇಳಿದನು – "ಸಾವಿತ್ರೀ ! ನಿನ್ನ ಯುಕ್ತಾಯುಕ್ತ ಮಾತುಗಳಿಂದ ನಾನು ಸಂತುಷ್ಟನಾಗಿದ್ದೇನೆ. ಸತ್ಯವಾನನ ಜೀವವನ್ನು ಬಿಟ್ಟು ಯಾವುದಾದರೂ ವರವನ್ನು ಕೇಳು". ಸಾವಿತ್ರಿಯು ಹೇಳಿದಳು – "ನನ್ನ ಮಾವ ರಾಜ್ಯ ಭ್ರಷ್ಟರಾಗಿ ವನದಲ್ಲಿದ್ದಾರೆ. ಅವರಿಗೆ ಕಣ್ಣೂ ಸಹ ಕಾಣಿಸದಾಗಿದೆ. ತಮ್ಮ ಕೃಪೆಯಿಂದ ಅವರಿಗೆ ಕಣ್ಣುಗಳು ಬರಲಿ, ಅವರು ಶಕ್ತಿವಂತರೂ ತೇಜಸ್ವಿಗಳೂ ಆಗಲಿ". ಯಮನು ಹೇಳಿದನು – "ನೀನು ಕೇಳಿದ್ದೆಲ್ಲವೂ ನಿನಗೆ ಪ್ರಾಪ್ತವಾಗುತ್ತದೆ. ಈಗ ನೀನು ಹಿಂದಿರುಗು. ನಿನಗೆ ಹೆಚ್ಚು ಶ್ರಮ ವಾಗುವುದು". ಸಾವಿತ್ರಿಯು ಹೇಳಿದಳು – "ಪತಿದೇವರ ಹತ್ತಿರವಿದ್ದರೆ ನನಗೆ ಶ್ರಮವೇಕೆ ಆಗುತ್ತದೆ. ಎಲ್ಲಿ ನನ್ನ ಪ್ರಾಣನಾಥರು ಇರುವರೋ, ಅಲ್ಲಿಯೇ ನಾನಿರುತ್ತೇನೆ. ಇದೂ ಅಲ್ಲದೆ ಇನ್ನೊಂದು ವಿಚಾರವೇನೆಂದರೆ, ಸತ್ಪುರುಷರ ಒಂದು ಬಾರಿಯ ಸಮಾಗಮ

ಅತ್ಯಂತ ಇಷ್ಟವಾಗಿರುತ್ತದೆ. ಅದಕ್ಕಿಂತ ಹೆಚ್ಚು ಅವರಲ್ಲಿ ಪ್ರೇಮವುಂಟಾಗುವುದು. ಸಂತರ ಸಮಾಗಮವು ಎಂದೂ ನಿಷ್ಫಲವಾಗುವುದಿಲ್ಲ. ಆದ್ದರಿಂದ ಯಾವಾಗಲೂ ಸತ್ಪುರುಷರ ಜೊತೆಯಲ್ಲಿಯೇ ಇರಬೇಕು".

ಯಮನು ಹೇಳಿದನು – 'ಸಾವಿತ್ರೀ ! ನೀನು ಹೇಳಿದ ಹಿತವಾದ ಮಾತುಗಳು ನನಗೆ ಹಿಡಿಸಿವೆ. ಆದ್ದರಿಂದ ಈ ಸತ್ಯವಾನನ ಪ್ರಾಣವೊಂದನ್ನು ಬಿಟ್ಟು ನೀನು ಎರಡನೇ ವರವನ್ನು ಕೇಳು'. ಸಾವಿತ್ರಿಯು ಹೇಳಿದಳು – 'ನನ್ನ ಮಾವನ ರಾಜ್ಯವನ್ನು ಕಿತ್ತುಕೊಳ್ಳಲಾಗಿದೆ. ಅದು ಅವರಿಗೆ ಮತ್ತೆ ದೊರೆಯಲಿ. ಅವರು ತಮ್ಮ ಧರ್ಮದಲ್ಲಿ ಸ್ಥಿರವಾಗಿರಲಿ'.

ಯಮನು ಹೇಳಿದನು – 'ಹಾಗೆಯೇ ಆಗಲಿ, ನೀನು ಈಗ ಹೋಗ'. ಸಾವಿತ್ರಿಯು ಹೇಳಿದಳು – "ದೇವ ! ಈ ಎಲ್ಲ ಪ್ರಜೆಗಳ ನಿಯಮನ ನೀವು ಮಾಡುತ್ತಿರುವಿರಿ. ಇದರಿಂದಲೇ ನಿಮಗೆ ಯಮ ಎನ್ನುವ ಹೆಸರು ಬಂದಿದೆ. ಕಾಯಾ ವಾಚಾ ಮನಸಾ ಸಮಸ್ತ ಪ್ರಾಣಿಗಳಲ್ಲಿ ಸಮಾನ ದೃಷ್ಟಿಯಿಂದಿರುವುದು, ಕೃಪೆ ಇಡುವುದು ಮತ್ತು ದಾನ ಮಾಡುವುದು ಇವೆಲ್ಲವೂ ಸತ್ಪುರುಷರಲ್ಲಿರುವ ಸನಾತನ ಧರ್ಮವಾಗಿದೆ".

ಯಮನು ಹೇಳಿದನು – "ಕಲ್ಯಾಣೀ ! ನಿನ್ನ ಮಾತುಗಳು ನನಗೆ ಬಹು ಪ್ರಿಯವಾಗಿವೆ. ನೀನು ಸತ್ಯವಾನನ ಜೀವವೊಂದನ್ನು ಬಿಟ್ಟು ಮೂರನೆಯ ವರವನ್ನು ಕೇಳು". ಸಾವಿತ್ರಿಯು ಹೇಳಿದಳು – "ನನ್ನ ತಂದೆ ಅಶ್ವಪತಿ ಪುತ್ರ ಹೀನರಾಗಿದ್ದಾರೆ. ಅವರಿಗೆ ನೂರು ಜನ ಔರಸ ಪುತ್ರರಾಗಲಿ". ಯಮನು ಹೇಳಿದನು ನಿನ್ನ ತಂದೆಗೆ ನೂರು ಪುತ್ರರಾಗುತ್ತಾರೆ. ಈಗ ನೀನು ಹಿಂದಿರುಗು. ಬಹಳ ದೂರ ಬಂದಿದ್ದೀಯ. ಸಾವಿತ್ರಿಯು ಹೇಳಿದಳು – "ಪತಿದೇವನ ಸನ್ನಿಧಿಯಲ್ಲಿರುವುದರಿಂದ ನನಗೆ ದೂರವೆಂದು ತೋರುತ್ತಿಲ್ಲ. ತಾವು ಶತ್ರು-ಮಿತ್ರರೆಂಬ ಭೇದವಿಲ್ಲದೆ ಎಲ್ಲರಿಗೂ ಸಮಾನವಾಗಿ ನ್ಯಾಯಕೊಡುತ್ತೀರಿ. ಇದರಿಂದ ಎಲ್ಲ ಪ್ರಜೆಗಳು ಧರ್ಮವನ್ನಾಚರಿಸುತ್ತಾರೆ ಹಾಗೂ ತಮ್ಮನ್ನು ಧರ್ಮರಾಜರೆಂದು ಕರೆಯುತ್ತಾರೆ. ಇದೂ ಅಲ್ಲದೆ, ಸುಹೃದಯ ಇರುವುದರಿಂದ ತಮ್ಮಂತಹ ಸತ್ಪುರುಷರ ಮೇಲೆ ಜನರು ಸ್ವತಃ ತಮ್ಮ ಮೇಲೆ ಇಡುವುದಕ್ಕಿಂತಲೂ ಹೆಚ್ಚು ವಿಶ್ವಾಸ-ಪ್ರೇಮವನ್ನು ನಿಮ್ಮಲ್ಲಿಡುತ್ತಾರೆ.'

ಯಮನು ಹೇಳಿದನು – ''ಸಾವಿತ್ರೀ ! ನೀನು ಹೇಳಿದ ಮಾತುಗಳನ್ನು ನಾನು ನಿನ್ನಿಂದಲ್ಲದೆ ಬೇರೆ ಯಾರ ಮುಖದಿಂದಲೂ ಕೇಳಿರುವುದಿಲ್ಲ. ಮನಗೆ ಬಹಳ ಸಂತೋಷವಾಗಿದೆ. ಸತ್ಯವಾನನ ಜೀವವೊಂದನ್ನು ಬಿಟ್ಟು ನೀನು ಯಾವುದಾದರೂ ನಾಲ್ಕನೇ ವರವನ್ನು ಕೇಳು'' ಸಾವಿತ್ರಿಯು ಹೇಳಿದಳು – ''ಸತ್ಯವಾನನಿಂದ ನನಗೆ ನೂರು ಪುತ್ರರಾಗಲಿ'' ಯಮನು ಹೇಳಿದನು – ''ನಿನಗೂ ನೂರು ಪುತ್ರರಾಗುತ್ತಾರೆ, ರಾಜಪುತ್ರಿ, ಈಗ ನೀನು ಹಿಂದಕ್ಕೆ ಹೋಗು''. ಆಗ ಸಾವಿತ್ರಿಯು ಹೇಳಿದಳು– ''ಸತ್ಪುರುಷರ ವೃತ್ತಿಯು ನಿರಂತರವಾಗಿ ಧರ್ಮದಲ್ಲಿಯೇ ಮಗ್ನವಾಗಿರುತ್ತದೆ. ಅವರು ಯಾವಾಗಲೂ ದುಃಖಿತರಾಗಲೀ ಅಥವಾ ವ್ಯಥಿತರಾಗಲೀ ಆಗುವುದಿಲ್ಲ. ಈ ಸನಾತನ ಧರ್ಮವು ಸತ್ಪುರುಷರಿಂದ ಸೇವಿತವಾಗಿದೆ. ಇದನ್ನು ತಿಳಿದು ಸತ್ಪುರುಷರು ಪರೋಪಕಾರ ಮಾಡುತ್ತಾರೆ. ಪ್ರತ್ಯುಪಕಾರವನ್ನಾಗಲೀ ಪ್ರತಿಫಲವನ್ನಾಗಲೀ ಅವರು ಬಯಸುವುದಿಲ್ಲ''.

ಯಮನು ಹೇಳಿದನು – ''ಪತಿವ್ರತೇ ! ನೀನು ಗಂಭೀರ ಅರ್ಥದಿಂದ ಕೂಡಿದ ಮನಸ್ಸಿಗೆ ಪ್ರಿಯವಾಗುವ ಧರ್ಮಾನುಕೂಲ ಮಾತುಗಳನ್ನು ಹೇಳುತ್ತಿರುವೆ. ನೀನು ಹೇಳಿದಷ್ಟೂ ನಿನ್ನ ಮೇಲೆ ನನಗೆ ಹೆಚ್ಚು ಹೆಚ್ಚು ಶ್ರದ್ಧೆಯುಂಟಾಗುತ್ತಿದೆ. ಈಗ ನೀನು ನನ್ನಲ್ಲಿ ಯಾವುದಾದರೊಂದು ಅನುಪಮ ವಾದ ವರವನ್ನು ಕೇಳು''. ಸಾವಿತ್ರಿಯು ಹೇಳಿದಳು – ''ದೇವ ! ತಾವು ನನಗೆ ಪುತ್ರ ಪ್ರಾಪ್ತಿಯ ವರವನ್ನು ದಯಪಾಲಿಸಿರುವಿರಿ. ಅದು ದಾಂಪತ್ಯ ಧರ್ಮ ವಿಲ್ಲದೆ ಪೂರ್ಣವಾಗಲೂ ಸಾಧ್ಯವಾಗುವುದಿಲ್ಲ. ಅದರಿಂದ ಈಗ ನನ್ನ ಪತಿಯು ಜೀವಿಸಲೆಂದು ವರವನ್ನು ಕೇಳುತ್ತೇನೆ. ಏಕೆಂದರೆ ಪತಿಯಿಲ್ಲದೆ ನಾನು ಜೀವಿಸ ಲಾರೆನು. ತಾವು ನನಗೆ ನೂರು ಪುತ್ರರಾಗುವ ವರವನ್ನು ಕರುಣಿಸಿದ್ದೀರಿ. ಆದರೂ ನನ್ನ ಪತಿದೇವನನ್ನು ಕರೆದೊಯ್ಯುತ್ತಿದ್ದೀರಿ. ಆದ್ದರಿಂದ ಸತ್ಯವಾನರು ಜೀವಿಸಲೆಂದು ನಾನು ಕೇಳಿದ ವರವು ನೆರವೇರಿದರೆ ಮಾತ್ರ ತಮ್ಮ ವಚನ ಸತ್ಯವಾಗುತ್ತದೆ''.

ಈ ಮಾತನ್ನು ಕೇಳಿ ಸೂರ್ಯ ಪುತ್ರನಾದ ಯಮನು ಅತ್ಯಂತ ಪ್ರಸನ್ನನಾಗಿ 'ತಥಾಸ್ತು' ಎಂದು ಹೇಳುತ್ತಾ ಸತ್ಯವಾನನ್ನು ಬಂಧನದಿಂದ ಮುಕ್ತ ಗೊಳಿಸಿ ಹೇಳಿದನು – ''ಇವನು ಜೀವಿತನಾಗಿ ಪೂರ್ಣವಾಗಿ ನಿರೋಗಿ ಯಾಗುವನು.